ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳು) : 1995ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ-III

(ಸಭೆಯನ್ನು ಒಂದು ಘಂಟೆಯ ಕಾಲ ಮುಂದೂಡಲಾಗಿದೆ)

(ಸಭೆ ಪುನಃ 4-10 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರು ಉಪಸ್ಥಿತರಿದ್ದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಆರೋಗ್ಯ ಸಚಿವರು ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು.

ಅಧ್ಯಕ್ಷರು : ಆರೋಗ್ಯ ಸಚಿವರು ಮೇಲ್ಮನೆಗೆ ಹೋಗಿದ್ದಾರೆ. ಅವರು ಬಂದು ಇಷ್ಟು ಹೊತ್ತು ಇಲ್ಲಿ ಇದ್ದರು. ಅವರು ಅಲ್ಲಿಂದ ಬಂದ ಮೇಲೆ ಇಲ್ಲಿ ಉತ್ತರ ಕೊಡುತ್ತಾರೆ.

ಶಾಸನಗಳ ರಚನೆ

1. ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕ 1995
ವಿದೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಶ್ರೀಮತಿ ಬಿ.ಟಿ. ಲಲಿತಾನಾಯಕ್: (ಕನ್ನಡ ಮತ್ತು ಸಂಸ್ಕೃತಿ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ರಾಜ್ಯಮಂತ್ರಿ): ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

* ಶ್ರೀಮತಿ ಬಿ.ಟಿ.ಲಲಿತಾ ನಾಯಕ್ : ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಇವತ್ತು ಮಹಿಳೆಯರ ರಕ್ಷಣೆಗಾಗಿ ಹಲವಾರು ರೀತಿಯ ಕಾನೂನುಗಳು ಇದ್ದು ಎಲ್ಲಾ ರೀತಿಯ ಸಂಘಸಂಸ್ಥೆಗಳು ಕೆಲಸ ಮಾಡುತ್ತಿವೆ. ಬೇಕಾದಷ್ಟು ನಾಯ್ಯಾಲಯಗಳಲ್ಲಿ ಅವಳಿಗೆ ನ್ಯಾಯ ಸಿಗಬೇಕೆಂದು ಇದೆ. ಆದರೆ ಯಾವ ರೀತಿಯಿಂದ ಇಷ್ಟು ಸೌಲಭ್ಯಗಳನ್ನು ಕೊಟ್ಟರೂ ಕೂಡ ನಿಜವಾಗಿಯೂ ಅವಳಿಗೆ ನ್ಯಾಯ ಸಿಗುತ್ತಿಲ್ಲ. ಇದೊಂದೇ ಒಂದು ಕಾರಣಕ್ಕೆ ರಾಜ್ಯ ಮಹಿಳಾ ಆಯೋಗದ ಈ ಅಧಿನಿಯಮವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. ಕೇಂದ್ರದಲ್ಲೂ ಕೂಡ ರಾಷ್ಟ್ರೀಯ ಮಹಿಳಾ ಆಯೋಗವೆಂದು ಹಿಂದೆ ರಚನೆಯಾಗಿದೆ. ಅದರ ಪ್ರಕಾರ ನಮ್ಮ ರಾಜ್ಯದಲ್ಲೂ ಕೂಡ ಒಂದು ಆಯೋಗ ರಚನೆ ಆಗಬೇಕು ಎಂಬ ದೃಷ್ಟಿಯಿಂದ ಲಾ ಸ್ಕೂಲ್ ಅಂತ ಏನಿದೆ ಅದರ ಮುಖಾಂತರ ನಾವು ಕೇಳಿಕೊಂಡಿದ್ದಾಗಿತ್ತು. ಮಹಿಳೆಯರಿಗಾಗಿ ಸರಿಯಾದ ರೀತಿಯ ಆಯೋಗವನ್ನು ರಚನೆ ಮಾಡಿಕೊಡುವ

ಕೆಲಸವನ್ನು ಕಾನೂನು ಶಾಲೆಗೆ ಒಪ್ಪಿಸಿದಾಗ ಅದು ಕೂಡ ತನ್ನ ವರದಿಯನ್ನು ಕೊಟ್ಟಿತು. ಆದರೆ ಅದು ವರದಿಯನ್ನು ಕೊಟ್ಟು ಎರಡು ವರ್ಷಗಳಾದರೂ ಕೂಡ ಯಾವುದೇ ರೀತಿಯಿಂದ ಕೆಲಸ ಆಗಲಿಲ್ಲ. ಈಗ ನಾವು ಈ ಸರ್ಕಾರ ಅದನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇವೆ. ಮಾನ್ಯ ಸಭಾಧ್ಯಕ್ಷರೇ, ಇದರ ಮುಖ್ಯ ಉದ್ದೇಶ ಏನೆಂದರೆ, ಮಹಿಳೆಯರಿಗೆ ಯಾವ್ಯಾವ ರೀತಿಯಿಂದ ವೈಜ್ಞಾನಿಕವಾಗಿ ನ್ಯಾಯ ಸಿಗಬೇಕು, ಅವಳ ಸಮಸ್ಯೆ ಯಾವರೀತಿಯಿಂದ ಬಗೆಹರಿಸಬೇಕು ಎಂದು ಇವತ್ತು ಈ ಒಂದು ಆಯೋಗದಲ್ಲಿ ನಾವು ಸರಿಯಾದ ರೀತಿಯಲ್ಲಿ ಮಂಡಿಸಿದ್ದೇವೆ. ಈಗ ಉದಾಹರಣೆಗೆ ಇದರಲ್ಲಿ ಒಬ್ಬರು ಅಧ್ಯಕ್ಷರು ಮತ್ತು 9 ಜನ ಸದಸ್ಯರು ಇರುವಂಥ ಈ ಆಯೋಗದಲ್ಲಿ ಮಹಿಳೆಯರು ಗೌರವಯುತವಾಗಿ ಬಾಳುವುದಕ್ಕಾಗಿ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನವನ್ನು ಆಕೆ ದಕ್ಕಿಸಿಕೊಳ್ಳುವ ಉದ್ದೇಶದಿಂದ, ಕರ್ನಾಟಕ ಮಹಿಳೆಯರಿಗೆ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವಂಥ ಒಂದು ಉದ್ದೇಶದಿಂದ ಈ ಒಂದು ಮಹತ್ತರವಾದ ಹೆಜ್ಜೆಯನ್ನು ಇಡುತ್ತೀದ್ದೇವೆ. ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ ಇಲಾಖೆ ಈ ಒಂದು ಆಯೋಗದ ರೂಪುರೇಷೆಗಳನ್ನು ತಯಾರು ಮಾಡಿದೆ. ಏಕೆಂದರೆ ಕೇಂದ್ರದಲ್ಲಿರುವಂಥ ಆಯೋಗದಿಂದ ಯಾವ್ಯಾವುದು ಮತ್ತು ಕಾನೂನು ಶಾಲೆಯ ವತಿಯಿಂದ ನಾವು ಏನು ತಿಳಿದುಕೊಂಡಿದ್ದೆವು, ಅವೆರಡರಿಂದಲೂ ಕೂಡ ಆಯ್ಕೆ ಮಾಡಿಕೊಂಡು ಕೆಲವೊಂದು ನಿಯಮಗಳನ್ನು ಇದರಲ್ಲಿ ಸೇರಿಸಿದ್ದೇವೆ. ಏಕೆಂದರೆ ಅಲ್ಲಿ 9 ಜನ ಮಾತ್ರ ಇರಬೇಕೆಂದು ಇದೆ. ಕೆಲವು ಕಡೆ ಲಾ ಸ್ಕೂಲ್ ಕೊಟ್ಟಿರುವಂಥ ಡ್ರಾಫ್ಟ್‌ನಲ್ಲಿ ಕೇವಲ ಆರು ಜನ ಇರುವಂಥಾದ್ದು ಇದೆ. ಆದರೆ ನಾವು 11 ಜನರುನ್ನು, ಒಬ್ಬರು ಚೇರ್‌ಪರ್ಸನ್ ಮತ್ತು 10 ಜನರು ಸದಸ್ಯರು ಉಳ್ಳಂಥ ಈ ಒಂದು ಆಯೋಗದಿಂದ ಮಹಿಳೆಯರಿಗೆ ಸಂವಿಧಾನದಲ್ಲಿ ಇಂತಹವರು ಇಂತಹ ಕೆಲಸ ಮಾಡಬೇಕು ಎನ್ನುವಂಥಾದ್ದು ಮತ್ತು ಅಫಿಡವಿಟ್ ಮೂಲಕ ಸಾಕ್ಷಿ ಒದಗಿಸುವಂಥಾದ್ದು ಮತ್ತು ಒಟ್ಟಿನಲ್ಲಿ ಈ ಆಯೋಗದ ಉದ್ದೇಶ ಎಂದರೆ ಸತ್ಯಶೋಧನೆ ಮಾಡುವಂಥಾದ್ದು. ಯಾವುದೇ ಒಂದು ಮಹಿಳೆಗೆ ಬಂದಂಥ ಕಷ್ಟ ನಿಷ್ಠೂರಗಳನ್ನು, ಅವಳಿಗೆ ಆಗುವಂಥ ಅನ್ಯಾಯವನ್ನು ಯಾವುದೇ ಎಗ್ಗಿಲ್ಲದೆ ಯಾವುದೇ ಇತಿಮಿತಿ ಇಲ್ಲದೆ ಸತ್ಯಶೋಧನೆ ಮಾಡಿ ಇವರು ಇಂತಹ ಶಿಕ್ಷೆಗೆ ಪಾತ್ರರಾಗಬಹುದು ಎಂದು ಮಂಡಿಸುವಂಥ ಸರ್ವಹಕ್ಕುಗಳು ಕೂಡ ಈ ಒಂದು ಆಯೋಗಕ್ಕೆ ಇದೆಯೆನ್ನುವಂಥಾದ್ದು ಸಂತೋಷದ ವಿಷಯ. ಕರ್ನಾಟಕದ ಎಲ್ಲ ಮಹಿಳೆಯರು ಕೂಡ ಈ ಆಯೋಗವನ್ನು ಅತ್ಯಂತ ಸಂತೋಷದಿಂದ ಇದಕ್ಕೆ ಸಹಕಾರ ನೀಡುತ್ತಾರೆ ಎಂದು ನಾನು ಭಾವಿಸಿದ್ದೇನೆ. ಮತ್ತೆ ಈ ಸಭೆ ಕೂಡ ಇದನ್ನು ಒಪ್ಪುತ್ತದೆ ಎಂದು ಭಾವಿಸಿದ್ದೇನೆ. ಮಹಿಳೆಯರಿಗೆ ಶಾಸನಬದ್ಧವಾದ ಸ್ಥಾನಮಾನವನ್ನು ಇದುವರೆಗೆ ಯಾವ ಸರ್ಕಾರ ಕೂಡ ಕೊಟ್ಟಿಲ್ಲ, ಓಂದೆ ಕೊಟ್ಟಿರಲಿಲ್ಲ, ಬಹುಶಃ ಮುಂದೆ ಕೂಡ ಕೊಡುವುದಿಲ್ಲ. ಈ ಸರ್ಕಾರ ಇದನ್ನು ಕೊಡುವುದಕ್ಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಯಾರು ಕೊಟ್ಟಿದ್ದು?

ಶ್ರೀಮತಿ ಬಿ.ಟಿ.ಲಲಿತ ನಾಯಕ್ : ನಮ್ಮ ಸರ್ಕಾರ ಈಗ ಕೊಡುತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏನಮ್ಮ ನೀವು? ಇದು ಸೆಂಟ್ರಲ್ ಆ್ಯಕ್ಟ್ ಅಂತ ನೀವೇ ಹೇಳಿದಿರಿ. ಮತ್ತೆ ನಾವು ಕೊಡುತ್ತಿದ್ದೇವೆ ಎಂದು ಹೇಳುತ್ತೀರಿ. ಅಲ್ಲೇನು ಕಾನೂನು ಜಾರಿಗೆ ತಂದಿದ್ದಾರೆ, ಅದನ್ನೇ ನಾವು ಇಲ್ಲಿ ಅಡಾಪ್ಟ್ ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳಿ.

ಶ್ರೀಮತಿ ಬಿ.ಟಿ.ಲಲಿತ ನಾಯಕ್ : ರಾಷ್ಟ್ರೀಯ ಮಹಿಳಾ ಆಯೋಗ ಇದೆ. ಆದರೆ ಕರ್ನಾಟಕ ಮಹಿಳೆ ಡೆಲ್ಲಿಗೆ ಹೋದರೆ ಆಕೆಗೆ ಅಲ್ಲಿ ನ್ಯಾಯ ಸಿಗುವಂಥ ಪರಿಸ್ಥಿತಿ ಇರಲಿಲ್ಲ. ಕರ್ನಾಟಕದ ಒಬ್ಬ ಮಹಿಳೆ ಡೆಲ್ಲಿಗೆ ಹೋಗಿ ಎಷ್ಟರ ಮಟ್ಟಿಗೆ ನ್ಯಾಯ ಪಡೆಯುವುದಕ್ಕೆ ಸಾಧ್ಯ? ಕರ್ನಾಟಕದಲ್ಲಿರತಕ್ಕಂಥ ಮಹಿಳೆ ಕರ್ನಾಟಕದಲ್ಲಿಯೇ ತನ್ನ ಕಷ್ಟಸುಖಗಳನ್ನು, ತನಗೆ ಆಗತಕ್ಕಂಥ ಶೋಷಣೆಯನ್ನು ನಿವಾರಣೆ ಮಾಡಿಕೊಂಡು ಅವಳೂ ಕೂಡ ಸಮಾನತೆಯಲ್ಲಿ ಭದ್ರವಾದ ಅಂತಹ ಒಂದು ಸೌಲಭ್ಯವನ್ನು ಪಡೆಯಬೇಕು ಎನ್ನುವಂಥ ಘನೋದ್ದೇಶವನ್ನು ಇಟ್ಟುಕೊಂಡು ಈ ದಿವಸ ಈ ಅಧಿನಿಯಮವನ್ನು ಮಂಡಿಸುತ್ತಿದ್ದೇನೆ. ದಯವಿಟ್ಟು ಈ ಸಭೆ ಇದಕ್ಕೆ ಅನುಮತಿ ಕೊಡಬೇಕೆಂದು ಬೇಡಿಕೆಯನ್ನು ನಾನು ಇಡುತ್ತಿದ್ದೇನೆ. ಆದ್ದರಿಂದ ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿದೇಯಕ ಎಲ್ಲ ರೀತಿಯಿಂದಲೂ ಇವತ್ತು ಕರ್ನಾಟಕದ ಮಹಿಳೆಯ ಉದ್ಧಾರ ಆಕೆಯ ಸರ್ವತೋಮುಖವಾದ ಏಳಿಗೆಗೆ ಇದು ಕಾರಣವಾಗುತ್ತದೆ. ಮತ್ತೇ ಮಾನ್ಯ ಸದಸ್ಯರು ಹೇಳಿದರು ರಾಷ್ಟ್ರೀಯ ಆಯೋಗ ಈಗಾಗಲೇ ಮಾಡಿದೆ ಎಂದು. ಆದರೆ ಇಲ್ಲಿರುವಂಥ ಸಮಸ್ಯೆಗಳೇ ಬೇರೆ. ಕರ್ನಾಟಕದಲ್ಲಿ ದೇವದಾಸಿ ಪದ್ಧತಿ ಇದೆ. ಬೇರೆ ಬೇರೆಯಾದಂಥ ಮಹಿಳೆಯ ಏನೇನು ಸಮಸ್ಯೆಗಳು ಇಲ್ಲಿವೆ, ಅದು ಬೇರೆ ರಾಜ್ಯಗಳಲ್ಲಿ ಇಲ್ಲ. ಇಂತಹ ವಿಚಿತ್ರ ಪರಿಸ್ಥಿತಿಯಲ್ಲಿ ಕರ್ನಾಟಕದ ಮಹಿಳೆ ಸಿಕ್ಕಿಕೊಂಡಿರತಕ್ಕಂಥ ಸಂದರ್ಭದಲ್ಲಿ ಇದನ್ನು ನಿವಾರಣೆ ಮಾಡುವುದಕ್ಕೋಸ್ಕರ ಇವತ್ತು ಕರ್ನಾಟಕ ರಾಜ್ಯದಲ್ಲಿ ಇಷ್ಟೆಲ್ಲ ತಲೆಯೋಡಿಸಿ ಮಹಿಳೆಯ ಉದ್ಧಾರಕ್ಕಾಗಿ ಮಾಡಿರುವಂಥ ಈ ಆಯೋಗಕ್ಕೆ ಎಲ್ಲರೂ ಕೂಡ ಒಪ್ಪಿಕೊಳ್ಳುತ್ತಾರೆ ಎಂದು ಭಾವಿಸಿ ಮತ್ತೊಮ್ಮೆ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ.

(ಗೊಂದಲ)

ಶ್ರೀಮತಿ ಪ್ರಮಿಳಾ ನೇಸರ್ಗಿ : ಅಧ್ಯಕ್ಷರೇ. . . .

ಅಧ್ಯಕ್ಷರು : ನೀವು ಅವರನ್ನು ಅಭಿನಂದಿಸಬೇಕು. ನಿಮ್ಮ ವಿಚಾರಕ್ಕಾಗಿ ಅವರು ಕೂಡ ಎದ್ದುನಿಂತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಮಸೂದೆಯನ್ನು ಮಂಡಿಸಿರತಕ್ಕಂಥವರು ಮಹಿಳೆ. ಚರ್ಚೆಗೆ ನಿಂತಿರತಕ್ಕಂಥವರೂ ಮಹಿಳೆಯೇ. ಹಾಗಾದರೆ ಅಧ್ಯಕ್ಷರೇ, ನಮ್ಮ ಪರಿಸ್ಥಿತಿ ಹೇಗೆ? ದಯವಿಟ್ಟು ಈ ವಿದೇಯಕವನ್ನು ಮಂಡಿಸುವುದಕ್ಕೆ ಗಂಡಸರಿಗೆ ಅವಕಾಶ ಕೊಡಿ. ಮಾನ್ಯ ಸಂಸದೀಯ ಸಚಿವರಾದ ಶ್ರೀ ನಾಣಯ್ಯನವರು ಇದನ್ನು ಮಂಡಿಸಲಿ ದಯಮಾಡಿ ಅವರು ಮಹಿಳೆಯರ ಪರವಾಗಿ ಅದನ್ನು ಮಂಡಿಸಲಿ.

ಶ್ರೀ ಎಂ.ಸಿ.ನಾಣ್ಯಯ್ಯ : ಯಾವ್ಯಾವ ಪುರುಷರಿಗೆ ಮಹಿಳೆಯರಿದ್ದಾರೆ ಅವರು ಮಂಡಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಅದಲ್ಲ, ನಾನು ಕ್ರಿಯಾಲೋಪವನ್ನು ಎತ್ತಿದ್ದೇನೆ. ಸರಿಯಾಗಿ ಉತ್ತರ ಕೊಡಬೇಕು. ಕೇವಲ ಒಬ್ಬ ಮಹಿಳೆಯರಿಗೋಸ್ಕರ ಒಂದು ರೀತಿಯ ಮಡಿ ವಂತಿಕೆಯನ್ನು ಮಾಡುತ್ತಿದ್ದಾರೆ. ಇದು ಆಗಬಾರದು. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ, ದಯಮಾಡಿ ಇದನ್ನು ಮಹಿಳೆಯಿಂದ ಕಸಿದುಕೊಂಡು ಈ ಮಸೂದೆಯನ್ನು ಅವರು ಮಂಡಿಸಲಿ. ನಮ್ಮ ಕಡೆಯಿಂದ ಶ್ರೀಮತಿ ಪ್ರಮಿಳಾರವರು ಮಾತನಾಡಬೇಕೆಂದು ತುದಿಗಾಲಿನಲ್ಲಿ ನಿಂತಿದ್ದಾರೆ. ಆದ್ದರಿಂದ ಮಾನ್ಯ ನಾಣಯ್ಯನವರಿಗೆ ಈ ಅವಕಾಶವನ್ನು ಕೊಡಬೇಕು.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್ : ಈ ಸಭೆಯಲ್ಲಿ ಪುರುಷರೂ ಇದ್ದಾರೆ ಎಂದು ಭಾವಿಸಿದ್ದೇನೆ. ಅವರು ಏಕೆ ಹಾಗೆ ತಿಳಿದುಕೊಳ್ಳುತ್ತಾರೋ ಗೋತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಪುರುಷರು ಇದ್ದಾರೆ ಎಂದು ಇವರು ಭಾವಿಸಿದ್ದಾರಂತೆ ನಾವು ಹೆಂಗಸರು ಇಲ್ಲವೇನೋ ಅಂತ ತಿಳಿದುಕೊಂಡಿದ್ದೇವು.

ಶ್ರೀಮತಿ ಪ್ರಮಿಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ್ದರಲ್ಲಿ ಸತ್ಯ ಇದೆ. ಏಕೆಂದರೆ, ಈ ಬಿಲ್‌ಅನ್ನು ನೋಡಿದಾಗ ನನಗೆ ಆಶ್ಚರ್ಯವಾಯಿತು. ತಂದಿದ್ದೀರಿ, ಅದಕ್ಕೆ ಸ್ವಾಗತ. ಕಾಂಗ್ರೆಸ್ ಸರ್ಕಾರ ಇದ್ದಾಗ ಇದನ್ನು ಆಗಲೇ ತರಬೇಕಾಗಿತ್ತು. ಆದರೆ ಮಾನ್ಯ ಖರ್ಗೆಯವರು ಇದನ್ನು ಯಾವ ಕಾರಣಕ್ಕೋ ತರಲಿಲ್ಲ. ತಾವಾದರೂ ಇದನ್ನು ತಂದಿದ್ದೀರಿ ಮಾತ್ತು ಇದಕ್ಕಾಗಿ ನಾನು ಸ್ವಾಗತ ಮಾಡುತ್ತೇನೆ. ನಿಜವಾಗಿ ನೋಡಿದರೆ ಮಹಿಳೆಯವರಿಗೆ ಏನು ಅಧಿಕಾರ ಕೊಡಬೇಕೆಂದು ಈ ಬಿಲ್‌ಅನ್ನು ತೆಗೆದುಕೊಂಡು ಬಂದಿದ್ದೀರಿ. ಅದ್ಯಾವುದೂ ಹುಡುಕಿದರೂ ಕೂಡ ಸಿಗುವುದಿಲ್ಲ. ಅದನ್ನು ಮುಂದೆ ನಾನು ತೋರಿಸುತ್ತೇನೆ. ಇದಕ್ಕೆ ತಿದ್ದುಪಡಿಯನ್ನು ನಾನು ಟೈಪ್ ಮಾಡಿಕೊಂಡು ಬಂದಿದ್ದೆ. ಆದರೆ ತಿದ್ದುಪಡಿ ಕೊಟ್ಟರೆ ಈ ಕಮಿಷನ್ ಬಿಲ್ ಮುಂದೆ ಹೋಗುತ್ತದಲ್ಲ. ಹಾಗೆ ಮಾಡಿದರೆ ತಕ್ಷಣ ಅದು ಬರುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿ, ನಾನು ಇದನ್ನು ಸ್ವಾಗತ ಮಾಡಿ ಇದಕ್ಕೆ ಬೇಕಾದಷ್ಟು ತಿದ್ದುಪಡಿಯನ್ನು ತರುವುದಕ್ಕೆ ಅವಶ್ಯಕತೆ ಇದೆ. ಸೂಕ್ತ ಕಾಲದಲ್ಲಿ ಮುಂದೆ ತಿದ್ದುಪಡ್ಡಿಯನ್ನು ತಾವು ತರಬೇಕೆಂದು ಹೇಳಿ ನಾನು ಇದನ್ನು ಸ್ವಾಗತ ಮಾಡುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೇ, ಈ ಬಿಲ್ಲನ್ನು ಯಾರು ತಯಾರು ಮಾಡಿದರೋ ಗೊತ್ತಿಲ್ಲ. ''ಮಹಿಳೆಯರ ಆಯೋಗ'' ಅಂದರೆ, ಇದರಲ್ಲಿ ಮಹಿಳೆಯರಿಗೆ ಯಾವ ಹಕ್ಕುಗಳನ್ನು ಕೊಡಬೇಕೋ ಅದೆಲ್ಲವನ್ನೂ ಕೂಡ ಮಹನೀಯರಿಗೆ ಕೊಟ್ಟಿದ್ದಾರೆ.

(ಗೊಂದಲ)

ಮಾನ್ಯ ನಾಗೇಗೌಡರು ಈ ರೀತಿ ಮಾತನಾಡುತ್ತಾ ಇದ್ದಾರೆ ಮಾತನಾಡು ವುದಕ್ಕಾಗುವುದಿಲ್ಲ. ಸದನದಲ್ಲಿ ಏನೋ ಒಂದು ಮಹಿಳಾ ಆಯೋಗದ ಬಿಲ್ ಬಂದಿದೆ, ಅವರು ಈ ರೀತಿ ಮಾತನಾಡುತ್ತಾ ಇದ್ದರೆ, ನಾವೇನು ಮಾತನಾಡೋಣ. ಈ

ಆಯೋಗದ ಬಿಲ್ಲನ್ನು ಏತಕ್ಕೋಸ್ಕರ ತಂದಿದ್ದೀರಿ ಎಂದು ತಾವು ಕೇಳಬೇಕು. ಏತಕ್ಕೆ ತಂದಿದ್ದಾರೆ, ಏನು ಅನ್ಯಾಯವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಮತ್ತು ನಾಗೇಗೌಡರು ನಿಮ್ಮ ವಿಚಾರವನ್ನೇ ಮಾತನಾಡುತ್ತಾ ಇದ್ದೆವು. ನಂಜೇಗೌಡರೂ ಕೂಡ ಇದರ ಬಗ್ಗೆ ಗಮನ ಸೆಳೆಯಬೇಕೆಂದು ಯೋಚನೆ ಮಾಡುತ್ತಿದ್ದೆವು. ಏನು ಮಾಡಬೇಕು, ಮಹಿಳೆಯರ ಸಮಸ್ಯೆಯನ್ನು ಹೇಗೆ ಪರಿಹರಿಸುವುದು ಅವರು ಏನು ಹೇಳುತ್ತಾರೆಂಬ ಬಗ್ಗೆಯೇ ನಾವು ತಲೆಕೆಡಿಸಿಕೊಂಡು ಕುಳಿತಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಲೆಕೆಡಿಸಿಕೊಳ್ಳುವ ಅಗತ್ಯ ಇಲ್ಲ. ಈ ಮಹಿಳಾ ಆಯೋಗ ವಿಧೇಯಕದ ಬಗ್ಗೆ ಏನು ಸರಿಪಡಿಸಬೇಕೋ, ಏನು ಮಾಡಬೇಕೆಂಬುದನ್ನು ನಾವು ನೋಡೋಣ. ನಾನು ಖಂಡಿತವಾಗಿಯೂ ಕಾನೂನು ಮಂತ್ರಿಗಳನ್ನು ಕೇಳುತ್ತಿದ್ದೇನೆ. ನಿಜವಾಗಿಯೂ ಕೂಡ ಕಾನೂನು ಡಿಪಾರ್ಟ್‌ಮೆಂಟ್ ನಿಮ್ಮಲ್ಲಿ ಇದೆಯೇ? ಇಂಥಹ ಪ್ರಮುಖವಾದ ಬಿಲ್ಲನ್ನು ತರತಕ್ಕಂಥ ಸಂಧರ್ಭದಲ್ಲಿ, ನ್ಯಾಷನಲ್ ಕಮೀಷನ್ ಫಾರ್ ವುಮನ್ ಏನೋ ತಂದರು. ತರಾತುರಿಯಲ್ಲಿ ತಂದರು. ಅದರಲ್ಲಿ ಬಹಳ ತಪ್ಪುಗಳು ಇದ್ದವು. ಅದನ್ನು ತಂದ ನಂತರ, ಅದು ಸರಿಯಾಗಿ ಕೆಲಸ ಮಾಡಲಿಕ್ಕಾಗಲಿಲ್ಲವೆನ್ನುವುದು ಎಲ್ಲರಿಗೂ ಗೊತ್ತಿದೆ. ನ್ಯಾಷನಲ್ ಕಮೀಷನ್ ಫಾರ್ ವುಮನ್ ತಂದ ನಂತರ, ಕೇರಳದಲ್ಲಿ ಈ ಬಿಲ್ ಬಂತು. ಕರ್ನಾಟಕದಲ್ಲಿರತಕ್ಕ ಸನ್ಮಾನ್ಯ ಖರ್ಗೆಯವರು ಅಥವಾ ಮೊಯಿಲಿಯವರು ಅಥವಾ ಬಂಗಾರಪ್ಪನವರ ಕಾಲದಲ್ಲಿ ನ್ಯಾಷನಲ್ ಲಾ ಸ್ಕೂಲ್‌ಗೆ ಈ ಬಿಲ್ಲನ್ನು ತಯಾರು ಮಾಡಿಕೊಡಿ ಎಂದು, ಕರ್ನಾಟಕ ಸರ್ಕಾರ ದುಡ್ಡನ್ನು ಖರ್ಚುಮಾಡಿ, ಅವರಿಗೆ ಕೊಟ್ಟರು. ಅವರು ಬಿಲ್ಲನ್ನು ತಯಾರು ಮಾಡಿ ಕೊಟ್ಟರು. ಆದರೆ, ಆ ಬಿಲ್ ಏನು ತಯಾರು ಮಾಡಿಕೊಟ್ಟರು, ಆ ಒಂದು ಅಂಶವೂ ಈ ಬಿಲ್‌ನಲ್ಲಿ ಇಲ್ಲ. ಸಭಾಧ್ಯಕ್ಷರೇ, ನನಗೆ ಬಹಳ ದುಃಖವಾಗುತ್ತಿದೆ. ನ್ಯಾಷನಲ್ ಲಾ ಸ್ಕೂಲ್‌ನಲ್ಲಿ, ಈ ಬಿಲ್ ತಯಾರು ಮಾಡತಕ್ಕ ಸಂದರ್ಭದಲ್ಲಿ, ಬೆಂಗಳೂರಿನಲ್ಲಿರತಕ್ಕ ಎಲ್ಲಾ ಸ್ವಯಂಸೇವಕ ಸಂಸ್ಥೆಗಳೇನಿವೆ ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ಮಹಿಳೆಯರನ್ನು ಕರೆದು, ಈ ಬಿಲ್ಲನ್ನು ಹೇಗೆ ಮಾರ್ಪಾಟು ಮಾಡಬೇಕು, ಸೂಕ್ತವಾಗಿ ಮಾರ್ಪಾಟು ಮಾಡಿದರೆ, ಹೆಣ್ಣುಮಕ್ಕಳಿಗೆ ಅನುಕೂಲ ವಾಗುತ್ತದೆಂದು, ಹಲವಾರು ದಿವಸಗಳ ಕಾಲ ನಾವೆಲ್ಲ ಕುಳಿತುಕೊಂಡು, ಈ ಬಿಲ್ಲಿನ ಬಗ್ಗೆ ಚರ್ಚೆಮಾಡಿ, ಇದನ್ನು ಯಾವರೀತಿ ಮಾರ್ಪಾಟ್ಟು ಮಾಡಬೇಕೆಂದು ಹೇಳಿ, ಬಿಲ್ಲನ್ನು ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟೆವು. ಆದರೆ, ಆ ಬಿಲ್ ಏನು ತಯಾರು ಮಾಡಿಕೊಟ್ಟರು, ಸ್ವಯಂಸೇವಕರನ್ನು ಯಾವರೀತಿ ತೆಗೆದುಕೊಳ್ಳಬೇಕೆಂದು ಹೇಳಿದ್ದರೋ ಅದರ ಬಗ್ಗೆ ಚಕಾರ ಕೂಡ ಈ ಬಿಲ್‌ನಲ್ಲಿ ಇಲ್ಲ. ನನಗೆ ಆಶ್ಚರ್ಯವಾಗುತ್ತದೆ. ತಾವು ದಯಮಾಡಿ, ಈ ಬಿಲ್ಲಿನಲ್ಲಿರತಕ್ಕ ಒಂದೇ ಒಂದು ಸೆಕ್ಷನ್ ನೋಡಬೇಕು. ಸೆಕ್ಷನ್(5) ಸೆಕ್ರೆಟರಿ, ಈ ಬಿಲ್ಲಿಗೆ ಹೆಸರು ನ್ಯಾಷನಲ್

ಕಮೀಷನ್ ಫಾರ್ ವುಮನ್ ಎಂದು, ಮಹಿಳೆಯರಿಗೋಸ್ಕರ ಆಯೋಗ. ತಾವು ದಯವಿಟ್ಟು ಇದನ್ನು ನೋಡಿ.

The secretary of the commission shall be a on officer not below the rank of Joint Secretary of Government appointed by the government. ಅಂದರೆ ಈ ಹಕ್ಕನ್ನು ಹೇಗೆ ಇಟ್ಟುಕೊಂಡಿದ್ದಾರೆ ಎಂದು, ಸೆಕ್ರೆಟರಿ ಮಾಡುವುದು. ಸಭಾಧ್ಯಕ್ಷರೇ ತಾವು ದಯವಿಟ್ಟು ಸೆಕ್ಷನ್ 4(ಸಿ) ನೋಡಬೇಕು. discharge such other function confirmed on him. ಅಂದರೆ, ಈ ಮಹಿಳಾ ಆಯೋಗಕ್ಕೆ ಸೆಕ್ರೆಟರಿ ಮಹನೀಯರು ಆಗಬೇಕೆಂಬುದನ್ನು ಈ ಬಿಲ್ಲಿನಲ್ಲಿ ಹೇಳಿದ್ದಾರೆ. ಇವತ್ತು ನಾನು ಕೇಳುತ್ತಿದ್ದೇನೆ, ನೀವು ಇದನ್ನು ಏತಕ್ಕೋಸ್ಕರ ಮಾಡುತ್ತಿದ್ದೀರಿ? ಸೆಕ್ರೆಟರಿಯನ್ನು ಗಂಡಸರನ್ನೇ ಮಾಡುವುದಾದರೆ, ಮಹಿಳಾ ಆಯೋಗ ನಮಗೆ ಬೇಕಾಗೆಯೇ ಇಲ್ಲ. ಇದು ನಮಗೆ ಏತಕ್ಕೋಸ್ಕರ ಬೇಕು? 'ಆನ್ ಹಿಮ್' ಎಂದು ತಾವು ಹೇಳುತ್ತಿದ್ದೀರಿ. ಏಕೆ ತೊಂದರೆ ಏನು? ಜಾಯಿಂಟ್ ಸೆಕ್ರೆಟರಿಯನ್ನು ಮಾಡಿ, ಮಹನೀಯರನ್ನು ಅಲ್ಲಿ ಕೂಡಿಸಿ, ಮಾಡುವುದಾದರೆ ಮಹಿಳೆಯರಿಗೆ ಏನು ಅಧಿಕಾರ ಇದೆ? ಬಜೆಟ್ ಮಾಡುವುದು, ಹಣ ಉಪಯೋಗಿಸುವುದು ಎಲ್ಲಾ ಅದಿಕಾರ ಸೆಕ್ರೆಟರಿಗೇ ಇದೆ. ಯಾರು ಸೆಕ್ರೆಟರಿ? ಗಂಡಸರು. ತಮ್ಮದು ಏನು ಮಹಿಳಾ ಆಯೋಗ ಸ್ವಾಮಿ?

ಅಧ್ಯಕ್ಷರುः- ಪ್ರಮಿಳಾರವರೇ, It could be a small error, because the Joint secretary.ನಮ್ಮಲ್ಲಿ ಏನು ಆಲ್ ಇಂಡಿಯಾ ಕೆಡರ್‌ನಲ್ಲಿ ಬಂದಿರುವವರು ಇದ್ದಾರೆ, ಅದರಲ್ಲಿ ಮೆನ್ ಇದ್ದಾರೆ, ವುಮೆನ್ ಕೂಡ ಇದ್ದಾರೆ.

ಶ್ರೀಮತಿ ಪ್ರಮಿಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಆ ಉದ್ದೇಶ ಇದ್ದರೆ, ಇದನ್ನು ತಯಾರು ಮಾಡಿದಂಥ ಲಾ ಡಿಪಾರ್ಟ್‌ಮೆಂಟಿನ ಮಹನೀಯರು ಇದ್ದಾರಲ್ಲ, ಅವರು ಹೇಳುತ್ತಿದ್ದರು. 'ಆನ್ ಸಚ್ ಪರ್ಸನ್' ಎಂದು ಹೇಳುತ್ತಿದ್ದರು. ನಾನು ಹೇಳುತ್ತೇನೆ, ''ಆನ್ ಹಿಮ್'' ಎಂದು ಹೇಳಬೇಕಾದರೆ, ಅವರು ಯಾರು ಆಗಬೇಕು? ''ಹಿಮ್'' ಆಗಬೇಕಾದರೆ, ಜಾಯಿಂಟ್ ಸೆಕ್ರೆಟರಿ ಗಂಡಸರಾಗಬೇಕು. ನಮ್ಮ ಉದ್ದೇಶ ಏನು.

ಅಧ್ಯಕ್ಷರು : ನಿಮ್ಮ ಅಭಿಪ್ರಾಯ ನನಗೆ ಗೊತ್ತಿದೆ. ಹಾನರಬಲ್ ಲಾ ಮಿನಿಸ್ಟರ್, ತಾವು ಕ್ಲಾಸ್‌ಮೇಟ್ಸ್. ಅವರು ಮೇಲೆ ಚೆವನಿಸ್ಟ್ ಎನ್ನುವ ಕಾರಣದಿಂದ ನೀವು ಈ ರೀತಿ ಹೇಳುತ್ತಿದ್ದೀರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಹಾಗೇನೂ ಇಲ್ಲ. ನಾನು ಆಗಲೇ ಹೇಳಿದೆ. ಈ ಬಿಲ್ ತಯಾರು ಮಾಡಿದಂಥ ಲಾ ಡಿಪಾರ್ಟ್‌ಮೆಂಟ್‌ನವರು ಇದ್ದಾರಲ್ಲ, ಅವರ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ಅಧಿಕಾರಿಗಳು ಯಾರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನೀವು ಮೇಲೆ ಬಿದ್ದರೆ, ಮಹಿಳೆಯರಿಗೆ ಕೋಪ ಬರುತ್ತದೆ. ಆದ್ದರಿಂದ ತಾವು ನಿಧಾನವಾಗಿ, ಸ್ವಲ್ಪ ನಗುನಗುತ್ತ ಮಾತನಾಡಬೇಕು.

ಶ್ರೀ . ಎಂ.ಸಿ.ನಾಣಯ್ಯ : ಮಹಿಳೆಯರು ಎದ್ದುನಿಂತಾಗ ನಾನು ಬಹಳ ಸಂಪನ್ನನಾಗುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರ ನನಗೆ ಗೊತ್ತಿರಲಿಲ್ಲ. ಗೊತ್ತಿದ್ದರೆ ಬೇರೆ ರೀತಿ ಹೇಳಬಹುದಿತ್ತು.

ಶ್ರೀ ಎಂ.ಸಿ.ನಾಣಯ್ಯ : ಕಾರ್ಯದರ್ಶಿಗಳು ಮತ್ತು ಸರ್ಕಾರಿ ಸಿಬ್ಬಂದಿಗಳು ಎಂದು ಹೇಳತಕ್ಕಂಥ ಪ್ರಶ್ನೆ ಬಂದಾಗ, ಸೆಕ್ರೆಟರಿಯಾಗಲೀ, ಜಾಯಿಂಟ್ ಸೆಕ್ರೆಟರಿಯಾಗಲೀ ಅಥವಾ ಡೆಪ್ಯೂಟಿ ಸೆಕ್ರೆಟರಿಯಾಗಲೀ, ಈ ಹುದ್ದೆಗಳನ್ನು ಟೆಂಡರ್ ಆಧಾರದ ಮೇಲೆ ಯಾವಾಗಲೂ ಪರಿಗಣಿಸುವುದಿಲ್ಲ. ತಮಗೆ ಜನರಲ್ ಕ್ಲಾಸಸ್ ಆ್ಯಕ್ಟ್‌ನಲ್ಲಿ, ಮೇಲೆ ಸೆಕ್ರೆಟರಿ ಎಂದು ಹೇಳಿದರೂ ಕೂಡ ಫೀಮೇಲ್ ಎಂದು ಹೇಳತಕ್ಕಂತಾದ್ದು, ಫೀಮೇಲ್‌ನ್ನು ಮೇಲ್ ಎಂದು ಹೇಳತಕ್ಕಂತಾದ್ದು ಜನರಲ್ ಕ್ಲಾಸ್ ಆಕ್ಟ್‌ನಲ್ಲಿ ತಂದಿದ್ದಾರೆ. ನಾನು ಒಂದನ್ನು. ಮಹಿಳೆಯರಿಗೆ ಸಂಬಂಧಪಟ್ಟಿರತಕ್ಕಂಥ ಯಾವುದೇ ಒಂದು ಸಂಸ್ಥೆ ಅಥವಾ ಈ ತರಹ ಒಂದು ಆಯೋಗ ಬಂದಾಗ, ಯಾವಾಗಲೂ ಮಹನೀಯರು ಇರಲೇಬೇಕಾಗುತ್ತದೆ. ಕಾರಣ, you are quite aware of it the biggest Economy of a woman is a woman

ಶ್ರೀಮತಿ ಪ್ರಮಿಳಾ ನೇಸರ್ಗಿ : ನಾನು ಒಪ್ಪುವುದಿಲ್ಲ.ನೀವು ಮಾನ್ಯ ಕಾನೂನು ಸಚಿವರು ಮೇಲ್ಮನೆಯಲ್ಲಿ ಮಾತನಾಡಿ ಖಂಡಿತವಾಗಿಯೂ ಒಪ್ಪುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಹೆಣ್ಣುಮಕ್ಕಳು ಎಷ್ಟು ಹಠಮಾರಿಗಳು ಎಂಬುದು ಇದರಿಂದಲೇ ಗೊತ್ತಾಗುತ್ತದೆ.

ಶ್ರೀಮತಿ ಪ್ರಮಿಳಾ ನೇಸರ್ಗಿ : ತಾವು ಹೇಗೆ ಸಪೋರ್ಟ್ ಮಾಡುತ್ತೀರಿ ಎಂಬುದು ಗೊತ್ತಿದೆ. ಯಾವ ಕಾರಣಕ್ಕೋಸ್ಕರ ಮಾಡುತ್ತೀರಿ ಎಂಬುದು ಗೊತ್ತಿದೆ. ಅದನ್ನು ನಾವು ಒಪ್ಪುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗೆ ಒಂದು ನೋವಾಯಿತು. ಮಾನ್ಯ ಪ್ರಕಾಶ್‌ರವರು ಮಹಾ ಪಂಡಿತರು ಎಂಬುದು ನನಗೆ ಗೊತ್ತಿದೆ. ಒಳ್ಳೆಯ ಪುಸ್ತಕಗಳನ್ನು ಓದಿದ್ದಾರೆ. ಅಪಾರವಾದ ಅನುಭವ ಇದೆ. ಅವರು''ಹಠಮಾರಿ'' ಎಂದು ಹೇಳಿದರು. ''ಹಠ'' ಹೇಳಲಿ ಆದರೆ ''ಮಾರಿ'' ಎಂದು ಹೇಳಿದರು.

ಶ್ರೀ ಎಂ.ಪಿ.ಪ್ರಕಾಶ್ : ಅವರು ನಾರದ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾನು ಹಾಗೆ ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ನಿಮ್ಮ ಪರ ನಿಲ್ಲುತ್ತೇನೆ. ನೀವು ನಮ್ಮಜೊತೆ ಇರಬೇಕು. ದಯಮಾಡಿ ಈ ಪದವನ್ನು ಕಡತದಿಂದ ತೆಗೆಯಲೇಬೇಕು. ಇದು ಅಧ್ಯಕ್ಷರಾದ ತಮಗೆ ಸೇರಿದ್ದುದು.

ಅಧ್ಯಕ್ಷರು : ಅವರು ಹಠ ಬೇರೆ ಮಾರಿ ಬೇರೆ ಎಂದು ಬಳಕೆ ಮಾಡಿದ್ದರೆ, ನಾನು ಕಡತದಿಂದ ತೆಗೆಸಿ ಹಾಕುತ್ತಿದ್ದೆ. ಅವರು ಒಂದೇ ಸಾರಿ ಬಳಸಿರುವುದರಿಂದ ಇದ್ದುಕೊಳ್ಳಲಿ.

ಶ್ರೀ ವಾಟಾಳ್ ನಾಗರಾಜ್ : ಹಠಮಾರಿತನ ಎಂದರೆ ಎರಡೂ ಸೇರಿಬಿಟ್ಟಿತು. ಹಠವೂ ಸೇರಿತು. ಮಾರಿಯೂ ಸೇರಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಬೇಡ ಎಂದು ಹೇಳುತ್ತಿದ್ದೇನೆ. ಅವರು ಇಬ್ಬರೂ ಸೇರಿ ನಿಮ್ಮನ್ನು ನಿಜವಾಗಿಯೂ ''ಮಾರಿ'' ಎಂದು ಮಾಡುತ್ತಿದ್ದಾರೆ. ನಿವು ಇದನ್ನು ದಯವಿಟ್ಟು ಒಪ್ಪಬೇಡಿ.

ಒಬ್ಬ ಮಾನ್ಯ ಸಚಿವರು : ಸನ್ಮಾನ್ಯ ಮಂತ್ರಿಗಳು ಹಾಗೆ ಹೇಳಲಿಲ್ಲ. ಮಹಿಳೆಯರೆಲ್ಲರೂ ಹಠಮಾರಿಗಳು ಎಂದು ಹೇಳಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ಏನು ಬೇಕಾದರೂ ಹೇಳಲಿ. ನಾನು ಹೆಣ್ಣುಮಕ್ಕಳಿಗೆ ಅಧಿಕಾರ ಕೊಡುವ ಬಗ್ಗೆ, ಇದರಿಂದ ಸಹಾಯವಾಗುವುದಾದರೆ, ಅವರು ಏನು ಬೇಕಾದರೂ ಹೇಳಲಿ. ಮಾರಮ್ಮನ ದೇವಸ್ಥಾನ ಇದೆ. ಎಲ್ಲರೂ ಪೂಜೆ ಮಾಡುತ್ತಾರೆ. ಊರಿಗೊಂದು ಮಾರಮ್ಮ ಇದ್ದಾರೋ ಇಲ್ಲವೋ. ಅಂದರೆ ಈ ಸದನದಲ್ಲಿಯೂ ಒಬ್ಬರು ಮಾರಮ್ಮ ಇದ್ದಾರೆ ಎಂದು ಅದರ ಅರ್ಥ. ಆ ಅರ್ಥದಲ್ಲಿ ಅವರು ಹೇಳಿದ್ದಾರೆಂದು ನಾನು ಅಂದು ಕೊಂಡಿದ್ದೇನೆ. ಅವರು ಆ ರೀತಿ ಈ ಸದನದಲ್ಲಿ ಒಬ್ಬರು ಮಾರಮ್ಮ ಇದ್ದಾರೆಂದರೆ, ನನ್ನದೇನೂ ತಪ್ಪಿಲ್ಲ. ಎಲ್ಲರೂ ಪೂಜೆ ಮಾಡಲಿ ಏನೂ ತಪ್ಪಿಲ್ಲ. ಅದಕ್ಕೆಲ್ಲ ಖಂಡಿತವಾಗಿಯೂ ಹೆದರುವವರು ನಾವಲ್ಲ. ಸನ್ಮಾನ್ಯ ಕಾನೂನು ಸಚಿವರು ಈಗ ಗಂಡಸರು ಇರಬೇಕೆಂದು ಹೇಳಿದರು. ಅಂದರೆ, ಇದು ಆ ಉದ್ದೇಶದಿಂದಲೇ ತಯಾರು ಮಾಡಿದ್ದಾರೆಂದಾಯಿತು. ಇದನ್ನು ಮಹಿಳೆಯರು ಖಂಡಿತವಾಗಿಯೂ ಒಪ್ಪುವುದಿಲ್ಲ. ನಾನು ಹೇಳುತ್ತೇನೆ, ನೀವು ಸೆಕ್ರೆಟರಿ ಎಂದು ನೇಮಕ ಮಾಡುವ ಸಂದರ್ಭದಲ್ಲಿ ಹೇಳಬೇಕಾದರೆ, ದಯವಿಟ್ಟು ತಾವು "an officer" ಎಂದು ಹೇಳುವ ಕಡೆ Shall be a woman officer not below the rank of Joint Secretary ಎಂದು ಮಾಡಿದರೆ, ಅಲ್ಲಿ ಒಬ್ಬ ಜಾಯಿಂಟ್ ಸೆಕ್ರೆಟರಿ ಒಬ್ಬ ಮಹಿಳೆ ಬರುವುದಕ್ಕೆ ಅವಕಾಶವಾಗುತ್ತದೆ. ಯಾವ ಒಂದು ಕಾರಣದಿಂದ, ಈ ಕ್ಲಾಸನ್ನು ಹಾಕುತ್ತೀರಿ? ನೀವು ಈ ರೀತಿ ಮಾಡುವುದಾದರೆ, ಪವರ್ಸ್ ಆಫ್ ದಿ ಸೆಕ್ರೆಟರಿ ನೋಡಬೇಕು. ಎಲ್ಲಾ ಅಧಿಕಾರವನ್ನು ಇವರಿಗೆ ಕೊಟ್ಟಿದ್ದಾರೆ. ಅಂದರೆ, ಹೆಸರಿಗೆ ಮಾತ್ರ ಮಹಿಳೆಯರ ಆಯೋಗ ಎಲ್ಲಾ ಅಧಿಕಾರಿಗಳೂ ಮಹನೀಯರ ಕೈಯಲ್ಲಿ. ಇದಕ್ಕೆ ಆಯೋಗ ಎಂದು ಏಕೆ ಹೇಳಬೇಕು? ತಾವು ದಯವಿಟ್ಟು ಇದರ ಬಗ್ಗೆ ಸೂಕ್ತವಾಗಿ ನೋಡಬೇಕು. ಇನ್ನೊಂದು ನನಗೆ ಬಹಳ ಆಶ್ಚರ್ಯವಾಗುತ್ತದೆ. ಇದು ತರಾತುರಿಯಲ್ಲಿ ಮಾಡಿರತಕ್ಕ

ಬಿಲ್. ತಾವು ದಯವಿಟ್ಟು ನೋಡಬೇಕು. ಪ್ರಿಯಾಂಬಲ್ ಕೂಡ ಸರಿಯಾಗಿ ಮಾಡಿಲ್ಲ. ನನಗನಿಸುತ್ತದೆ. ಕಾಪಿ ಮಾಡುವುದನ್ನಾದರೂ ಸರಿಯಾಗಿ ಮಾಡಲಿ. ಅದನ್ನು ಮಾಡಬೇಕಾದರೂ ಸರಿಯಾಗಿ ಮಾಡಲಿಲ್ಲ. ಇವರಿಗೆ ಕಾಪಿ ಮಾಡುವುದಕ್ಕೂ ಬರುವುದಿಲ್ಲ.

"Where as it is expedient to constitute a State Commission for women and to provide for matters connected therewith...." ಅಂದರೆ ಇದು ಏನು? ಅಂತ ನನಗೆ ಅರ್ಥವಾಗುವುದಿಲ್ಲ. "matters connected therewith" ಇದಕ್ಕೆ ಅರ್ಥ ಏನು ಅಂತ ದಯವಿಟ್ಟು ಕೊಡಬೇಕು. ನಾನು ಸೂಕ್ಷ್ಮವಾಗಿ ಹೇಳಿದ್ದೆ, "to improve the status and dignity of women in Karnataka and to enquire the practices derogatory to the dignity and honour and rights of women and to monitor the same"

ಈ ಅಬ್ಜಕ್ಟ್ ಇಟ್ಟುಕೊಂಡು ತರಬೇಕೆಂದು ನಾವು ಹೇಳಿದ್ದೆವು. ತಂದಿರಿ ಎಲ್ಲಾ ನಾವು ಬರೆದು ಕೊಟ್ಟಿದ್ದೆವು ಬರೆದುಕೊಟ್ಟಿದ್ದನ್ನು ಕಣ್ಣಿನಿಂದ ಕೂಡ ನೋಡುವುದಕ್ಕೆ ನಿಮಗೆ ಸೌಜನ್ಯ ಇಲ್ಲ. ಇದು ನನಗೆ ಅರ್ಥವಾಗುವುದಿಲ್ಲ. ತಾವು ನೋಡಬೇಕು ಕಾನೂನು ಮಂತ್ರಿಗಳು -" matters connected therewith"

ಅಂದರೆ ಏನು ಸ್ವಾಮಿ ಇದು? ತಾವು ಯೋಜನೆ ಮಾಡಬೇಕು. ನಾವೇನು ಇಂಗ್ಲೀಷ್ ಪ್ರಬುದ್ಧರು ಎಲ್ಲಾ ನಮಗೆ ಗೊತ್ತಿದೆ ಅಂತ ನಾನು ಹೇಳುತ್ತಿಲ್ಲ. ಆದರೆ ಬರೆಯುವಂತಹ ಸಂದರ್ಭದಲ್ಲಿ ಈ ಕಾನೂನು ತಂದಿದ್ದು ಏತಕೋಸ್ಕರ? ಯಾರ ಉದ್ಧಾರಕ್ಕೆ ತಂದಿದ್ದೀರಿ? ಯಾರ ಡಿಗ್ನಿಟಿ ಉಳಿಸುವುದಕೋಸ್ಕರ ತಂದಿದ್ದೀರಿ? ಅದನ್ನು ತಾವು ನೋಡಬೇಕು. ಪ್ರಿಯಾಂಬಲ್ ಅನ್ನು ಯಾವಾಗಲೂ ಇಂಟರ್ ಪ್ರಿಟೇಶನ್ ಮಾಡಬೇಕಾದರೆ ಯಾವುದಾದರೂ ಕಾನೂನಿನಲ್ಲಿ ಪ್ರಿಯಾಂಬಲ್ ನೋಡುತ್ತಾರೆ ಯಾವ ಉದ್ದೇಶಕ್ಕೆ ತಂದಿದ್ದಾರೆ. ಅಂತ ನೋಡುತ್ತಾರೆ. ಕೋರ್ಟ್‌ಗೆ ಹೋದಾಗ, let us look into the preamble ಅಂತಾರೆ.

ಈ ತರಹ "to provide for matters connected therewith" ಅಂದರೆ ಇದರ ಅರ್ಥ ಜಡ್ಜಗಳಿಗೆ ಬಿಡಬೇಕಾಗುತ್ತದೆ. ಇದನ್ನು ಈ ರೀತಿ ಬಿಡ ಬಾರದಾಗಿತ್ತು. ನೀವು. ಈ ಬಿಲ್ ತಂದು ಆಗಿದೆ ನಾನು ಹೇಳುತ್ತಿದ್ದೇನೆ ಈಗ ನನ್ನದು ತಕರಾರು ಇಲ್ಲ. ಆದರೆ ತರತಕ್ಕಂಥ ಸಂದರ್ಭದಲ್ಲಿ ಮುಂದೆ ತರುವಾಗ ಇದನ್ನು ಸ್ವಲ್ಪ ನೋಡಬೇಕು. ಇದಕ್ಕೆ ಸೂಕ್ತವಾಗಿ ತಿದ್ದುಪಡಿ ತರಬೇಕು. ಇಲ್ಲಿ "six members to be nominated by the Government"

ಅಂತ ಹೇಳಿದಿರಿ. ದಯವಿಟ್ಟು ಸೆಕ್ಷನ್ 2(ಬಿ) ನೋಡಬೇಕು ತಾವು.ಇದರಲ್ಲಿ ತಾವು ಏನು ಹೇಳಿದ್ದೀರಿ"......who have had experience in law or

legislation..."ಜೊತೆಯಲ್ಲಿ ಟ್ರೇಡ್ ಯೂನಿಯನ್ ಅಂತ ತಂದಿದ್ದೀರಿ journalism, unionism, medicine, engineering...

ಇದರಲ್ಲಿ ಇರತಕ್ಕಂಥ ಪ್ರಬುದ್ಧರಾದವರನ್ನು ತೆಗೆದುಕೊಳ್ಳಬೇಕೆಂದು ನಾವು ಸಲಹೆ ಕೊಟ್ಟಿದ್ದೇವು. ಎಲ್ಲಾ ಮಹಿಳೆಯರು ಎಲ್ಲಾ ಎನ್.ಜಿ.ಒ.ಗಳು ಕುಳಿತುಕೊಂಡು 8 ದಿವಸ ಈ ರೀತಿ ಮಾಡಬೇಕೆಂದು ಹೇಳಿದ್ದರೆ ಆ 8 ದಿವಸ ಕುಳಿತುಕೊಂಡು ಮಾಡಿದ್ದಕ್ಕಾದರೂ ಬೆಲೆ ಬೇಡವೇ? ತಾವು ನೋಡಬೇಕು ಇವರೆಲ್ಲರಿಗೂ ಕೊಡುವಂತೆ ಮಾಡಬೇಕೆಂದು ಹೇಳಿದ್ದೆವು. ಇದು ಟೈಪಿಂಗ್ ಮಿಸ್ಟೇಕೋ ಏನೋ ಗೊತ್ತಿಲ್ಲ. ಸೆಕ್ಷನ್ (ಬಿ) ಕೆಳಗಡೆ,"women's voluntary organisations including women activities"

ಏನು ಸ್ವಾಮಿ ಇದರ ಅರ್ಥ? ಇದನ್ನು"activists" ಎಂದು ಕರೆಯಬೇಕಲ್ಲ ತಮ್ಮ ಅಭಿಪ್ರಾಯದಲ್ಲಿ"women activists" ಅಂತ ಇರಬೇಕೆಂದು ನಾನು ಅಂದು ಕೊಂಡಿದ್ದೇನೆ. ಇಲ್ಲಿ ವುಮೆನ್ ಆ್ಯಕ್ಟಿವಿಟೀಸ್ ಅಂತ ಇದೆ ಅಂದರೆ ಇದರ ಅರ್ಥ ಏನು? ಇದು ನನಗೆ ಅರ್ಥವಾಗಲಿಲ್ಲ. ಆ್ಯಕ್ಟಿವಿಟೀಸ್ ಅಂತ ಇರಬೇಕು. ಈ ರೀತಿ ತಾವು ಬಿಲ್‌ನಲ್ಲಿ ತರಬೇಕಾದರೆ ಇದೇ ರೀತಿ ತಾವು ಬಿಲ್ ಪಾಸ್ ಮಾಡುವುದಾದರೆ ನಗುತ್ತಾರೆ ಜನ. ಇದು ಏನು ಅಂತ ನೋಡದೇ ಯಾರೋ ತಪ್ಪುಮಾಡುತ್ತಾರೆ ಡ್ರಾಫ್ಟ್ ತರುತ್ತೇವೆ ಆಯಿತು ಕಣ್ಣುಮುಚ್ಚಿಕೊಂಡು ಬ್ಲೈಂಡ್ ಆಗಿ ತರುತ್ತೇವೆ ಅಂದ್ರೆ ತನ್ನಿ. ನಾವು ಬೇಡ ಅಂತ ಹೇಳುವುದಿಲ್ಲ. ಆದರೆ ವುಮೆನ್ ಆ್ಯಕ್ಟಿವಿಟೀಸ್ ಅಂದರೆ ಸ್ವಲ್ಪ ಸೂಕ್ತ ಆಗಬಹುದು. ದಯವಿಟ್ಟು ತಾವು ನೋಡಬೇಕು. ಆಮೇಲೆ ಅಡ್ಮಿನಿಸ್ಟ್ರೇಶನ್‌ನಲ್ಲಿ ಪಬ್ಲಿಕ್ ಅಡ್ಮಿನಿಸ್ಟ್ರೇಶನ್ ಅಂತ ಅಲ್ಲಿ ಬರಬೇಕಾಗಿತ್ತು. ಅದರ ಬಗ್ಗೆ ಕೂಡ ತಾವು ಏನೂ ಯೋಚನೆ ಮಾಡಿಲ್ಲ. ಇದರ ಬಗ್ಗೆಕೊಡ ತಾವು ನೋಡಬೇಕಾಗಿತ್ತು. ಇದರಲ್ಲಿ ಹೆಚ್ಚಾಗಿ ಏನೇನು ಇರಬೇಕೆನ್ನುವುದರ ಬಗ್ಗೆ ಹೇಳಿದ್ದೆವು. ಪ್ರಿಸ್‌ಕ್ರೈಬ್ ಅಂತ ಹೇಳಿದ್ದೆವು. ಡೆಫನೇಶನ್ ಕೊಡಿ ಅಂತ ಹೇಳಿದ್ದೆವು. ರಿಜಿಸ್ಟರ್ಡ್ ಅಂತ ಡೆಫನೇಶನ್ ಕೊಡಿ ರಿಜಿಸಟರ್ಡ್ ಅಂದರೆ ವುಮೆನ್ಸ್ ಕಮಿಷನ್‌ನಲ್ಲಿ ಯಾವ ಯಾವ ವಾಲೆಂಟರಿ ಆರ್ಗನೈಜೇಶನ್ಸ್ ಇದೆ. ಅದನ್ನು ಈ ಮಹಿಳಾ ಆಯೋಗಕ್ಕೆ ರಿಜಿಸ್ಟರ್ ಆಗಬೇಕೆಂದು ಹೇಳಿ ರಿಜಿಸ್ಟರ್ಡ್ ಅಂತ ಮಾಡಿ ಎಂದು ಹೇಳಿದ್ದೆವು. ಬಿಲ್ ತಯಾರು ಮಾಡಿ ಕೊಟ್ಟಿದ್ದು ನಾವು. ರಿಜಿಸ್ಟರ್ಡ್ ಅಂತ ಮಾಡಿ ತಾವು ದಯವಿಟ್ಟು ಲಾ ಡಿಪಾರ್ಟ್‌ಮೆಂಟಿನಲ್ಲಿ ಈ ಬಿಲ್‌ನ್ನು ಯಾರಾದರೂ ನೋಡಿದ್ದಾರೋ? ತಾವು ಸೂಕ್ತವಾದ ಬದಲಾವಣೆಗಳನ್ನು ಇದರ ಬಗ್ಗೆ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ತಾವು ಸೆಕ್ಷನ್ 4 ಅನ್ನು ನೋಡಬೇಕಾಗುತ್ತದೆ. Sub-section (3)(a) of Section-4-"becomes on undischarged inslovent" ಏನು ಸ್ವಾಮಿ ಇದು? ವುಮೆನ್ಸ್ ಬಿಲ್ ಅಂದರೆ ಎಷ್ಟು ಬೇಜವಾಬ್ದಾರಿ ಅಂತ ನಾನು ಹೇಳುತ್ತಿದ್ದೇನೆ. ಹಾಗೆಯೇ ಸ್ವಲ್ಪ ಮುಂದೆ ಓದಿ- " becomes of unsound mind and stands so declared by a competent court"

ಅಂದ್ರೆ ಏನು ಸ್ವಾಮಿ ಇದು. ಅಂದರೆ ಕೋರ್ಟಿಗೆ ಹೋಗಿ ಅವರು ಹುಚ್ಚರು ಅಂತ ನಿರ್ಧಾರ ಆದ ಮೇಲೆ ತೆಗೆಯುತ್ತೇನೆ ಎಂದು ಒಂದು ಕೋರ್ಟಿಗೆ ಹೋದರೆ 5 ವರ್ಷ ಅಷ್ಟು ಹೊತ್ತಿಗೆ ಆ ಆಯೋಗವೇ ಮುಗಿದು ಹೋಗಿರುತ್ತದೆ. she will be continued as a member. ಏಕೆಂದರೆ ಕಣ್ಣುಮುಚ್ಚಿಕೊಂಡು ಮಾಡುವುದು ಬೇಡ ಎಂದು ನಾನು ಹೇಳುವಂಥದ್ದು. ತಾವು ಇದನ್ನು ನೋಡಬೇಕಾಗಿತ್ತು. ಸೆಕ್ಷನ್(ಎಫ್)ನೋಡಿ. Section 4 (3)(f): "In the opinion of the Government, has so abused the position of the chairperson or member so as to render that person's continuance in office detrimental to the public interest."

It must be detrimental to the interest of women welfare. ಆಗಬೇಕು. Not for public interest. ನಾಣಯ್ಯನವರು ಎಲ್ಲಿಯಾದರೂ ಹೋದಾಗ ಅವರು ಅಲ್ಲಿ ಪಬ್ಲಿಕ್ ಇಂಟ್ರೆಸ್ಟ್ ತರುತ್ತಾರೆ. ತೆಗೆದುಕೊಳ್ಳಬೇಡಿ ಅಂತ ಹೇಳುತ್ತಾರೆ.This will come in the way. ಪಬ್ಲಿಕ್ ಇಂಟ್ರೆಸ್ಟ್ ಖಂಡಿತ ಅಲ್ಲ. ಅದು ವುಮೆನ್ಸ್ ವೆಲ್‌ಫೇರ್ ಇಂಟ್ರೆಸ್ಟ್‌ಗೆ ಏನಾದರೂ detrimental ಆದಾಗ ಮಾತ್ರ ತೆಗೆಯಬಹುದೇ ವಿನಹಃ not any other interest.

ಇದು ಸೆಕ್ರೆಟರಿ ತಾವು ನೋಡಬೇಕು. ಸೆಕ್ಷನ್(7) ನೋಡಿ ತಾವು. Meetings of the commission:-(1) The Commission shall meet as and when necessary at Bangalore or at such other places as the Chairperson may think fit". Majority of the members. ಹೇಳಿದರೆ ಆ ಪ್ರಕಾರ ಆಗಬೇಕೇ ಹೊರತು it should not be at the fancy of the Chairperson. He will say I will hold the meeting at Gulbarga. That should not be there.

ಆಮೇಲೆ ರೂರಲ್ ರೆಪ್ರಜೆಂಟೇಶನ್‌ಗೆ ಕಾನ್‌ಸ್ಟಿಟ್ಯೂಶನ್ ಆಫ್ ಕಮಿಟಿಯಲ್ಲಿ ಹೇಳಿಲ್ಲ.' "Six members to be nominated."

ಅಂತ ಹೇಳಿದ್ದೀರಲ್ಲ ಅಲ್ಲಿ ರೂರಲ್ ವುಮನ್ಸ್‌ಗೆ ರೆಪ್ರಜೆಂಟೇಶನ್ ಕೊಡಬೇಕೆಂದು ರೆಕಮೆಂಡೇಶನ್ ಮಾಡಿದ್ದೆವು. ಇದು ಮಹಿಳೆ ಆಯೋಗ ಅಂದಾಗ ರೂರಲ್ ರೆಪ್ರಜೆಂಟೇಶನ್ ಆಗಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಅಂದ್ರೆ ಬೆಂಗಳೂರಿನಲ್ಲಿರತಕ್ಕಂಥ ಮಹಿಳೆಯರೇ ಸೇರಿಸಿ ಒಂದು ಆಯೋಗವನ್ನು ರಚಿಸಿದ್ದೇ ಆದರೆ ರೂರಲ್ ಸೆಕ್ಟಾರ್‌ನಲ್ಲಿರುವ ವುಮನ್ಸ್ ಕಷ್ಟ ಸುಖಗಳನ್ನು ನೋಡುವುದಕ್ಕೆ ಆಗುವುದಿಲ್ಲ ಅಂತ ಹೇಳಿ ಅದಕ್ಕೆ ಒಂದು ಸ್ಪೇಷಲ್ ರೆಕಮೆಂಡೇಶನ್ ಕೊಟ್ಟಿದ್ದೆವು.

ಯಾವ ರೀತಿ ಮಾಡಬೇಕು ಮಾಹಿಳೆಯರಿಗೆ ರೂರಲ್ ರೆಪ್ರಜೆಂಟೇಶನ್ ಹೇಗೆ ಇರಬೇಕು ಅಂತ. ಅದರ ಬಗ್ಗೆ ತಾವು ಇದರಲ್ಲಿ ಏನೂ ಗಮನವೇ ಕೊಟ್ಟಿಲ್ಲ. ಆಮೇಲೆ ತಾವು ಇನ್ಸ್‌ಪೆಕ್ಷನ್ ಬಗ್ಗೆ ಸೆಕ್ಷನ್ 9(ಐ)ನಲ್ಲಿ ನೋಡಬೇಕು.

" inspect or cause to be inspected a jail, remand home, women's institution or other place....."

ಅಂದ್ರೆ ನಮಗೆ ಮುಖ್ಯವಾಗಿ ಬೇಕಾಗಿರುವುದು inspection of police stations, sub-jails, lock-ups and rescue homes.

ಪೋಲೀಸ್ ಸ್ಟೇಷನ್‌ಗೆ ಹಿಡಿದುಕೊಂಡು ಹೋಗಿ 8 ದಿವಸ ಆದರೂ ಸಹ ಕೋರ್ಟಿಗೆ ಹಾಜರ್ ಮಾಡಿರುವುದಿಲ್ಲ. ಅಲ್ಲೇ ಇಟ್ಟುಕೊಂಡಿರುತ್ತಾರೆ. ಅಲ್ಲೇ ಇದ್ದದ್ದು ನಮ್ಮ ರೆಪ್ರಜಂಟೇಶನ್. ಪೋಲೀಸ್ ಸ್ಟೇಷನ್‌ಗಳಲ್ಲಿ ಮಹಿಳೆಯರನ್ನು ಇಟ್ಟಿದ್ದಾರೆ ಅಂತ ಏನಾದರೂ ದೂರುಗಳು ಬಂದರೆ 6 ಗಂಟೆ ಮೇಲೆ ಕರೆದುಕೊಂಡು ಹೋಗಿ ಇರುತ್ತಾರೆ ಅಂತ ದೂರು ಬಂದರೆ ಅದನ್ನು ಹೋಗಿ ನೋಡಬೇಕು ಅಂತ ಇದನ್ನು ಬಿಟ್ಟರು. ಏತಕ್ಕೆ ಬಿಟ್ಟರು ಅಂತ ಗೊತ್ತಿಲ್ಲ. ದಯವಿಟ್ಟು ಮುಖ್ಯವಾದುದು ಪೋಲೀಸ್ ಸ್ಟೇಷನ್ ಲಾಕಪ್ಸ್ ಸಬ್‌ಜೈಲ್ಸ್, ಇದನ್ನು ನೋಡುವುದಕ್ಕೆ ತಾವು ಇದರಲ್ಲಿ ಇನ್‌ಕ್ಲೂಡ್ ಮಾಡಬೇಕಾಗುತ್ತದೆ. ಆಮೇಲೆ ಸೆಷನ್ 11 ಸ್ವಲ್ಪ ದಯವಿಟ್ಟು ನೋಡಬೇಕು.

Section: 11 - committees of the commission. I would request you to delete this entire section.

It says, the commission shall have the power to co-opt as members including representatives of non-Governamental Organisations on any Committe. you are giving the discretion to the commission to co-opt as many members as possible and make it a mess.

Sub-section(3) of Section 11:

"The persons so co-opted shall be entitled to receive such allowances for attending the meetings of the committee as may be prescribed".

ಅಂದರೆ ಅನ್ ಲಿಮಿಟ್‌ಡ್ ಮೆಂಬರ್ಸ್ ತರುತ್ತಾರೆ. ಯಾರಿಗೆ ಸ್ವಾಮಿ ಈ ದುಡ್ಡು ಏನೂ ಆಗುವುದಿಲ್ಲ ಇದರಿಂದ ಕೆಲಸ. ಬರೀ ಕಮಿಟಿ ಮೆಂಬರ್ಸ್‌ಗೆ ಅಲೋಯನ್ಸ್‌ಸ್ ಕೊಡುವುದಕ್ಕೆ ನೀವು ಕೊಡುವ ಹಣ ಎಲ್ಲಾ ಹೋಗುತ್ತದೆ. This must be deleted. These powers cannot be there.

9 ಮೆಂಬರ್ಸ್ ಅಂದ ಮೇಲೆ 9 ಜನ ಮೆಂಬರ್ಸ್ ಇರಬೇಕು. ಎಷ್ಟು ಬೇಕಾದರೂ ಹಾಕಿಬಿಡುತ್ತೀರಿ ಅನ್‌ಲಿಮಿಟೆಡ್ ಮೆಂಬರ್ಸ್ ಎನ್ನುವುದು ಸಾಧ್ಯ

ಇಲ್ಲ. ಪವರ್ಸ್ ಆಫ್ ಧಿ ಕಮಿಷನ್ ಅನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಇದರಲ್ಲಿ ಪವರ್ಸ್ ಏನು ಕೊಟ್ಟಿದ್ದೀರಿ ಸಿವಿಲ್ ಪ್ರೊಸಿಜರ್ ಪ್ರಕಾರ " The Commission shall, while investigating any matter for the purpose of this Act, have all the powers of a Civil Court under Civil Procedure Code in trying a suit and in particular in respect of the following matters."

ಅಂತ ಅಂದುಬಿಟ್ಟರಿ. ನಾನು ಹೇಳುವುದು ನಮ್ಮ ರೆಕಮೆಂಡೇಶನ್‌ನಲ್ಲಿ along with that we had clearly said, "any proceedings before the Commission shall be a judicial prodeedings." ಅಂತ ಹೇಳಿದ್ದೆವು Otherwise there is no use. Unless you make the proceedings before the commission either a judicial or quasi-judicial proceedings, it will have no teeth at all. It should have a judicial proceedings within the meaning of Section 193 and Section 228 of the Criminal Procedure Code. ಅಂತ ಕೇಳಿದ್ದೇವು ಹಾಗಾದಾಗ,

4.40 ಪಿ. ಎಂ

"It shall be deemed to be a court for the purpose of Section 195 of the code of Criminal procedure."

ಎಂದು ಹೇಳಿದ್ದೇವೆ. ಹೆಚ್ಚು ಕಡಿಮೆ ನಮ್ಮ ಆಯೋಗಕ್ಕೆ ಇರತಕ್ಕಂಥಾದ್ದು, ಸಿವಿಲ್ ಕೋರ್ಟ್‌ನಲ್ಲಿ ಡಿಸ್‌ಪ್ಯೂಟ್ ಆದರೆ, ಇಲ್ಲಿ ನಾವು ರೆಮಿಡಿ ತೆಗೆದುಕೊಳ್ಳುತ್ತೇವೆ. It is only because of attrocities on women, it should be only under Criminal Proceedings.

ಪೋಲೀಸ್‌ನವರು ಸರಿಯಾಗಿ ಕೆಲಸ ಮಾಡಿದ್ದಾರೋ, ಇಲ್ಲವೋ ಎಂದು ಸರಿಯಾಗಿ ನೋಡಬೇಕಾಗಿದೆ. For that purpose we need power under Section 193 of the Criminal Procedure Code.

ಇದನ್ನು ಮಾಡದೆ ಇತ್ತು ಎಂದರೆ ನಾವು ಯಾರನ್ನೂ ಸಮನ್ ಮಾಡುವುದಕ್ಕಾಗುವುದಿಲ್ಲ. ಇನ್‌ವೆಸ್ಟಿಗೇಷನ್ ಮಾಡುವುದಕ್ಕಾಗುವುದಿಲ್ಲ. We will not have any power. you may give it.

ನೀವು ಕೇರಳ ರಾಜ್ಯದ ಬಿಲ್‌ನ್ನು ತರಿಸಿ ನೋಡಿ, ಬೇರೆ ರಾಜ್ಯಗಳಲ್ಲೂ ಮಾಡಿರುವುದನ್ನು ತರಿಸಿ ನೋಡಿ, ಇಲ್ಲಿ ಏಕೆ ಮಾಡುತ್ತಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ.

ಪವರ್ ಕೊಡದಿದ್ದರೆ ಇದರಲ್ಲಿ ಏನೂ ಅರ್ಥ ಇರುವುದಿಲ್ಲ. ಇಲ್ಲಿ ಹೆಸರಿಗೆ ವುಮೆನ್ಸ್ ಆಯೋಗ ಅಂತ ಇರುತ್ತದೆ.Committee meetings ಆಗುತ್ತದೆ, ಹೋಗುತ್ತದೆ, ಬರುತ್ತದೆ, "Once in three months" ಮೀಟ್ ಮಾಡಿ ಅಂತಾರೆ, ಆಮೇಲೆ "Once in one month" ಎಂದು ಹಾಕಬೇಕಾಗುತ್ತದೆ. ಇದೆಲ್ಲವನ್ನೂ ಸೂಕ್ತವಾಗಿ ಹಾಕಿ ಮಾಡಿದರೆ ಮಾತ್ರ. ಅನುಕೂಲವಾಗುತ್ತದೆಯೇ ಹೊರತು ಇಲ್ಲದಿದ್ದರೆ ಏನು ಆಗುವುದಿಲ್ಲ. ಇದನ್ನು ತಾವು ದಯವಿಟ್ಟು ಗಮನಿಸಿ ಇದರಲ್ಲಿ ಏನೇನು ಮಾಡಬೇಕೋ ಅದನ್ನು ತಾವು ಮಾಡಬೇಕು.

ಇನ್ನು "Power to make rules"

ಅದರಲ್ಲಿಯೂ ಕೂಡ "the Government in consultation with the Commission make rules"

ಎಂದು ನಾವು ಹೇಳಿದ್ದೇವೆ. ನೀವು ರೂಲ್ಸ್ ಮಾಡಿಸಿ. ನಮಗೆ ರೂಲ್ಸ್ ಏನು ಬೇಕಾಗುತ್ತದೆಂದು ನಾವು ಮಾಡಬೇಕಾಗುತ್ತದೆ. We said, the provisions of the Act should be notified in the official gazette immediately to avoid delay in making rules. The Commission must formulate the draft rules wherever necessary and submit to the Government for adoption and notification.

ಅಂಥ ನಾವು ಹೇಳಿದ್ದೇವೆ. ಇದಾವುದನ್ನು ಕೂಡ ತಾವು ಗಮನಿಸಿಲ್ಲ. ಈ ರೀತಿ ಮಾಡುವುದಾದರೆ ಇದರಲ್ಲಿ ಏನೂ ಅರ್ಥ ಇಲ್ಲ. ಇದರಿಂದ 'ಯಾವ ಅಧಿಕಾರವೇನೂ ಮಹಿಳೆಯರಿಗೆ ಸಿಗುವುದಿಲ್ಲ. ಆದ್ದರಿಂದಾಗಿ ಏನು ನೀವು ಅಬ್ಜಕ್ಟ್‌ನ್ನು ಅಚೀವ್ ಮಾಡಬೇಕೆಂದಿದ್ದೀರಿ, ಅದನ್ನು ಇದರಲ್ಲಿ ಅಚೀವ್ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಕಾರಣದಿಂದಾಗಿ ಈ ಬಗ್ಗೆ ತಾವು ಸರಿಯಾಗಿ ಗಮನಹರಿಸಬೇಕಾಗುತ್ತದೆ.' ಯಾವ ಯಾವ ಕಾನೂನುಗಳಿಂದ ಮಹಿಳೆಯರಿಗೆ ಅನ್ಯಾಯವಾಗುತ್ತದೆಯೋ ಅದನ್ನು ನೋಡುವುದಕ್ಕೆ ಮಹಿಳೆಯರಿಗೆ ಅಧಿಕಾರ ಇರಬೇಕು. ಇವತ್ತಿನ ದಿವಸ ರೇಷ್ಮೆ ಬಿಲ್ ತಂದಿದ್ದೀರಿ, ನಾನು ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ನಮ್ಮ ರಾಜ್ಯದ ಪ್ರತಿಯೊಬ್ಬ ಮಹಿಳೆಯೂ ಕೂಡ ರೇಷ್ಮೆ ಸೀರೆ ಉಡುವ ಹಾಗೆ ಆಗಬೇಕು. ಅದಕ್ಕೆ ಹಾಕಿರತಕ್ಕ ಟ್ಯಾಕ್ಸನ್ನು ತೆಗೆಯಿರಿ ಅಂತ ಹೇಳಿದ್ದೆ, ಆದ್ದರಿಂದ ಯಾವ ಯಾವ ಬಿಲ್‌ಗಳಿಂದ ಅನ್ಯಾಯವಾಗುತ್ತಿದೆಯೋ ಅದರ ಬಗ್ಗೆ ನಾವು ಇಲ್ಲಿ ವಿಚಾರ ಮಾಡಬೇಕಾಗುತ್ತದೆ. ಯಾವ ಸೆಕ್ಷನ್‌ನಲ್ಲಿ ಎಲ್ಲಿ ಅಮೆಂಡ್‌ಮೆಂಟ್ ಆಗಬೇಕು? ಯಾವ ರೀತಿ ಮಾರ್ಪಾಡು ಆಗಬೇಕು? ಯಾವ ಸೆಕ್ಷನ್ ಡಿಲೀಟ್ ಆಗಬೇಕು? ಇದರ ಬಗ್ಗೆ ನಾನು ಟೈಪ್ ಮಾಡಿ ಇಟ್ಟಿದ್ದೆ. ಅದನ್ನು ಸಭೆಯ ಗಮನಕ್ಕೆ ತಂದರೆ ಈ ಬಿಲ್ ಮುಂದಕ್ಕೆ ಹೋಗುತ್ತದೆಂದು ನಾನು ತಂದಿಲ್ಲ.

ಇವತ್ತು ಅಮೆಂಡ್‌ಮೆಂಟ್ ತಂದಿದ್ದರೆ ಈ ಬಿಲ್ ಪಾಸ್ ಆಗುವುದಿಲ್ಲ. ಈಗ ಈ ಬಿಲ್ಲನ್ನು ತನ್ನಿ, ನಂತರ ಸೂಕ್ತವಾದ ತಿದ್ದುಪಡಿ ತಂದು ಇದರಲ್ಲಿ ಏನು ಅನ್ಯಾಯ ಆಗಿದೆಯೋ ಅದನ್ನು ಸರಿಪಡಿಸಬೇಕು. ಕೇರಳ ರಾಜ್ಯದಲ್ಲಿ ಮಾಡಿರುವುದನ್ನೇ ನೀವೂ ಫಾಲೋ ಮಾಡಿ ಎಂದು ಹೇಳುತ್ತಿಲ್ಲ. ಆದರೆ ಕೇರಳ ರಾಜ್ಯದಲ್ಲಿ ಇದರ ಬಗ್ಗೆ ಒಂದು ಮಾರ್ಪಾಡು ಮಾಡಿದ ಬಿಲ್ಲನ್ನು ತಂದಿದ್ದಾರೆ, ಅದು ಸೂಕ್ತವಾಗಿದೆ. ಹಾಗೂ ಶಕ್ತಿಯುತವಾಗಿದೆ. ಅದನ್ನು ತಾವು ನೋಡಿ ನಮ್ಮ ಬಿಲ್‌ನಲ್ಲಿ ಏನೇನು ಲೋಪ ದೋಷಗಳು ಆಗಿವೆಯೋ ಅದನ್ನು ಸರಿಪಡಿಸಿ. ಪ್ರಪ್ರಥಮವಾಗಿ ಈ ಸರ್ಕಾರವು ಮಹಿಳೆಯರಿಗೋಸ್ಕರ ಮಹಿಳಾ ಆಯೋಗವನ್ನು ತರುವ ಪ್ರಯತ್ನ ಮಾಡಿರುವುದರಿಂದ ಅದಕ್ಕೆ ನನಗೆ ಸಂತೋಷವಾಗಿದೆ ಮತ್ತು ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಮಹಿಳಾ ಆಯೋಗವನ್ನು ಮಾಡತಕ್ಕಂಥ ಕೆಲಸಕ್ಕೆ ನಮ್ಮದು ಪೂರ್ಣ ಬೆಂಬಲ ಇದೆ.

ಶ್ರೀ ಹೆಚ್.ಡಿ.ದೇವೇಗೌಡ: ಅದಕ್ಕೆ ನಿಮ್ಮನ್ನೇ ಅಧ್ಯಕ್ಷರನ್ನಾಗಿ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ನಿಮಗೆ ಅಧ್ಯಕ್ಷಗಿರಿಯನ್ನು ಕೊಡುತ್ತೇವೆಂದು ಹೇಳಿ ನಿಮ್ಮ ಪಾರ್ಟಿಯನ್ನು ಒಡೆದುಹಾಕುತ್ತಾರೆ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಒಳ್ಳೆಯ ಕೆಲಸ ಮಾಡಿದರೆ ಗುಣಕ್ಕೆ ಮತ್ಸರ ಏಕೆ? ಗುಣಕ್ಕೆ ಮತ್ಸರ ಬೇಡ. ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್: ಮುಖ್ಯಮಂತ್ರಿಗಳು ನಿಮಗೆ ಬಹಿರಂಗ ಆಹ್ವಾನ ಕೊಟ್ಟಿದ್ದಾರೆ. ಇದರಲ್ಲಿ ನಿಮ್ಮ ಪಕ್ಷ ಒಡೆಯುವುದಕ್ಕೆ ಏನಾದರೂ ಪಿತೂರಿ ಇದೆಯೆ?

ಶ್ರೀಮತಿ ಪ್ರಮಿಳಾ ನೇಸರ್ಗಿ: ನಾವು ಬಂಡೆ ಇದ್ದ ಹಾಗೆ . ಯಾರೂ ಏನು ಮಾಡಲಿಕ್ಕೆ ಸಾಧ್ಯವಿಲ್ಲ. ಸ್ಥಿತ ಪ್ರಜ್ಞರು ಇದ್ದ ಹಾಗೆ ನಮ್ಮ ಭಾರತೀಯ ಜನತಾ ಪಾರ್ಟಿ. ಸತ್ಯವನ್ನು ಸತ್ಯವಾಗಿ ನೋಡತಕ್ಕಂಥ ವಿಚಾರಧಾರೆ ನಮ್ಮಲ್ಲಿದೆ. 4 ಜನ ಇದ್ದಾಗಲೇ ಒಡೆಯುವುದಕ್ಕಾಗಲಿಲ್ಲ, ಇನ್ನು 40 ಜನ ಇದ್ದಾಗ ಒಡೆಯುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಬಿ.ಬಿ.ಶಿವಪ್ಪ: ನಾನು ಹೇಳುವುದಿಷ್ಟೇ, ಒಂದು ಅಧ್ಯಕ್ಷತನ ಕೊಟ್ಟು ಪಕ್ಷ ಒಡೆಯುತ್ತೇವೆಂಬ ಭಾವನೆ ನಮ್ಮ ಮಿತ್ರರಲ್ಲಿ ಇದ್ದರೆ, ಒಂದು ಕಾಲದಲ್ಲಿ 4 ಅಧ್ಯಕ್ಷಸ್ಥಾನ ಕೊಟ್ಟಾಗಲೂ ನಮ್ಮ ಪಕ್ಷ ಒಡೆಯಲಿಕ್ಕಾಗಲಿಲ್ಲ. ಇನ್ನು ಒಂದು ಅಧ್ಯಕ್ಷಸ್ಥಾನದಿಂದ ಒಡೆಯುವುದಕ್ಕೆ ಸಾಧ್ಯವೇ ಇಲ್ಲವೆಂದು ತಿಳಿಸಬಯಸುತ್ತೇನೆ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಕನ್ನಡ ಪ್ರಾಧಿಕಾರವನ್ನೇನಾದರೂ ಮಾಡಿದರೆ, ಕನ್ನಡದ ಬಗ್ಗೆ ಕರ್ನಾಟಕದಲ್ಲಿ ಏನಾದರೂ ಆಗಿದ್ದರೆ ಅದನ್ನು ವಾಟಾಳ್ ನಾಗರಾಜ್‌ರವರು ಮಾಡಿದ್ದಾರೆಯೇ ಹೊರತು ಮತ್ಯಾರೂ ಮಾಡಿಲ್ಲ. ಆಗ ಸನ್ಮಾನ್ಯ ಸಭಾ ನಾಯಕರು ವಾಟಾಳ್ ನಾಗರಾಜ್‌ರವರನ್ನೇ ಅಧ್ಯಕ್ಷರನ್ನಾಗಿ ಮಾಡುತ್ತೇವೆಂದರೆ

ನಾವು ಹೊಟ್ಟೆ ಉರಿ ಪಟ್ಟುಕೊಳ್ಳುತ್ತೇವೆಯೇ? ಒಳ್ಳೆಯ ಕೆಲಸ ಮಾಡಿದ್ದಾರೆಂದು ನಮಗೆ ಖುಷಿಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ತಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದರೆ ನಾವೆಲ್ಲಾ ಸ್ವಾಗತ ಮಾಡುತ್ತೇವೆ. ಆದರೆ ನಿಮ್ಮ 40 ಜನರ ಒಗ್ಗಟ್ಟು ಹೋಗಿಬಿಟ್ಟಾತೆಂದು ನನಗೆ ಭಯ ಅಷ್ಟೇ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಆ ಭಯ ನಿಮಗೆ ಬೇಡ. ನಮ್ಮ ರಾಜ್ಯದ ಹೆಣ್ಣು ಮಕ್ಕಳಿಗೆ ಇರತಕ್ಕಂಥ ಕಾನೂನಿಂದ ಏನಾದರೂ ಅನ್ಯಾಯವಾಗುವ ಹಾಗಿದ್ದರೆ ಅದನ್ನು ಸರಿಪಡಿಸುವಂಥ ಕೆಲಸವನ್ನು ಮಾಡೋಣ. ಕರ್ನಾಟಕದಲ್ಲಿ ಮಹಿಳೆಯರು ನಿರಾತಂಕವಾಗಿ ಮಧ್ಯ ರಾತ್ರಿಯಲ್ಲೂ ಯಾವುದೇ ರೀತಿಯಲ್ಲೂ ಭಯ ಭೀತಿ ಇಲ್ಲದೆ ಓಡಾಡುವಂಥ ಪರಿಸ್ಥಿತಿ ನಿರ್ಮಾಣವಾಗಬೇಕು.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ರಾತ್ರಿ ಹೊತ್ತು ಹೆಣ್ಣು ಮಕ್ಕಳು ಓಡಾಡುವುದು ಬೇಡ. ಅದು ಬಹಳ ಅಪಾಯ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಇದು ಅರ್ಥವಾಗಿಲ್ಲ. ಮಧ್ಯ ರಾತ್ರಿಯಲ್ಲಿ ಹೆಣ್ಣು ಮಕ್ಕಳು ಓಡಾಡಿದರೂ ಭಯ ಇಲ್ಲದ ರೀತಿಯಲ್ಲಿ ನಿರ್ಭೀತ ವಾತಾವರಣ ಉಂಟಾಗುವಂಥ ಪರಿಸ್ಥಿತಿ ನಿರ್ಮಾಣವಾಗಬೇಕಾಗಿದೆ ಎಂದು ನಾನು ಹೇಳಿದೆ. ಅದಕ್ಕಾಗಿ ಇಂಥಾ ಆಯೋಗಗಳ ಅವಶ್ಯಕತೆ ಇದೆ. ಈ ಆಯೋಗ ರಚನೆ ಮಾಡಲು ವಿಧೇಯಕವನ್ನು ಪ್ರಪ್ರಥಮವಾಗಿ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ತಂದಿರುವುದಕ್ಕೆ ನಮ್ಮ ಪೂರ್ಣ ಸಹಕಾರ ಕೊಟ್ಟು ಸ್ವಾಗತ ಮಾಡುತ್ತೇವೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : (ಗುರುಮಿಠ್ಕಲ್) : ಸನ್ಮಾನ್ಯ ಅಧ್ಯಕ್ಷರೆ, ಇದು ಪ್ರಗತಿಪರವಾದ ಕಾನೂನಾಗಿದೆ. ಇದರಿಂದ ಹೆಣ್ಣು ಮಕ್ಕಳಿಗೆ ಸಹಾಯವಾಗತಕ್ಕಂಥ ಅಂಶ ಇದೆ. ಈ ಕಾನೂನನ್ನು ನಮ್ಮ ಕರ್ನಾಟಕ ಸ್ಟೇಟ್‌ನಲ್ಲಿ ತರುವಾಗ ಹಾಗೂ ಈ ಕಮಿಷನ್ ಅನ್ನು ಮಾಡುವಾಗ ಕೆಲವು ಮಾತುಗಳನ್ನು ಹಾಗೂ ಕೆಲವು ಹಿನ್ನೆಲೆಯನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಈ ಸಮಾಜದ ಪರಿಸ್ಥಿತಿ ಹೇಗಿದೆ. ಸಮಾಜದ ವ್ಯವಸ್ಥೆ ಹೇಗಿದೆ. ಇಂಥಾ ವ್ಯವಸ್ಥೆಯಲ್ಲಿ ಈ ಕಾನೂನು ಇವತ್ತು ಇಲ್ಲಿ ತರಬೇಕಾಯಿತು. ಅಂದರೆ ಸಾವಿರಾರು ವರ್ಷಗಳಿಂದ ಬಹುಶಃ ಹೆಣ್ಣು ಮಕ್ಕಳು ಕೂಡಾ ಅಸ್ಪೃಶ್ಯರಂತೆ ಇದ್ದರೆಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ. ಅಸ್ಪೃಶ್ಯತೆ ರೀತಿಯಲ್ಲಿ ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳು ಇರುವುದನ್ನು ಕಂಡಿದ್ದೇವೆ. ಅನುಭವಿಸಿದ್ದೇವೆ ಮತ್ತು ನೋಡಿದ್ದೇವೆ. ಬಹುಶಃ ಇಂಥ ಅವ್ಯವಸ್ಥೆ ಇರದೇ ಹೋಗಿದ್ರೆ ಇಂಥಾ ಕಾನೂನುಗಳನ್ನು ತರಬೇಕಾದುದು ಅವಶ್ಯಕತೆ ಇರಲಿಲ್ಲ. ಇವತ್ತು ನಾವೆಲ್ಲರೂ ಕೂಡ ಸರಿಸಮಾನ ಎನ್ನತಕ್ಕ ಮಾತನ್ನು ಆಡುತ್ತೇವೆ. ಇವೊತ್ತು

ನಮ್ಮ ದೇಶದಲ್ಲಿ ಪರಿಸ್ಥಿತಿ ಏನಾಗಿದೆ ಅಂದರೆ ಹೆಣ್ಣು-ಗಂಡು ಎಂದು ಹೇಳಿ ಎರಡೇ ಜಾತಿ ಎಂದು ಇಟ್ಟುಕೊಂಡರೂ ಕೂಡ, ಆ ಹೆಣ್ಣು ಮತ್ತು ಗಂಡಿನ ಮೇಲೆ ನಾವು ಅವಲಂಬಿಸಿಲ್ಲ ಅದರಲ್ಲಿಯೂ ಕೂಡ ನಾವು ಮತಭೇದಗಳನ್ನು ಮಾಡಿಕೊಂಡು ಬರುತ್ತಾ ಇದ್ದೇವೆ. ಅದು ನಮ್ಮ ದೇಶದಲ್ಲಿ ಅನಿವಾರ್ಯವಾಗಿದೆ. ಈಗ ಇಲ್ಲಿ ಬಂದ ಕಾನೂನಿನ ಅಡಿಯಲ್ಲಿ ಕೂಡ ನೋಡಿದ್ದೇವೆ. ಇಲ್ಲಿನ ಆಯೋಗದಲ್ಲಿ 6 ಜನ ಸದಸ್ಯರನ್ನು ಮಾಡಬೇಕಾದರೆ ಅದರಲ್ಲಿ ಒಬ್ಬ ಹೆಣ್ಣುಮಗಳು ಎಸ್‌ಸಿ ಎಸ್‌ಟಿ ವರ್ಗದವರು ಇರಬೇಕು, ಅವರಿಗೂ ಕೂಡ ಈ ಕಮಿಶನ್‌ನಲ್ಲಿ ಆಧ್ಯತೆಯನ್ನು ಕೊಡಬೇಕೆಂಬುದನ್ನು ನಾವು ಅಳವಡಿಸಿಕೊಂಡಿದ್ದೇವೆ. ಅಂದರೆ ಪ್ರತಿಯೊಂದು ಹಂತದಲ್ಲಿಯೂ ಕೂಡ ಈ ಡಿಸ್ಕ್ರಿಮಿನೇಶನ್ ಇದೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಇಂಥ ಒಂದು ಪದ್ಧತಿಯು ನಡೆದುಕೊಂಡು ಬಂದಿದೆ. ಇವೊತ್ತು ನಮ್ಮೆದುರು ಈ ಕಮಿಶನ್ ಬಂದರೂ ಕೂಡ, ಈ ಕಾನೂನನ್ನು ನಾವು ಇವೊತ್ತು ತಂದರೂ ಕೂಡ ಇಂಥ ಅನೇಕ ಕಾನೂನುಗಳನ್ನು ಕೇಂದ್ರ ಸರಕಾರದಲ್ಲಿ ಮಾಡಿದ್ದಾರೆ. ಹಿಂದೆ ಹೆಣ್ಣುಮಕ್ಕಳ ಸಮಾನತೆಗಾಗಿ ಅವರ ಹಕ್ಕಿಗೋಸ್ಕರ ಹೋರಾಟ ಮಾಡಿದಂಥ ಅನೇಕ ಮಹಾಪುರುಷರು ಇದ್ದಾರೆ. ಅವರು ಬಸವೇಶ್ವರರಿರಬಹುದು, ಮಹಾತ್ಮಗಾಂಧಿಯವರು ಇರಬಹುದು, ಬಾಬಾ ಸಾಹೆಬ್ ಅಂಬೇಡ್ಕರ್‌ರವರು ಇರಬಹುದು. ಮಹಾತ್ಮ ಫುಲೆ, ರಾಮಸ್ವಾಮಿ ನಾಯ್ಕರ್ ಮುಂತಾಗಿ ಅನೇಕ ಮಹಾಪುರುಷರು ಇರಬಹುದು. ಹೆಣ್ಣುಮಕ್ಕಳನ್ನು ಕೂಡ ಸಮಾನತೆಯ ದೃಷ್ಟಿಯಿಂದ ನೋಡಬೇಕು, ಅವರಿಗೂ ಕೂಡ ಸಮಾನವಾದ ಹಕ್ಕುಗಳು ಲಭ್ಯವಾಗಬೇಕೆಂದು ಹಿಂದೆಯೇ ಹಿಂದೂ ಕೋಡ್‌ಬಿಲ್ ಎಂದು ಬಂದಿತ್ತು. ಅದರಲ್ಲಿ ಅಸ್ಪೃಶ್ಯರಿಗೆ ಎಷ್ಟು ಹಕ್ಕುಗಳು ಇದ್ದುವು, ಅದೇ ರೀತಿಯಾಗಿ ಆ ಬಿಲ್‌ನ್ನು ಅಂಬೇಡ್ಕರ್‌ರವರು ತಂದಾಗ ಅದರಲ್ಲಿ ಹೆಣ್ಣುಮಕ್ಕಳಿಗೂ ಕೂಡ ಅಷ್ಟೇ ಪ್ರಾಮುಖ್ಯತೆಯನ್ನು ಕೊಟ್ಟು ಅವರ ಹಕ್ಕಿನ ಬಗ್ಗೆ ಆದರ ಮೂಲಕ ಒಂದು ರಕ್ಷಣೆಯನ್ನು ಕೊಟ್ಟರು. ದುರ್ದೈವವಶಾತ್ ಸಂಪೂರ್ಣವಾಗಿ ಹಿಂದೂ ಕೋಡ್ ಬಿಲ್‌ನ್ನು ಅವಾಗ ಒಪ್ಪಲಿಲ್ಲ. ಒಪ್ಪದೇ ಹೋದಾಗ ಅದರ ಅನೇಕ ಬೇರೆ ಬೇರೆ ಪಾರ್ಟ್ ಭಾಗಗಳನ್ನು ಮಾಡಿ ಹೀಗೆ ಪಾರ್ಟ್ ಆಗಿ ಪ್ರಗತಿಪರವಾದಂಥ ಬಿಲ್‌ನ್ನು ತರಬೇಕೆಂದು ಪಂಡಿತ್ ನೆಹರೂರವರು ಮತ್ತು ಅನೇಕ ಮುಖಂಡರು ಪ್ರಯತ್ನಿಸಿದರು. ಮುಂದೆ ಡಾಃ ಅಂಬೇಡ್ಕರ್‌ರವರು ರಾಜೀನಾಮೆ ಕೊಟ್ಟ ಮೇಲೆ... ನಾನು ಹೇಳತಕ್ಕಂಥ ತಾತ್ಪರ್ಯ ಏನೆಂದರೆ, ಹೆಣ್ಣುಮಕ್ಕಳ ಹಕ್ಕಿನ ರಕ್ಷಣೆಗೆ ಬಹಳ ದಿವಸಗಳಿಂದ ಹೋರಾಟ ನಡೆಯುತ್ತಾ ಬಂದಿದೆ. ಇದು ಸಡನ್ ಆಗಿ ತಂದಂಥ ಕಾನೂನಲ್ಲ, ಇವೊತ್ತೇ ತಂದ ಕಮಿಶನ್ ಅಲ್ಲ. ಇದಕ್ಕೆ ಹಿಂದೆ ನಡೆದಂಥ ಹೋರಾಟ ಮತ್ತು ಆ ಹೋರಾಟದ ಮೇಲೆ ಆದಂಥ ಅನೇಕ ಕಾನೂನುಗಳು ಮತ್ತು ಕಾನೂನುಗಳ ರಕ್ಷಣೆ ಮಾಡುವುದಕ್ಕೂ ಸಹ ಸರ್ಕಾರ ಮತ್ತು ಅದರಲ್ಲಿ ಕೊಟ್ಟಂಥ ಹಕ್ಕುಗಳ ರಕ್ಷಣೆಯಾಗಬೇಕೆಂದು ಇವೊತ್ತು ಕಮಿಶನ್‌ನ್ನು ತಂದಿದ್ದೀರಿ. ಇದರಲ್ಲಿ ವಿಶೇಷವಾದಂಥ

ಹಕ್ಕುಗಳೇನೂ ಇಲ್ಲ. ಇದರಲ್ಲಿ ಮಹಿಳೆಯರ ಮೇಲೆ ಆಗತಕ್ಕಂಥ ಅನ್ಯಾಯಗಳನ್ನು ಯಾವರೀತಿಯಲ್ಲಿ ಸರಿಪಡಿಸಬೇಕು, ಅವರ ಅಭಿವೃದ್ಧಿಯ ಬಗ್ಗೆ ಯಾವುದೇ ಒಂದು ರಿಪೋರ್ಟ್‌ನ್ನು ಕೊಟ್ಟರೆ ಅದನ್ನು ಯಾವ ರೀತಿಯಲ್ಲಿ ಆಚರಣೆಯಲ್ಲಿ ತರಬೇಕು, ಮುಂತಾಗಿ ಹೇಳಿದ್ದಾರೆಯೇ ಹೊರತು, ವಿಶೇಷವಾದಂಥ ಹಕ್ಕುಗಳನ್ನು ಕೊಟ್ಟು ಯಾವರೀತಿಯಾಗಿ ಫಂಡಮೆಂಟಲ್ ರೈಟ್ಸ್ ಇದೆ, ಆ ರೀತಿಯಾಗಿ ಏನೂ ಕೊಟ್ಟಿದ್ದು ಇಲ್ಲ. ಅಂದರೆ ಇರತಕ್ಕಂಥ ಹಕ್ಕುಗಳನ್ನು ಹೇಗೆ ಚಲಾವಣೆಯಲ್ಲಿ ತರಬೇಕು, ಅದಕ್ಕೆ ಸೇಫ್‌ಗಾರ್ಡ್ ಹೇಗೆ ಎನ್ನತಕ್ಕಂಥ ದೃಷ್ಟಿಯಿಂದ ತಂದಂಥ ಕಾನೂನು ಇದಾಗಿದೆ. ಶ್ರೀಮತಿ ಪ್ರಮಿಳರವರು ಹೇಳಿದ ಹಾಗೆ ಈ ಕಾನೂನು ಸ್ವಲ್ಪ ಅಶಕ್ತತೆಯನ್ನು ಹೊಂದಿದೆ. ಇದಕ್ಕೆ ಇನ್ನಷ್ಟು ಶಕ್ತಿಯನ್ನು ತುಂಬಬೇಕಾಗುತ್ತದೆ. ತಾವು ಇದರಲ್ಲಿ ಒಂದು ಮೀಟಿಂಗ್ ಕರೆಯಬೇಕೆಂದರೆ ಮೂರು ತಿಂಗಳಿಗೆ ಒಮ್ಮೆ ಕರೆಯಬಹುದು ಎಂದು ಮಾಡಿದ್ದೀರಿ. ಮೂರು ತಿಂಗಳಿಗೊಮ್ಮೆ ಕರೆಯ ತಕ್ಕಂಥವುಗಳು ಸಾಮಾನ್ಯವಾಗಿ ಅಡ್ವೈಸರಿ ಕಮಿಟಿಯ ರೀತಿಯಲ್ಲಿ ಇರುತ್ತವೆ. ಅಡ್ವೈಸರಿ ಬೋರ್ಡ್ ಟೈಪ್‌ನಲ್ಲಿ ಇದು ಇರಬಾರದು. ನಾವು ಒಂದು ಕಾನೂನನ್ನು ತಂದರೆ ಅದಕ್ಕೆ ಸೂಕ್ತವಾದ ಶಕ್ತಿ ಇರಬೇಕು, ನೀವು ಅವರಿಗೆ ಸೆಕ್ಷನ್ 10 ಮತ್ತು 9 ರಲ್ಲಿ regarding activities-

ಇದರ ಕೆಳಗೆ ಅವರು ಕೆಲಸ ಮಾಡತಕ್ಕಂಥಾದ್ದರ ಬಗ್ಗೆ ಹೇಳಿದ್ದೀರಿ. ಅದೇ ರೀತಿಯಲ್ಲಿ ಸೆಕ್ಷನ್ 10ರಲ್ಲಿ ಕಮೀಶನ್‌ನ ಪವರ್ಸ್ ಬಗ್ಗೆಯೂ ಹೇಳಿದ್ದೀರಿ. ಇದನ್ನೆಲ್ಲವನ್ನು ನಾವು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂದರೆ, ನೀವು ಸೆಕ್ಷನ್ 7ರಲ್ಲಿ ಹೇಳಿದ ಹಾಗೆ

"The Commission shall meet as and when necessary at Bangalore or at such other places as the Chairperson may think fit: Provided that the Commission shall meet at least once in three months" ಅಂತ ಹೇಳಿ ನೀವು ಈ ರೀತಿಯಲ್ಲಿ ಅವಕಾಶ ಕೊಟ್ಟರೆ ಯಾರು ಮೂರು ತಿಂಗಳಿಗೊಮ್ಮೆ ಕರೆಯುತ್ತಾರೆ, 4-5 ತಿಂಗಳಿಗೊಮ್ಮೆ ಕರೆಯಬಹುದು. ಏಕೆಂದರೆ ಅಟ್‌ಲೀಸ್ಟ್ ಎಂಬ ಪದವನ್ನು ಹೇಳಿದ್ದೀರಿ. ಪ್ರತಿ ತಿಂಗಳು ಸೆಕೆಂಡ್ ಸಾಟರ್‌ಡೆ ಸೇರಬೇಕು. ಅಥವಾ ಇನ್ನೊಂದು ದಿನಾಂಕ ಮತ್ತು ಸಮಯ ನಿಗದಿ ಮಾಡಿದರೆ ಈ ಉದ್ದೇಶಗಳು ಈಡೇರುತ್ತವೆ. ಅದನ್ನು ಬಿಟ್ಟು ಅವರ ಡಿಸ್ಕ್ರಿಶನ್ ಮೇಲೆ ಬಿಟ್ಟರೆ ಯಾವ ಕೆಲಸವೂ ಆಗುವುದಿಲ್ಲ. ಇದರ ಬಗ್ಗೆ ತಾವು ಕನಿಷ್ಟಪಕ್ಷ ಮೂರು ತಿಂಗಳಿಗೆ ಒಂದು ಎನ್ನತಕ್ಕಂಥದ್ದನ್ನು ತೆಗೆದು ತಿಂಗಳಿಗೆ ಒಮ್ಮೆ ಸೇರತಕ್ಕದ್ದು ಎಂದು ಮಾಡಿ. ಎರಡನೇಯದಾಗಿ ನನಗೆ ಇದರಲ್ಲಿ ಅಂಥ ವ್ಯತ್ಯಾಸ ಕಾಣಲಿಲ್ಲ. ನಾಣಯ್ಯನವರು ಹೇಳಿದ ಹಾಗೆ ಇದರಲ್ಲಿ ಜನರಲ್ ಕ್ಲಾಸ್‌ಆಕ್ಟ್‌ನ ಕೆಳಗೆ ಯಾರು ಕೂಡ ಬರಬಹುದು ಅದು ಅವರಿಗೂ

ಕೂಡ ಗೊತ್ತಿದೆ. ಆದರೆ ಇದರಲ್ಲಿ ಅಪಾಯಿಂಟ್ ಮಾಡುವಾಗ ನೀವು ನೋಡ ಬೇಕು. ನೀವು ಏನು ಮಾಡಿದ್ದೀರಿ? ಕಮಿಟಿಗೆ ಅಪಾಯಂಟ್‌ಮಾಡುವಾಗ ಹೇಗೆ ಮಾಡಬೇಕೆಂದು ಹೇಳಿದ್ದೀರಿ.

"The Commission shall consist of the following members, namely :-

(a) a Chairperson who shall be a woman committed to the cause of the women to be nominated by the Government:

(b) Six members to be nominated by the Government from amongst persons of ability, integrity and standing who have had experience in law or legislation, trade Unionism, management of an industry of Organised committed to increasing the employment potential of Women, Women's Voluntary organisations including women activities administration, economic development, health education or social welfare.

Provided that at least one member each shall be from amongst persons belonging to Scheduled Castes and Scheduled Tribes respectively."

ಇದರಿಂದ ಅನೇಕ ಸಾರಿ ಮಿಸ್‌ಯೂಸ್ ಆಗುತ್ತದೆ, ಮೆಜಾರಿಟಿ ಅಂದರೆ 7 ಜನರಲ್ಲಿ 4 ಜನರನ್ನು ಮಾಡಬಹುದು, 3 ಜನರನ್ನು ಬೇರೆಯವರನ್ನು ಮಾಡಬಹುದು. ಅದರಂತೆ ನೀವು ನಿರ್ದಿಷ್ಟವಾಗಿ ಹೇಳಿ, 5 ಜನ ಮೆಂಬರ್ ಇರಬೇಕು, ಗಂಡಸರು 2ಕ್ಕಿಂತ ಹೆಚ್ಚು ಇರಬಾರದು ಎಂದು ಮಾಡಿ. ಹೀಗೆ ಸ್ಪೆಸಿಫಿಕ್ ಆಗಿದ್ದರೆ ಬೇರೆಯವರಿಗೆ ನಾಮಿನೇಟ್ ಮಾಡುವುದಕ್ಕೆ ಸ್ಕೋಪ್ ಇರುವುದಿಲ್ಲ. ಇದರಲ್ಲಿ ಮೆಜಾರಿಟಿ ಅಂದರೆ ಏನು ನಡೆಯುತ್ತದೆ ಎಂದು ಮೂರು ಜನರು ಅವರಿಗೆ ಹಾಕಿ ನಾಲ್ಕು ಜನರು ಇವರಿಗೆ ಹಾಕಬಹುದು. ಇಂಥ ಮಿಸ್‌ಯೂಸ್ ಆಗುವ ಸಾಧ್ಯತೆ ಇರುವ ಕ್ಲಾಸಸ್‌ನ್ನು ತಿದ್ದುಪಡಿ ಮಾಡತಕ್ಕಂಥ ಕೆಲಸವನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಅಂದರೆ, ನಾವು ಆಕ್ಟ್‌ನ್ನು ಮಾಡುತ್ತೇವೆ. I would like to draw your attention to page(1) "(2)" It shall extend to the whole of the State of Karnataka.

(3) It shall come into force from such date as the Government may, by notification, appoint"

ಇಲ್ಲಿ ಅನೇಕ ಸಾರಿ ನಾವು ಕಾನೂನನ್ನು ಪಾಸ್ ಮಾಡುತ್ತೇವೆ. ಇದು ನಮ್ಮ ಮತ್ತು ಅನೇಕ ಸದಸ್ಯರ ಅನುಭವಕ್ಕೆ ಬಂದಿದೆ. ಆದರೆ ರೂಲ್ಸ್ ಮಾಡುವುದಕ್ಕೆ ವರ್ಷಾನುಗಟ್ಟಲೆ ತೆಗೆದುಕೊಳ್ಳುತ್ತೇವೆ. ರೂಲ್ಸ್ ಮಾಡುವುದಿಲ್ಲ. ನೋಟಿಫೈ ಮಾಡುವುದಿಲ್ಲ.ಒಂದು ಉದಾಹರಣೆ ಹೇಳುವುದಾದರೆ ನಮ್ಮ Prohibition of Sc& St, ಒಂದು Act.

ಅದರ ಮೇಲೆ ಕೆಲವು ಆಕ್ಷನ್ ತೆಗೆದುಕೊಳ್ಳಬೇಕಾಗಿತ್ತು. ಆ ಕಾನೂನು ಪಾಸ್ ಮಾಡಿ ಎಷ್ಟೋ ದಿವಸ ಆಗಿತ್ತು. ಪಾಸ್ ಆದಮೇಲೆ ಅದು ಎಲ್ಲಿದೆ ಏಕೆ ಬಂದಿಲ್ಲ. ಎಂದು ತೆಗೆದು ನೋಡಿದರೆ ಅದನ್ನು ನೋಟಿಫೈ ಮಾಡಿರಲಿಲ್ಲ. ಇವೊತ್ತು ನಾವು ಕಾನೂನನ್ನು ಪಾಸ್ ಮಾಡಿದರೂ ಕೂಡ ಯಾವ ಡೇಟ್‌ನಿಂದ ನೋಟಿಫಿಕೇಶನ್ ಆಗುತ್ತದೆ, ಅಂದಿನಿಂದ ಅದು ಕಾನೂನು ಜಾರಿಯಲ್ಲಿ ಬರುತ್ತದೆ.

ಅದಕ್ಕಾಗಿ ಅನೇಕ ಸಾರಿ ಕಾನೂನು ಪಾಸ್ ಮಾಡಿದ್ದರೂ ಅಲ್ಲೇ ಬಿದ್ದಿರುತ್ತದೆ. ನೋಟಿಫೈ ಮಾಡುವುದಿಲ್ಲ ಮತ್ತು Subordinate Legislation Committee ಮುಂದೆ ಹೋಗಿ ಇದರ ಬಗ್ಗೆ ರೂಲ್ಸನ್ನು ಕ್ವಿಕ್ಕಾಗಿ ಫ್ರೇಮ್ ಮಾಡುವುದಿಲ್ಲ. ಹೀಗಾಗಿ ತಮಗೆ ಗೊತ್ತಿದೆ ಎಪಿಎಂಸಿಯಲ್ಲಿ ಅನೇಕ ರೂಲ್ಸಾಗಿಲ್ಲವೆಂದು ಚುನಾವಣೆಗಳು ಬಹಳ ದಿವಸ ಮುಂದೆ ಹೋದವು. ಸಹಕಾರ ಇಲಾಖೆಯಲ್ಲಿ ಹೋದವು. ಅದೇ ರೀತಿ ಎಸ್.ಸಿ/ಎಸ್.ಟಿ ನೇಮಕಾತಿಯಲ್ಲಿ ಹೋಯಿತು. ಹೀಗೇ ಅನೇಕ ಕಾನೂನುಗಳನ್ನು ನಾವಿಲ್ಲಿ ಪಾಸ್ ಮಾಡಿದ್ದರೂ ಅದಕ್ಕೆ ರೂಲ್ಸ್ ಮತ್ತು ಅಧಿಸೂಚನೆ ಮಾಡದ ಕಾರಣ ಅಲ್ಲಿ ಬಿದ್ದುಹೋಗುತ್ತವೆ. ಆದ್ದರಿಂದ ದಯವಿಟ್ಟು ಇದು ಪಾಸಾದ ತಕ್ಷಣ ಇದಕ್ಕೆ ರೂಲ್ಸ್ ಮಾಡಬೇಕು, ನೋಟಿಫೈ ಮಾಡಬೇಕು ಮತ್ತು ಇಂದಿನಿಂದ ಜಾರಿಗೆ ಬಂದಿದೆ. ಎಂದು ಪಬ್ಲಿಸಿಟಿ ಕೊಡುವ ಅವಶ್ಯಕತೆ ಇದೆ. ಈಗ ನೋಡಿ ನಿಮ್ಮ ಪ್ರಣಾಳಿಕೆಯಲ್ಲಿ, ರಾಜ್ಯಪಾಲರ ಭಾಷಣದಲ್ಲಿ ಮತ್ತು ಬಜೆಟ್ ಭಾಷಣದಲ್ಲಿ ತಾವು ಹೇಳುತ್ತಿದ್ದೀರಿ ಆದರೆ ಇದು ಸಫಿಸಿಯಂಟಲ್ಲ. ಏನಾಗಿದೆ ಇವತ್ತು ಕಾನೂನು ತಂದಿದ್ದೀರಿ ಆದರೆ ಕಾನೂನು ಇಂದಿನಿಂದ ಜಾರಿಯಲ್ಲಿದೆ ಇಂಥಿಂಥ ಸವಲತ್ತುಗಳನ್ನು ಹೆಣ್ಣುಮಕ್ಕಳಿಗೆ ನಾವು ಕೊಡುತ್ತಿದ್ದೇವೆ. ಈ ಕಮಿಶನ್ ಮುಂದೆ ಬಂದು ನಿಮ್ಮ ಗೋಳನ್ನು ಹೇಳಿಕೊಂಡರೆ ಅವರಿಗೆ ನಾವು ಈ ರೀತಿ ಸಹಾಯ ಮಾಡುತ್ತೇವೆ ಎನ್ನುವ ಪ್ರಚಾರ ನೀವು ಕೊಡದೇ ಹೋದರೆ ಯಾವ ಸಂಘ ಸಂಸ್ಥೆಯವರಿಗೂ ಗೊತ್ತಾಗುವುದಿಲ್ಲ. ಕೊನೆಗೆ ಬಹಳ ಬಹಳ ಅಂದರೆ ನಮ್ಮ ಪ್ರಮಿಳಾ ಅವರು ಹೇಳಿದಂತೆ ಪಟ್ಟಣದಲ್ಲಿರುವ ಓದುಬಲ್ಲ ಹೆಣ್ಣುಮಕ್ಕಳ ಕಮೀಶನ್ ಆಗುತ್ತದೇ ಹೊರತಾಗಿ ಹಳ್ಳಿಗಳಲ್ಲಿರುವ ನಿರ್ಗತಿಕ ಬಡ ಅಥವಾ ಹಳ್ಳಿಯಲ್ಲಿ ಕೂಲಿ ಮಾಡುವ ಹೆಣ್ಣುಮಕ್ಕಳ ಕಾನೂನು ಇದು ಆಗುವುದಿಲ್ಲ. ಏಕೆಂದರೆ ಅವರಿಗೆ ಗೊತ್ತೇ ಇರುವುದಿಲ್ಲ. ಅಂತಹ ಕಡೆ ನೀವು ತಿಳಿವಳಿಕೆ ಕೊಡುವುದಕ್ಕಾಗಿ, ಈ ಆರು ಜನರಲ್ಲಿ ನೀವು ನಾಮಿನೇಟ್ ಮಾಡುವಾಗ ನೀವು ಒಂದು ಪ್ರಾವಿಜನ್ ಮಾಡಿಕೊಳ್ಳಬೇಕು. ಏನೂಂದರೆ

ಕನಿಷ್ಠ ಒಂದು ಡಿವಿಜನ್‌ಗೆ ಒಂದು ಹೆಣ್ಣುಮಗಳು, ಗುಲ್ಬರ್ಗ, ಬೆಳಗಾಂ, ಮೈಸೂರು, ಬೆಂಗಳೂರು, ಡಿವಿಜನ್‌ಗಳಿಗೊಂದರಂತೆ ಹೀಗೆ ನೀವು ಪ್ರತಿ ಡಿವಿಜನ್‌ನಿಂದ ತೆಗೆದುಕೊಂಡರೆ ಅಲ್ಲಿನ ಕಷ್ಟನಷ್ಟವೂ ಗೊತ್ತಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಇಂತಹ ಯಾವ ಸಂಘ ಸಂಸ್ಥೆಗಳು ಬಂದರೆ ತಮಗೆ ಗೊತ್ತಿದೆ ಇದು ಇನ್ನೊಂದು ರೋಟರಿಕ್ಲಬ್, ಲಯನ್ಸ್‌ಕ್ಲಬ್‌ನಂತೆ ಆಗಿಬಿಡುತ್ತದೆ. ಇವತ್ತು ಈ ಕಮಿಶನ್ ಹಳ್ಳಿಗಳ ಹೆಣ್ಣುಮಕ್ಕಳ ರಕ್ಷಣೆಗೆ ನಿಜವಾಗಿ ಹೋಗಬೇಕಾಗಿದೆ. ಕೆಲಸದ ದೃಷ್ಟಿ ಯಿಂದಿರಬಹುದು ಅಥವಾ ಬೇರೆ ಸವಲತ್ತು ದೃಷ್ಟಿಯಿಂದಿರಬಹುದು ನಾವು ಮಾನವ ಹಕ್ಕುಗಳ ಬಗ್ಗೆ ಮಾತಾಡುತ್ತೇವೆ ಆ ಹಕ್ಕುಗಳು ಎಲ್ಲಿ ಚ್ಯುತಿ ಆಗುತ್ತದೆಂದರೆ ಹಳ್ಳಿಗಳಲ್ಲಿ ಅದಕ್ಕಾಗಿ ಪ್ರತಿ ಡಿವಿಜನ್‌ನಿಂದ ಈ ನಾಮಕರಣ ಮಾಡಿದರೆ ಕನಿಷ್ಠಪಕ್ಷ ಆ ಭಾಗದಿಂದ ಬಂದವರು ತಮ್ಮ ಅಭಿಪ್ರಾಯಗಳನ್ನು ಕೊಡುವುದಕ್ಕಾಗುತ್ತದೆ. ಅದಕ್ಕಾಗಿ ದಯವಿಟ್ಟು Atleast one member from each Division ಎನ್ನುವುದನ್ನು ತಾವು ಸೇರಿಸಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದೇನೆಂದರೆ ಸೆಕ್ಷನ್ 9ರಲ್ಲಿ ತಾವು ಕೆಲವು ಪವರ್ಸ್ ಕೊಟ್ಟಿದ್ದೀರಿ.

"look into complaints and take suo-moto notice of matters relating to

(i) deprivation of women's rights:

(ii) non-implementation of laws enacted to provide protection to women and also to achieve the objective of equality and development."

This equality is also important.

ನಾನು ಏಕೆ ಹೇಳುತ್ತಿದ್ದೇನೆಂದರೆ ಬರೀ ಕಮಿಶನ್ ಮಾಡಿ ಹೆಣ್ಣುಮಕ್ಕಳಿಗೆ ಕೊಟ್ಟಿದ್ದೇವೆ ಅಂತ ಅಲ್ಲ. ಹೆಣ್ಣುಮಕ್ಕಳಲ್ಲೂ ಲ್ಯಾಡರ್ ಇದೆ, ವ್ಯತ್ಯಾಸ ಇದೆ, ಸಮಾಜದಲ್ಲಿ ಇವತ್ತು ಗ್ರೆಡೆಶನ್ ಇದ್ದ ಸಮಾಜ ನಮ್ಮದು. ಜಾತಿ ಆಧಾರದ ಮೇಲೆ ಸಮಾಜದ ಕಾರಣ ಈ ಸಮಾನತೆಯನ್ನು ಮೇನ್‌ಟೇನ್ ಮಾಡುವುದು ಬಹಳ ಅವಶ್ಯ. ನಾವು ಕೇವಲ ಕೆಲವೇ ಜನರ ಹಿತಕ್ಕಾಗಿ ಮಾಡುವ ಕಾನೂನಲ್ಲ. ಇದು ಎಲ್ಲರ ಹಿತಕ್ಕಾಗಿ ಆಗಬೇಕು ಅಂದಾಗ ಇದರಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡುವಂತಹ ಜನ ಇರಬೇಕು. ಕಮಿಟ್‌ಮೆಂಟ್ಸ್ ಇರುವವರು ಇರಬೇಕು ಮತ್ತು ಇದರ ಬಗ್ಗೆ ಚಿಂತನೆ ಮಾಡುವವರು ಇರಬೇಕು ಎಂದು ನಾನು ಕೇಳುತ್ತೇನೆ. ಮೂರು ತಿಂಗಳಿಗೊಮ್ಮೆ ಬೇಕಾದರೆ ಸಂಬಂಧಪಟ್ಟ ಸಚಿವರು ಅದನ್ನು ಸಮೀಕ್ಷೆ ಮಾಡಲಿ. ಅವರು ಯಾರೇ ಇರಬಹುದು, ಮಹಿಳೆ ಮಕ್ಕಳ ಕಲ್ಯಾಣಕ್ಕೆ ಸಂಬಂಧಪಟ್ಟ ಸಚಿವರು ಕರೆಸಿ ಇದರ ಚಿಂತನೆ ನಡೆಸಿದರೆ ಆಗ ಈ ಕಾನೂನು ತಂದಿದ್ದಕ್ಕೆ ಸಾರ್ಥಕವಾಗುತ್ತದೆ. ಸಹಾಯವಾಗುತ್ತದೆ. ಇಲ್ಲಾಂದರೆ ಇದು ಕೆಲವರಿಗೋಸ್ಕರವೇ ಕಾನೂನು ಆಗುತ್ತದೆ

ಎಂಬ ಮಾತನ್ನು ನಾನು ಹೇಳಬೇಕಾಗುತ್ತದೆಂದು ಹೇಳುತ್ತ ಈ ಸಂದರ್ಭಧಲ್ಲಿ ನನಗೆ ನಾಲ್ಕು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಧ್ಯಕ್ಷರೇ ನಾನು ಮೊದಲಿಗೆ ಸರ್ಕಾರ ಮಂಡಿಸಿರುವ ಈ ಮಸೂದೆಯನ್ನು ಸ್ವಾಗತ ಮಾಡುತ್ತಿದ್ದೇನೆ ಕಾರಣ ಇಷ್ಟೇ, ಮರಳುಗಾಡಿನಲ್ಲಿ ನೀರು ಹುಡುಕಿದ ಹಾಗೆ ಇವತ್ತು ಕನಿಷ್ಠ ಈ ಮಹಿಳೆಯರ ಬಗ್ಗೆ ಆಲೋಚನೆ ಮಾಡಲು ನಾವು ಪ್ರಾರಂಭಿಸಿದ್ದೇವೆ. ಆದರೆ ಈ ಆಯೋಗ ಒಂದು ಸ್ವಾಯತ್ತ ಸಂಸ್ಥೆಯಾಗಬೇಕೆಂದು ನನ್ನ ಸ್ಪಷ್ಟ ಅಭಿಪ್ರಾಯ. ಎರಡನೇ ಪೇಜಿನ ಕಡೆಯಲ್ಲಿ 4ನೆಯದು, ಅಧ್ಯಕ್ಷರು ಮತ್ತು ಪ್ರತಿ ಸದಸ್ಯರು ಸರ್ಕಾರದ ಇಚ್ಛೆಗೊಳಪಟ್ಟು ಮೂರು ವರ್ಷಕ್ಕೆ ಮೀರದಂತೆ ಸರ್ಕಾರವು ನಿರ್ಧಿಷ್ಟ ಪಡಿಸಬಹುದಾದ ಅವಧಿವರೆಗೂ ಹುದ್ದೆಯನ್ನು ಹೊಂದಿರತಕ್ಕದ್ದು ಎಂದು ಇದು ಸ್ವಚ್ಛವಾಗಿ ತೋರಿಸುತ್ತದೆ. ಇದೊಂದು ಸರ್ಕಾರದ ಸಮಿತಿಯಾಗುತ್ತದೆ, ನಿಜವಾಗಿಯೂ ಕರ್ನಾಟಕದಲ್ಲಿ ಮಹಿಳೆಯರ ಮೂಲಭೂತ ಸಮಸ್ಯೆಗಳನ್ನು ಅಧ್ಯಯನ ಮಾಡಿ ಅದಕ್ಕೆ ಪರಿಹಾರ ಹುಡುಕುವ ಒಂದು ಸ್ವಾಯತ್ತ ಅಧಿಕಾರ ಇಲ್ಲದೇ ಇರುವಂತಹ ಸರ್ಕಾರದಿಂದ ನೇಮಿಸಲ್ಪಟ್ಟಿರುವ ಮತ್ತು ಸರ್ಕಾರ ಇಚ್ಛೆಗೆ ಅನುಗುಣವಾಗಿರುವ ಒಂದು ಸಮಿತಿಯಾಗಿರಬೇಕೆಂಬುದು ಇದರಲ್ಲಿ ಸ್ಪಷ್ಟವಾಗಿದೆ. ಆದ್ದರಿಂದ ನನ್ನ ಅನುಮಾನ ಇಷ್ಟೇ. ಶತಶತಮಾನಗಳಿಂದ ಶೋಷಣೆಗೆ ಒಳಗಾಗಿರುವ ಮಹಿಳೆಯರ ಬಗ್ಗೆ ನಾವು ಇವತ್ತು ಕಣ್ಣೀರು ಒರೆಸುವ ಸ್ಥಿತಿಯಲ್ಲಿದ್ದೇವೆಯೇ ಹೊರತು ಆ ಕಣ್ಣೀರಿಗೆ ನಿಜವಾದ ಮೂಲಕಾರಣವೇನೆಂದು ಹುಡುಕಿ ಆ ಸಮಸ್ಯೆಗೆ ಮೂಲಭೂತ ಪರಿಹಾರ ಹುಡುಕಲು ಬೇಕಾದಂತಹ ಅಧಿಕಾರವನ್ನು ಈ ಸಮಿತಿಗೆ ಕೊಡಲು ನಾವು ಇವತ್ತಿಗೂ ತಯಾರಿಲ್ಲ ಎಂದು ನಾವು ಸ್ಪಷ್ಟವಾಗಿ ಇಲ್ಲಿ ನಮೂದಿಸಿರುವುದು ಗೊತ್ತಾಗುತ್ತದೆ. ಎರಡನೆಯದು ಅಧಿಕಾರಿಗಳ ಬಗ್ಗೆ ಹೇಳಿದ್ದಾರೆ ಇಲ್ಲಿ ಆಯೋಗದ ಅಧಿಕಾರ ಅದು. ಈ ಅಧಿಕಾರಿಗಳಲ್ಲಿ ಎಲ್ಲರೂ ಸಲಹೆ ಕೊಡುವಂತಹ, ಇದೊಂದು ಸಲಹಾ ಸಮಿತಿ ಆಗುವಂತಹ ಪರಿಸ್ಥಿತಿ ಇದೆಯೇ ಹೊರತು ಇದಕ್ಕೆ ಶಾಸನಬದ್ಧವಾದ ಅಧಿಕಾರ ಕೊಡುವುದು ಇದರಲ್ಲಿಲ್ಲ. ಅಧ್ಯಕ್ಷರೇ ಇದು ನಮ್ಮ ದೇಶದ ದುರಂತ. ಮಾತೃದೇವೋಭವ ಅಂತ ಹೇಳಿದ್ದೀವಿ, ಸ್ತ್ರೀಯನ್ನು ಅಟ್ಟಕ್ಕೇರಿಸಿದ್ದೇವೆ ಆದರೆ ಎಷ್ಟು ದುರಂತದ ವಿಪರ್ಯಾಸದಲ್ಲಿದ್ದೇವೆ ಎಂದರೆ ಮಹಿಳೆಯರ ಶೀಲ ಪರೀಕ್ಷಿಸಲು ಬೆಂಕಿಗೆ ಹಾಕಿದಂತಹ ನಾವು ಪುರುಷರ ಶೀಲವನ್ನು ಪರೀಕ್ಷಿಸಲು ಯಾವುದೇ ಪರೀಕ್ಷೆ ಒಡ್ಡಲಿಲ್ಲ. ಎಂತಹ ಗಂಭೀರವಾದ ವಾತಾವರಣದಲ್ಲಿ ಮಹಿಳೆಯರು ಈ ದೇಶದಲ್ಲಿ ಬದುಕುತ್ತಿದ್ದಾರೆ. ಅವರು ಒಂದು ಬಗೆಯ ಶೋಷಣೆಗೆ ಒಳಗಾಗಿರುವವರಲ್ಲ. ಎಲ್ಲಾ ರೀತಿಯ ಶೋಷಣೆಗೆ ಒಳಗಾಗಿರುವ ನಮ್ಮ ಮಹಿಳಾ ಸಮಾಜ ಇವತ್ತಿಗೂ ನಾವು ಅಷ್ಟೇ ಪ್ರಾಮಾಣಿಕತೆಯಿಂದ ಅವರ ಸಮಸ್ಯೆ ಬಗ್ಗೆ ಮಾತನಾಡುತ್ತೇವೆ ಅಂದರೂ

ಕೂಡ ನಾವೆಲ್ಲ ಮನುವಿನ ಮೊಮ್ಮಕ್ಕಳೇನ / ಸ್ತ್ರೀ ಸ್ವಾತಂತ್ರ್ಯಂ ಎಂದು ಹೇಳಿದ ಮನುವಿನ ಮೊಮ್ಮಕ್ಕಳೇ ನಾವು ಈ ದೇಶದಲ್ಲಿ ರಾಜ್ಯಭಾರ ಮಾಡುತ್ತಿದ್ದೇವೆಂಬುದನ್ನು ಮರೆಯಬಾರದು. ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ನಿಜವಾಗಿ ಸಮಾನತೆ ಎಂಬುದು ಬಹಳ ಮುಖ್ಯ. ಈ ಸಮಾನತೆ ಎನ್ನುವುದು ಮೂಲಭೂತವಾಗಿ ಎರಡು ಅಂಶಗಳನ್ನು ಅವಲಂಬಿಸಿದೆ. ಒಂದು ಆರ್ಥಿಕ ಸಮಾನತೆ, ಇನ್ನೊಂದು ಸಾಮಾಜಿಕ ಸಮಾನತೆ; ಆರ್ಥಿಕ ಸಮಾನತೆ ಇಲ್ಲದೆ ಅವರಿಗೆ ನಿಜವಾದ ಸಮಾನತೆ ನಮ್ಮ ಸಮಾಜದಲ್ಲಿ ಸಿಕ್ಕಲು ಸಾಧ್ಯವಿಲ್ಲ. ಇವತ್ತು ಹಲವಾರು ಸರ್ಕಾರಗಳು ಮಹಿಳೆಯರ ಆಸ್ತಿ ಹಕ್ಕಿನ ಬಗ್ಗೆ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಲಿಲ್ಲ. ಅವರಿಗೆ ಆಸ್ತಿಯಲ್ಲಿ ಹಕ್ಕು ಇರಬೇಕಾ? ಅಥವಾ ಬೇಡವಾ? ಅನ್ನುವ ಬಗ್ಗೆ ಆ ಮೂಲಭೂತ ಸಮಸ್ಯೆ ಇವತ್ತಿಗೂ ಪರಿಹಾರವಾಗಲಿಲ್ಲ. ಇವತ್ತು ಕೇಂದ್ರಸರ್ಕಾರ ಕೂಡ ಒಂದು ಆಯೋಗ ರಚನೆ ಮಾಡಿದೆ, ಆ ಆಯೋಗ ಕೂಡ ಸರ್ಕಾರಿ ಆಯೋಗವಾಗಿದೆಯೇ ಹೊರತು ಸಂಪೂರ್ಣ ಸ್ವಾಯತ್ತ ಅಧಿಕಾರದ ಸಂಸ್ಥೆಯಾಗಿಲ್ಲ. ಎರಡನೆಯದು ಅದರಲ್ಲಿ ಯಾರನ್ನು ನೀವು ಸದಸ್ಯರನ್ನಾಗಿ ಮಾಡುತ್ತೀರಿ? ಆಕ್ಟ್‌ನಲ್ಲಿ ಹೇಳಿರುವ ಪ್ರಕಾರವೇ, ಇಲ್ಲಿ 9 ಸದಸ್ಯರಿರಬಹುದೆಂದು ಮಾನ್ಯ ಸಚಿವರು ಮಂಡಿಸುವಾಗ ಹೇಳಿದರು. ಈ 9ರಲ್ಲಿ 4 ಯಾರೆಂದರೆ ಒಬ್ಬರು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಚಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ, ಎರಡನೆಯದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕರು, ಪದನಿಮಿತ್ತ ಸದಸ್ಯರು, ಮೂರನೆಯದು Director General of Police ಅಥವಾ ಅವರ ನಾಮನಿರ್ದೇಶನದ Deputy Inspector General of Police. ಆಯೋಗದ ಕಾರ್ಯದರ್ಶಿಗಳು, ಅಂದರೆ 9ರಲ್ಲಿ 4 ಸರ್ಕಾರದ ಅಧಿಕಾರಿಗಳು. ಇನ್ನೈದು ಜನ ಯಾರೆಂದರೆ ಸರ್ಕಾರ ನೇಮಕ ಮಾಡುವವರು. ಸರ್ಕಾರ ನೇಮಕ ಮಾಡುವ ಸಂದರ್ಭದಲ್ಲಿ ಸಾಮಾನ್ಯವಾಗಿ ನಮ್ಮ ಅನುಭವ ಇದುವರೆಗೂ ಏನು ತೋರಿದೆ ಎಂದರೆ ಯಾವುದೇ ಸರ್ಕಾರ ಆಯೋಗ, ಸಮಿತಿಯನ್ನು ರಚನೆ ಮಾಡುವಾಗ ಅದರ ಮೂಗಿನ ನೇರಕ್ಕೇ ಆಯೋಗ ಅಥವಾ ಸಮಿತಿಯನ್ನು ನೇಮಕ ಮಾಡುವುದು. ಇಲ್ಲಿ ನಿಜವಾಗಿಯೂ ಕೂಡ ಮಹಿಳೆಯರ ಸಮಸ್ಯೆಗಳನ್ನು ಅರ್ಥಮಾಡಿಕೊಂಡಿರತಕ್ಕಂಥ ಮಹಿಳೆಯರ ಸಮಸ್ಯೆಗಳ ಬಗ್ಗೆ ನಿರಂತರವಾದ ಹೋರಾಟಗಳನ್ನು ನಡೆಸುವಂಥ ಹಲವಾರು ಮಹಿಳಾ ಸಂಘಟನೆಗಳು ಈ ದೇಶದಲ್ಲಿವೆ. ಆ ಸಂಘಟನೆಗಳ ಪ್ರತಿನಿಧಿಗಳನ್ನು ತೆಗೆದುಕೊಳ್ಳುವುದಕ್ಕೆ ಈ ಕಾಯ್ದೆಯಲ್ಲಿ ಅವಕಾಶವನ್ನು ಕೊಟ್ಟಿಲ್ಲ. ಕಟ್ಟಕಡೆಗೆ ಅದೇನಾಗುತ್ತದೆ ಎಂದರೆ ಸರ್ಕಾರದ ಅಧಿಕಾರಿಗಳು ನಾಲ್ಕು ಜನ, ಸರ್ಕಾರದ ನಾಮನಿರ್ದೇಶನ ಮಾಡತಕ್ಕಂಥವರು ಐದು ಜನ ಆಗುತ್ತಾರೆ. ಅಂಥ ಪರಿಸ್ಥಿತಿಯಲ್ಲಿ ಏನಾಗುತ್ತದೆ ಎನ್ನುವುದನ್ನು ನಿಮಗೆ ಒಂದು ಜ್ಞಾಪಕಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಕೇಂದ್ರ ಸರ್ಕಾರ ರಚನೆ ಮಾಡಿದಂಥ ಈ ಮಹಿಳಾ ಆಯೋಗದ ರಾಷ್ಟ್ರೀಯ ಅಧ್ಯಕ್ಷರು ನಿಮಗೆ

ಗೊತ್ತಿರಬಹುದು. ಒರಿಸ್ಸಾ ರಾಜ್ಯದ ಈಗಿನ ಮುಖ್ಯಮಂತ್ರಿ ಪಾಟ್ನಾಯಕ್ ಅವರ ಹೆಂಡತಿ ಶ್ರೀಮತಿಯವರು ಆ ಆಯೋಗವು ಕೆಲಸ ಮಾಡಿದಂಥ ರೀತಿಯ ಬಗ್ಗೆ ಪಾರ್ಲಿಮೆಂಟಿನಲ್ಲಿ ಬಹಳಷ್ಟು ಚರ್ಚೆಯಾಗಿದೆ. ಆ ಅಧ್ಯಕ್ಷರು ಒಬ್ಬ ರಾಜಕೀಯ ಪಕ್ಷದ ಮುಖಂಡರಾಗಿ ಆ ಆಯೋಗವನ್ನೇ ನಡೆಸಿದರೇ ಹೊರತು ನಿಜವಾಗಿಯೂ ಮಹಿಳೆಯರ ಸಮಸ್ಯೆಗಳನ್ನು ಪರಿಹಾರ ಮಾಡುವ ದಿಕ್ಕಿನಲ್ಲಿ ಅವರು ಕೆಲಸ ಮಾಡಲಿಲ್ಲ ಎನ್ನುವುದು ಪಾರ್ಲಿಮೆಂಟ್‌ನಲ್ಲಿ ದೊಡ್ಡ ಚರ್ಚೆಯಾಯಿತು. ಬಹುಶಃ ನಾವು ಇಲ್ಲಿ ಅಯೋಗ ಮಾಡುವಾಗಲೂ ಕೂಡ ಇದೇ ಸಮಸ್ಯೆ ಬರಬಹುದು. ನನಗೆ ಗೊತ್ತಿಲ್ಲ. ನನಗೆ ಅನುಮಾನ ಇದೆ. ಈ ಆಯೋಗಕ್ಕೆ ಇರುವ ಅಧಿಕಾರದ ವ್ಯಾಪ್ತಿಯೇನು? ಮಹಿಳೆಯರಿಗೆ ಇರುವ ಸಮಸ್ಯೆಗಳನ್ನು ಗುರುತಿಸಿ ಸರ್ಕಾರಕ್ಕೆ ಸೂಚನೆ ಮತ್ತು ಸಲಹೆಗಳನ್ನು ಕೊಡುವುದು ಎಂದು. ಸೂಚನೆ ಮತ್ತು ಸಲಹೆಗಳನ್ನು ಸರ್ಕಾರಕ್ಕೆ ಕೊಡತಕ್ಕಂಥದ್ದೇ ಆದರೆ ಅದೊಂದೇ ಈ ಆಯೋಗದ ಕೆಲಸವಾಗುವುದಾದರೆ ಖಂಡಿತಾ ಈ ಆಯೋಗದಿಂದ ಮಹಿಳೆಯರ ಸಮಸ್ಯೆಗಳು ಪರಿಹಾರವಾಗುವುದಕ್ಕೆ ಸಾಧ್ಯ ಇಲ್ಲ. ಎರಡನೆಯದು ಮಹಿಳೆಯರ ಸಮಸ್ಯೆಗಳನ್ನು ಎರಡು ರೀತಿಯಲ್ಲಿ ಇಲ್ಲಿ ನಾವು ನೊಡಬೇಕಾಗುತ್ತದೆ ಮಹಿಳೆಯರಿಗೆ ಇರುವ ಬಹಳ ಮುಖ್ಯವಾದ ಗಂಭೀರ ಸಮಸ್ಯೆ ಎಂದರೆ ಅವರ ಮೇಲೆ ನಡೆಯುವ ದೌರ್ಜನ್ಯಗಳು - ಆಟ್ರಾಸಿಟೀಸ್. ಈ ಅಟ್ರಾಸಿಟೀಸ್ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಅದನ್ನು ನಾವು ಯಾರೂ ಊಹೆ ಮಾಡಲಿಕ್ಕೂ ಕೂಡ ಸಾಧ್ಯವಿಲ್ಲದೇ ಇರುವ ಪರಿಸ್ಥಿತಿಗೆ ಮಹಿಳೆಯರ ಮೇಲೆ ದೌರ್ಜನ್ಯ ಇವತ್ತು ಈ ದೇಶದಲ್ಲಿ ನಡೆಯುತ್ತಿದೆ. ಆದರೆ ಆ ಮಹಿಳೆಯರ ಮೇಲೆ ನಡೆದಂಥ ದೌರ್ಜನ್ಯಗಳ ಬಗ್ಗೆ ಈ ಆಯೋಗದ ಅಧಿಕಾರವೇನು ? ಅದನ್ನು ಸರ್ಕಾರಕ್ಕೆ ಸೂಚನೆ ಮತ್ತು ಸಲಹೆ ಕೊಡುವ ಸಂದರ್ಭ ಬಂದಾಗ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ರೂಪರೇಷೆಗಳನ್ನು ಮತ್ತು ಅದರ ಸ್ವರೂಪಗಳನ್ನು ಸರ್ಕಾರಕ್ಕೆ ಸಲಹೆ ಮತ್ತು ಸೂಚನೆ ಕೊಡುವುದಕ್ಕೆ ಯಾವುದೇ ಅಧಿಕಾರ ಈ ಕಾನೂನಿನಲ್ಲಿ ಇಲ್ಲ. ಇವತ್ತು ಮಹಿಳೆಯರ ಮೇಲೆ ಎಷ್ಟು ಕ್ರೌರ್ಯವಾದ ದೌರ್ಜನ್ಯ ನಡೆಯುತ್ತದೆ ಎಂದರೆ ಅವರನ್ನು ಮನುಷ್ಯರನ್ನಾಗಿ ನೋಡಲಿಕ್ಕೂ ಕೂಡ ತಯಾರು ಇಲ್ಲದೇ ಇರುವ ಅಮಾನವೀಯ ಪರಿಸ್ಥಿತಿಯನ್ನು ಇವತ್ತು ನಾವು ನೊಡುತ್ತಿದ್ದೇವೆ. ಇವತ್ತು ನಮ್ಮದೇಶದಲ್ಲಿ ಒಂದು ಕಾನೂನು ಇದೆ. ಯಾರು ತಪ್ಪು ತಿಳಿಯಬಾರದು.

ಉಪಾಧ್ಯಕ್ಷರು : ಸಲಹೆ ಸೂಚನೆ ಇದ್ದರೆ ಹೇಳಿ.

ಶ್ರೀ. ಜಿ.ವಿ. ಶ್ರೀರಾಮರೆಡ್ಡಿ : ಸೂಚನೆಗಳನ್ನು ಹೇಳುತ್ತಿದ್ದೇನೆ. ಆ ಆಟ್ರಾಸಿಟೀಸ್ ಬಗ್ಗೆ ಈ ಆಯೋಗಕ್ಕೆ ಸ್ವತಂತ್ರವಾಗಿ ತನಿಖೆ ಮಾಡುವಂಥ ಒಂದು ಅಧಿಕಾರ ಬೇಕಾಗಿದೆ. ಏಕೆಂದರೆ ಅದೊಂದೇ ದೊಡ್ಡ ಸಮಸ್ಯೆ ಅಟ್ರಾಸಿಟೀಸ್, ಏಕೆಂದರೆ ಪೋಲೀಸ್‌ನವರು ಕಂಪ್ಲೇಟ್ ಕೊಟ್ಟರೆ ಸಾಕ್ಷಿ ಹೇಳುವವರು ಇರುವುದಿಲ್ಲ. ಗಂಡ ಹೆಂಡತಿ ಮೇಲೆ ದೌರ್ಜನ್ಯ ಮಾಡಿದ್ದಕ್ಕೆ ಸಾಕ್ಷಿ ಯಾರು ಹೇಳಬೇಕು ?

ಸಾಕ್ಷಿ ಯಾರು ಹೇಳುವವರೇ ಇರುವುದಿಲ್ಲ. ಹಾಗಾಗಿ ಕೋರ್ಟಿನಲ್ಲಿ ಕೇಸ್ ಹೋಗಿಬಿಡುತ್ತದೆ. ಆದ್ದರಿಂದ ಈ ಆಯೋಗಕ್ಕೆ ತನ್ನದೇ ಆದಂಥ ಮೂಲಗಳಿಂದ ಅವರ ಮೇಲೆ ನಡೆಯತಕ್ಕಂಥ ದೌರ್ಜನ್ಯಗಳ ಬಗ್ಗೆ ತನಿಖೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವಂಥ ಅಧಿಕಾರವನ್ನು ಈ ಆಯೋಗಕ್ಕೆ ಕೊಡಬೇಕು ಎಂದು ನನ್ನ ಸ್ಪಷ್ಟವಾದ ಒಂದು ಸೂಚನೆ ಅದಿಲ್ಲದೇ ಹೋದರೆ ನಾವು ಮಹಿಳೆಯರಿಗೆ ಇರುವ ಸಮಸ್ಯೆಗಳನ್ನು ಕಡಿಮೆ ಮಾಡಿದಂತೆ ಆಗುವುದಿಲ್ಲ. ಇವತ್ತು ಅತೀ ಮುಖ್ಯವಾಗಿರುವುದು ಆ ಸಮಸ್ಯೆ. ಅದನ್ನು ಈ ಆಯೋಗಕ್ಕೆ ಅಧಿಕಾರ ಕೊಡಬೇಕು. ಅದು ಕೊಟ್ಟರೆ ಮಾತ್ರ ಏನಾದರೂ ಅಲ್ಪಸ್ವಲ್ಪ ಪ್ರಯೋಜನವಾಗುತ್ತದೆ. ಇನ್ನೊಂದು ಪ್ರತಿಯೊಂದು ಕಲಂನಲ್ಲಿ ಇದರಲ್ಲಿರುವಂಥದ್ದು ಬರೀ ಸರ್ಕಾರಕ್ಕೆ ಸಲಹೆ ಕೊಡಬಹುದು. ಸೂಚನೆ ಕೊಡಬಹುದು. ಅಭಿಪ್ರಾಯ ಕೊಡಬಹುದು. ಇಷ್ಟೇ ಇರುವುದು. ಈ ಸಲಹೆ, ಸೂಚನೆ, ಅಭಿಪ್ರಾಯ ಇದಕ್ಕೆ ಆಯೋಗವೇ ಬೇಕಾಗಿಲ್ಲ. ಯಾರು ಬೇಕಾದರೂ ಸಲಹೆ, ಸೂಚನೆ, ಅಭಿಪ್ರಾಯ ಕೊಡಬಹುದು. ಆದರೆ ಆ ಆಯೋಗಕ್ಕೆ ನಿರ್ದಿಷ್ಟವಾದ ಒಂದು ಅಧಿಕಾರ ಇರಬೇಕು. ಇಂಥದ್ದು ಸರ್ಕಾರ ಮಾಡಲೇಬೇಕು. ಇಂಥದ್ದನ್ನು ಸರ್ಕಾರ ಒಪ್ಪಲೇಬೇಕು ಎಂದು ಹೇಳುವುದನ್ನು ಆ ಅಧಿಕಾರವನ್ನು ಆ ಆಯೋಗಕ್ಕೆ ಕೊಡಲೇಬೇಕು. ಇಲ್ಲದಿದ್ದರೆ ಅದಕ್ಕೆ ಅರ್ಥ ಉಳಿಯುವುದಿಲ್ಲ. ಮತ್ತೆ ಸದಸ್ಯರುಗಳನ್ನು ನೇಮಕ ಮಾಡುವಾಗ ನನ್ನ ಅಭಿಪ್ರಾಯ, ಮಹಿಳೆಯರ ಸಮಸ್ಯೆಗಳಿಗೋಸ್ಕರ ಹಲವಾರು ಸಂಘಟನೆಗಳು ಹೋರಾಟ ನಡೆಸುತ್ತಿವೆ. ಭಾರತ ದೇಶದಲ್ಲಿ ರಾಜ್ಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ. ಆ ಸಂಘಟನೆಯಲ್ಲಿ ಕೆಲಸ ಮಾಡುತ್ತಿರುವಂಥವರನ್ನು ಸರ್ಕಾರ ನೇಮಕ ಮಾಡಬೇಕು ಎನ್ನುತ್ತೇನೆ. ನಿರ್ದಿಷ್ಟವಾಗಿ ಹೇಳುವುದಾದರೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಕ ಮಾಡುವಾಗ ಈಗ ಪ್ರಾರಂಭದಲ್ಲಿ ಮೊಟ್ಟಮೊದಲನೆಯ ಆಯೋಗವನ್ನು ಸರ್ಕಾರ ರಚನೆ ಮಾಡಬೇಕಾದರೆ ಸರ್ಕಾರವೇ ಅಧ್ಯಕ್ಷರನ್ನು ನೇಮಕ ಮಾಡಬೇಕಾಗುತ್ತದೆ. ಅದರಲ್ಲೇನೂ ಭಿನ್ನಾಭಿಪ್ರಾಯವಿಲ್ಲ. ಸದಸ್ಯರುಗಳನ್ನು ನೇಮಕ ಮಾಡಬೇಕಾಗುತ್ತದೆ. ಅಧ್ಯಕ್ಷರನ್ನು ಆಯ್ಕೆ ಮಾಡುವಾಗ ಮತ್ತೆ ಸರ್ಕಾರದ ಹಸ್ತಕ್ಷೇಪ ಅದರಲ್ಲಿರಬಾರದು. ಹಿಂದೆ ಇರುವ ಮಹಿಳಾ ಆಯೋಗದ ಅಭಿಪ್ರಾಯವನ್ನು ತೆಗೆದುಕೊಂಡು ಅವರ ಅಭಿಪ್ರಾಯದ ಮೇರೆಗೆ ಅಧ್ಯಕ್ಷರನ್ನು ನೇಮಕ ಮಾಡಬೇಕೇ ಹೊರತು ಏಕೆಂದರೆ ಸರ್ಕಾರ ಬದಲಾವಣೆಯಾಗುತ್ತಾ ಹೋಗುತ್ತಿರುತ್ತದೆ. ಸರ್ಕಾರಗಳು ಬದಲಾವಣೆಯಾಗುತ್ತಾ ಹೋಗುತ್ತಿರುವಂಥ ಸಂದರ್ಭದಲ್ಲಿ ಈ ಅಧ್ಯಕ್ಷರನ್ನು ಈ ಸರ್ಕಾರದ ನೇಮಕ ಮಾಡಿದರೆ ಇನ್ನೊಂದು ಸರ್ಕಾರ ಬಂದು ಅ ಅಧ್ಯಕ್ಷರನ್ನು ತೆಗೆದುಹಾಕಿಬಿಡುತ್ತದೆ. ಇದು ನಮ್ಮಲ್ಲಿರುವ ಒಂದು ಪ್ರವೃತ್ತಿ. ಅದು ತಪ್ಪಬೇಕು. ಕನಿಷ್ಟ ಈ ಮಹಿಳಾ ಆಯೋಗಕ್ಕಾದರೂ ಅದು ತಪ್ಪಬೇಕು. ಅದು ತಪ್ಪಬೇಕೆಂದರೆ ನಿರ್ದಿಷ್ಟವಾದ ನನ್ನ ಸೂಚನೆ ಏನು ಎಂದರೆ ಮೊಟ್ಟಮೊದಲನೆಯ ಮಹಿಳಾ ಆಯೋಗದ ಅವಧಿ

ಪೂರ್ತಿಯಾಗುವ ಸಂದರ್ಭದಲ್ಲಿ ಆ ಹಳೆಯ ಆಯೋಗದ ಅಭಿಪ್ರಾಯವನ್ನು ಕೇಳಿ ಆ ಆಯೋಗದ ಸೂಚನೆಯಂತೆ ಅಧ್ಯಕ್ಷರನ್ನು ನೇಮಕ ಮಾಡಬೇಕು. ಇದು ಒಂದು ಸ್ಪಷ್ಟವಾದ ಅಭಿಪ್ರಾಯ. ಮತ್ತು ಅದೇ ರೀತಿಯಲ್ಲಿ ಈ ಸದಸ್ಯರನ್ನು ನೇಮಕ ಮಾಡುವಾಗಲೂ ಕೂಡ ಈ ಮಹಿಳಾ ಸಂಘಟನೆಗಳ ಜೊತೆಗೆ ರಾಜ್ಯದಲ್ಲಿರುವ ಮಹಿಳಾ ಸಂಘಟನೆಗಳ ಚರ್ಚೆ ಮಾಡಿ ಅವರ ಅಭಿಪ್ರಾಯಗಳ ಮುಖಾಂತರ ಒಂದು ಪ್ಯಾನಲ್‌ನ್ನು ತಯಾರು ಮಾಡಿ ಆ ಪ್ಯಾನಲ್‌ನಲ್ಲಿ ಸುಮಾರು ಹೆಸರುಗಳು ಬರಬಹುದು. ಆಯ್ಕೆ ಮಾಡುವ ಅಧಿಕಾರ ಸರ್ಕಾರಕ್ಕಿರಲಿ. ಆದರೆ ಆ ಮಹಿಳಾ ಸಂಘಟನೆಗಳು ಅವರ ಅಭಿಪ್ರಾಯವನ್ನು ತೆಗೆದುಕೊಂಡು ಅವರು ಸೂಚನೆ ಮಾಡುವ ಪ್ಯಾನಲ್‌ಗಳಲ್ಲಿರುವ ಹೆಸರುಗಳಿಂದ ಆ ಸದಸ್ಯರನ್ನು ನೇಮಕ ಮಾಡಬೇಕು ಎನ್ನುವುದು ನನ್ನ ಅಭಿಪ್ರಾಯ. ಅದೇ ರೀತಿಯಲ್ಲಿ ಅಧ್ಯಕ್ಷರ ಅವಧಿ ಅದು ಸತತವಾಗಿ ಎರಡು ಅವಧಿಗಿಂತ ಮೀರಿ ಇರಬಾರದು. ಏಕೆಂದರೆ ಮತ್ತೆ ಮತ್ತೆ ಅದನ್ನು ಮುಂದುವರೆಸುವಂಥ ಪರಿಸ್ಥಿತಿ ಬರುತ್ತದೆ. ಹಾಗೆಯೇ ಇದರಲ್ಲಿ ಒಂದು ಕಲಂ ಇದೆ ಅಧ್ಯಕ್ಷರನ್ನು ತೆಗೆಯಲಿಕ್ಕೆ. ಅಧ್ಯಕ್ಷರು ಸದಸ್ಯರನ್ನು ತೆಗೆಯಲಿಕ್ಕೆ. ಅಂಥ ಸಂದರ್ಭದಲ್ಲಿ ಯಾವುದೇ ಕಾರಣದಿಂದ ಅಧ್ಯಕ್ಷರನ್ನು ಕೆಳಗೆ ಇಳಿಸಬೇಕಾದಂಥ ಪರಿಸ್ಥಿತಿ ಬಂದಾಗ ಮೆಜಾರಿಟಿ ಅಭಿಪ್ರಾಯವನ್ನು ತೆಗೆದುಕೊಂಡು ಅದರ ನಿರ್ಣಯದ ಆಧಾರದ ಮೇಲೆ ಅಧ್ಯಕ್ಷರನ್ನು ತೆಗೆಯಬೇಕಾಗುತ್ತದೆ. ಏಕಾಏಕಿಯಾಗಿ ಆರ್ಬಿಟ್ರರಿಯಾಗಿ ಸರ್ಕಾರ ಅಧ್ಯಕ್ಷರನ್ನು ತೆಗೆಯಬಾರದು ಎಂದು ನನ್ನ ಅಭಿಪ್ರಾಯ. ಅದೇ ನಿಯಮವೇ ಸದಸ್ಯರನ್ನು ತೆಗೆಯುವಾಗಲೂ ಕೂಡ ಅಳವಡಿಸಬೇಕು ಎಂದು ಹೇಳುವಂಥದ್ದು ನನ್ನ ಅಭಿಪ್ರಾಯ. ಮತ್ತೆ ಈ ಕಾಯ್ದೆಯಲ್ಲಿ ಆಯೋಗಕ್ಕೆ ಬೇಕಾಗಿರುವ ಸಿಬ್ಬಂದಿ ವರ್ಗ ಏನಿದೆ, ಸಿಬ್ಬಂದಿ ವರ್ಗವನ್ನು ನೇಮಕ ಮಾಡುವಂಥದ್ದು ಆ ಅಧಿಕಾರ ಆಯೋಗಕ್ಕೆ ಇರಬೇಕು. ಆಯೋಗಕ್ಕೆ ಬೇಕಾಗಿರುವ ಸಿಬ್ಬಂದಿ ವರ್ಗವನ್ನು ನೇಮಕ ಮಾಡುವ ಸಂದರ್ಭದಲ್ಲಿ ಆ ಸಿಬ್ಬಂದಿಯನ್ನು ನೇಮಕ ಮಾಡತಕ್ಕಂಥ, ಮಾಡಿಕೊಳ್ಳುವಂಥ ಅಧಿಕಾರ ಆ ಆಯೋಗಕ್ಕೆ ಇರಬೇಕು. ಸರ್ಕಾರ ಅದರಲ್ಲಿ ಹಸ್ತಕ್ಷೇಪ ಮಾಡಬಾರದು. ಅದನ್ನು ಅವರಿಗೇ ಬಿಡಬೇಕು. ಇದು ರಾಜ್ಯಮಟ್ಟದ ಆಯೋಗ. ರಾಜ್ಯಮಟ್ಟದ ಆಯೋಗದಲ್ಲಿ ಕಾಯ್ದೆಯಲ್ಲಿ ಏನು ನೀವು ಹೇಳಿದ್ದೀರಿ, ''ನಮಗೆ ಸೂಕ್ತವೆನಿಸಿದ ಸಂದರ್ಭದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಸಭೆಗಳನ್ನು ನಡೆಸಬಹುದು ಎಂದು ಹೇಳಿ. ಅದರ ಬದಲು ನಾನು ಹೇಳುತ್ತೇನೆ. ಈ ರಾಜ್ಯಮಟ್ಟದ ಆಯೋಗದ ಜೊತೆಗೆ ಜಿಲ್ಲಾ ಮಟ್ಟದಲ್ಲೂ ಕೂಡ ಆ ಆಯೋಗಗಳನ್ನು ಮಾಡಿದರೆ ಖಂಡಿತವಾಗಿಯೂ ಇದು ಉಪಯುಕ್ತವಾಗುತ್ತದೆ. ರಾಜ್ಯಮಟ್ಟದ ಆಯೋಗವೊಂದು 9 ಸದಸ್ಯರು ಇರುವ ಒಂದು ಆಯೋಗ ಇಲ್ಲಿ ರಾಜ್ಯದಲ್ಲಿರುವ ಮಹಿಳೆಯರ ಸಮಸ್ಯೆಗಳನ್ನು ಅಭ್ಯಾಸ ಮಾಡುವಂಥದ್ದು ಕಷ್ಟವಾಗುತ್ತದೆ. ಆದ್ದರಿಂದ ಆಯೋಗದ ಕೆಳಗಡೆಯೇ ಜಿಲ್ಲಾಮಟ್ಟದಲ್ಲೂ ಕೂಡ ಒಂದು ಆಯೋಗವನ್ನು ರಚನೆಮಾಡಿದರೆ ನೇರವಾಗಿ

ಮಹಿಳೆಯರಿಗೆ ಇರುವ ಸಂಬಂಧಗಳನ್ನು, ಸಮಸ್ಯೆಗಳನ್ನು ಅಭ್ಯಾಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನನ್ನ ಅಭಿಪ್ರಾಯ. ಹಾಗೆಯೇ ಆ ಆಯೋಗಕ್ಕೆ ನೀವು ಕೊಡುವ ಅಧಿಕಾರಗಳು ಏನಿವೆ ಬರೀ ಅಭಿಪ್ರಾಯ ಮತ್ತು ಸಲಹೆ ನೀಡುವಂತೆ ಆಗುವುದು ಬೇಡ. ತೀರ್ಮಾನ ತೆಗೆದುಕೊಳ್ಳುವ ಅಧಿಕಾರವೂ ಅವರಿಗೆ ಇರಬೇಕು. ಅದರ ಜೊತೆಯಲ್ಲಿ ಈ ತೀರ್ಮಾನವನ್ನು ಜಾರಿಗೊಳಿಸುವಂಥ ಅಧಿಕಾರವೂ ಕೂಡ ಅವರಿಗೇ ಇರಬೇಕು. ಆ ತೀರ್ಮಾನವನ್ನು ಜಾರಿಗೊಳಿಸುವ ಅಧಿಕಾರ ಸರ್ಕಾರದ್ದು ಎಂದರೆ ಅದು ಖಂಡಿತವಾಗಿಯೂ ಇದರಿಂದ ಪ್ರಯೋಜನವಾಗುವುದಿಲ್ಲ. ಏಕೆಂದರೆ ಇವತ್ತಿನ ಸರ್ಕಾರೀ ಯಂತ್ರದಲ್ಲಿ ಎಲ್ಲಾ ಹಂತದಲ್ಲಿ, ರೀತಿಯಲ್ಲಿ ಪುರುಷರೇ ತುಂಬಿರುವುದರಿಂದ ಆ ರೀತಿ ಅವರು ಮಾಡಿದಂತಹ ತೀರ್ಮಾನವನ್ನು ಜಾರಿಗೊಳಿಸತಕ್ಕ ಸಂದರ್ಭದಲ್ಲಿ, ಅದು ಜಾರಿ ಆಗತಕ್ಕ ಸಂರ್ಭದಲ್ಲಿ ಬಹಳಷ್ಟು ವ್ಯತ್ಯಾಸಗಳು ನಡೆಯುತ್ತವೆ. ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವರಿಗೆ ಯಾವ ಅಧಿಕಾರವನ್ನು ಕೊಡುತ್ತೀರೋ, ಅದನ್ನು ಜಾರಿ ಮಾಡತಕ್ಕ ಅಧಿಕಾರವನ್ನು ಕೂಡ ಅವರಿಗೇ ಕೊಡಬೇಕು ಎಂದು ಹೇಳತಕ್ಕದ್ದು ನನ್ನ ಅಭಿಪ್ರಾಯ ಹಾಗೆಯೇ ಇನ್ನೊಂದು ಮುಖ್ಯವಾದಂತಹದು. ಈ ಪ್ರಸಾರ ಮಾಧ್ಯಮಗಳಲ್ಲಿ ಮಹಿಳೆಯರನ್ನು ಬಹಳಷ್ಟು ಕೀಳು ಮಟ್ಟದಲ್ಲಿ ತೋರಿಸತಕ್ಕಂಥಹ ಪ್ರಯತ್ನ ನಡೆಯುತ್ತಿದೆ. ಎಷ್ಟರಮಟ್ಟಿಗೆ ಇವತ್ತು ನಡೆಯುತ್ತಿದೆ ಎಂದರೆ ನಮ್ಮ ಪ್ರಸಾರ ಮಾಧ್ಯಮಗಳು ಶೇವಿಂಗ್ ಮಾಡಿಕೊಳ್ಳತಕ್ಕ ಬ್ಲೇಡಿಗೂ ಮಹಿಳೆಯರಿಗೂ ಏನಾದರೂ ಸಂಬಂಧ ಉಂಟಾ? ಅದಕ್ಕೆ ಅಡ್ವರ್‌ಟೈಸ್‌ಮೆಂಟಿನಲ್ಲಿ ಅವರನ್ನು ತೋರಿಸುತ್ತಾರೆ ಅಂದರೆ ಈ ಪ್ರಸಾರ ಮಾಧ್ಯಮಗಳು ಮಹಿಳೆಯನ್ನು ಎಷ್ಟು ಶೋಷಣೆ ಮಾಡುತ್ತಿದೆ ಎಂದು ಹೇಳಿದರೆ ಅದನ್ನು ಯಾರಾದರೂ ಸಭ್ಯರು ಟಿವಿ ನೋಡುವಾಗ ತಲೆ ತಗ್ಗಿಸತಕ್ಕಂಥ ಪರಿಸ್ಥಿತಿ ಇವತ್ತು ಇದೆ.

ಉಪಾಧ್ಯಕ್ಷರು: ಇದು ಸಮಸ್ಯೆ ಆಯಿತು. ಶ್ರೀರಾಮರೆಡ್ಡಿಯವರೇ ಕಾನೂನು ಬಗ್ಗೆ ಹೇಳಿ. ಅದು ಮಹಿಳಾ ಸಮಸ್ಯೆ ಆಯಿತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಕಾನೂನು ಬಗ್ಗೆಯೇ ಹೇಳುತ್ತಿರುವುದು, ಈ ಪ್ರಸಾರ ಮಾಧ್ಯಮಗಳಲ್ಲಿ ಒಂದೇ ಒಂದು ಸೆಕೆಂಡ್ ಹೇಳುತ್ತೇನೆ.

ಉಪಾಧ್ಯಕ್ಷರು: ಅಲ್ಲಿ ವ್ಯಾಪ್ತವಾಗಿ ಬರುತ್ತದೆ. ಅದರಲ್ಲಿ ವಿಚಾರ ಮಾಡುತ್ತಾರೆ ಅವರು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆ ವ್ಯಾಪ್ತಿಯಲ್ಲಿ ನಾನು ಹೇಳುತ್ತಿರುವುದು ದಯವಿಟ್ಟು ಒಂದೇ ಒಂದು ಸೆಕೆಂಡ್ ಕೇಳಿ. ಪ್ರಸಾರ ಮಾಧ್ಯಮಗಳಲ್ಲಿ ಮಹಿಳೆಯರನ್ನು ಚಿತ್ರೀಕರಣ ಮಾಡತಕ್ಕಂಥ ವ್ಯವಸ್ಥೆ ಏನು ಇದೆ, ಅದರ ಬಗ್ಗೆ ಪರಿಶೀಲನೆ ಮಾಡಿ, ಅದನ್ನು ತಡೆ ಹಿಡಿಯತಕ್ಕಂಥ ಒಂದು ಅಧಿಕಾರವನ್ನು ಈ ಆಯೋಗಕ್ಕೆ ಕೊಡಬೇಕು ಎಂದು ಹೇಳುತ್ತೇನೆ. ಅದಕ್ಕೆ ನಾನು ಉದಾಹರಣೆ ಹೇಳಿದ್ದುದು ಅಷ್ಟೇ ಹಾಗಾದಾಗ

ಮಾತ್ರ ಈ ಮಹಿಳಾ ಆಯೋಗಕ್ಕೆ ಏನಾದರೂ ಒಂದು ನಿಜವಾದಂತಹ ಅರ್ಥ ಬರುತ್ತದೆ. ಇಲ್ಲವೇ ಹೋದರೆ ನಿಜವಾಗಿಯೂ ಕೂಡ ನಮಗೆಲ್ಲಾ ಮಹಿಳೆಯರ ಸಮಸ್ಯೆಗಳನ್ನು ಪರಿಹಾರ ಮಾಡುವುದರ ಬಗ್ಗೆ ಕಳಕಳಿ ಇದ್ದರೆ, ಇದು ಬರೀ ಕಣ್ಣೊರೆಸುವ ತಂತ್ರ ಆಗಬಾರದು. ಸರ್ಕಾರ ಈ ಆಯೋಗವನ್ನು ರಚನೆ ಮಾಡತಕ್ಕ ಕಾಯಿದೆಯನ್ನು ತಂದಿರತಕ್ಕ ಒಳ್ಳೆಯ ಉದ್ದೇಶ ಇರಬಹುದು. ಆದರೆ ಆ ಉದ್ದೇಶ ಸರಿಯಾದ ರೀತಿಯಲ್ಲಿ ಜಾರಿ ಆಗಬೇಕು ಎಂದು ಹೇಳತಕ್ಕದ್ದು ನನ್ನ ಅಭಿಪ್ರಾಯ. ಅದಕ್ಕೋಸ್ಕರವಾಗಿ ಈ ನಿರ್ಧಿಷ್ಟವಾದಂತಹ ಸೂಚನೆಗಳನ್ನು ನಾನು ಕೊಡುತ್ತಿದ್ದೇನೆ. ಅದನ್ನು ಒಪ್ಪಿ ಸರಿಯಾದ ರೀತಿಯಲ್ಲಿ ಒಂದು ಸ್ವಾಯತ್ತತಾ ಸಂಸ್ಥೆಯಾಗಿ ಆಯೋಗವನ್ನು ರಚನೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್ ಅವರು ತಾವೂ ಮಾತನಾಡಬೇಕೇ ತಾವು ಮೊದಲು ಕೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಇದು ಬಹಳ ಪ್ರಮುಖವಾದಂತಹ ವಿಚಾರ.

ಶ್ರೀ ವೈ. ರಾಮಕೃಷ್ಣ: ನಾನು ಕೆಲವು ನಿರ್ಧಿಷ್ಟವಾದ ಸೂಚನೆಗಳನ್ನು ಕೊಡುತ್ತೇನೆ.

ಉಪಾಧ್ಯಕ್ಷರು: ನಿರ್ಧಿಷ್ಟವಾದ ಸೂಚನೆಗಳನ್ನು ಕೊಡಿ.

ಶ್ರೀ ವಾಟಾಳ್ ನಾಗರಾಜ್: ಈ ಹೆಂಗಸರ ವಿಚಾರ ಬಂದಾಗ ನಾವು ಸ್ವಲ್ಪ ಅತ್ತ ಇತ್ತ ಹೋಗಬೇಕಾಗುತ್ತದೆ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಮಹಿಳೆಯರ ವಿಷಯ ಬಂದಾಗ ಸ್ವಲ್ಪ ಘನತೆ ಗಾಂಭೀರ್ಯತೆ ಇರಲಿ. ಲೈಟ್‌ರ್ ವೇನಲ್ಲಿ ಬೇಡ.

ಶ್ರೀ ವಾಟಾಳ್ ನಾಗರಾಜ್: ಬೇಡ ಎಂದರೆ ಕುಳಿತುಕೊಂಡು ಬಿಡುತ್ತೇನೆ.

ಶ್ರೀ ವೈ.ರಾಮಕೃಷ್ಣ: ಇದೊಂದು ಪ್ರಮುಖವಾದಂತಹ ವಿಧೇಯಕವನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಇದು ನನಗಂತೂ ಒಂದು ಪ್ರಾಣ ಸಂಕಟ ಇದ್ದ ಹಾಗೆ. ಉದ್ದೇಶ ಬಹಳ ಚೆನ್ನಾಗಿದೆ. ಏಕೆಂದರೆ ಅದು ಮಹಿಳೆಯರಿಗೆ ಸಂಭಂದಪಟ್ಟಂತಹ ಆಯೋಗ. ಅವರು ಸರ್ವತೋಮುಖದಂಥ ಪ್ರಗತಿ ಹೊಂದಬೇಕು. But it is badly drafted. ಇದನ್ನು ನಾವು ಮಾನ್ಯ ನಾಣಯ್ಯನವರಿಗೆ ಹೇಳಬೇಕಾಗುತ್ತದೆ. ಒಂದು ವೇಳೆ ನೀವೇನಾದರೂ ನ್ಯಾಷನಲ್ ಕಮಿಷನ್ ಅವರು ಮಾಡಿರತಕ್ಕ ಆಕ್ಟನ್ನು ತೆಗೆದುಕೊಂಡಿದ್ದರೊ ಚೆನ್ನಾಗಿತ್ತು. ಅಥವಾ ಕೇರಳದಲ್ಲಿ ಮಾಡಿರತಕ್ಕ ಆಕ್ಟನ್ನು ತೆಗೆದುಕೊಂಡಿದ್ದರೂ ಚೆನ್ನಾಗಿತ್ತು. ಇಲ್ಲ ನೀವೇ ಕುಳಿತುಕೊಂಡು ಮಾಡಿದ್ದರೂ ಚೆನ್ನಾಗಿತ್ತು. ಏಕೆಂದರೆ ನಿಮ್ಮ ಪರಿಣಿತರು ತಮಗೆ ಬೇಕಾದಂತಹ ಅನುಕೂಲವಾದಂತಹ ಒಂದೊಂದು ಕ್ಲಾಸ್‌ಗಳನ್ನು ಒಂದೊಂದು ಸೆಕ್ಷನ್ ತೆಗೆದುಕೊಂಡು ಮಾಡಿದ್ದೀರಿ ಇದು ಸರ್ವಥಾ ಒಳ್ಳೆಯದಲ್ಲ. ಇದಕ್ಕೆ ಅನೇಕ ಕಾರಣ ಇದೆ. ಮಾನ್ಯ ಸದಸ್ಯಣಿಯರಾದ ನಮ್ಮ ಪ್ರಮಿಳಾ ನೇಸರ್ಗಿಯವರು ಭಾಷಣ ಮಾಡಿದರು. ಬಿಲ್‌ನಲ್ಲಿ

ಲೋಪದೋಷಗಳು ಯಾವ ರೀತಿ ಇದೆ ಎಂದು ತಮಗೆ ಹೇಳುತ್ತಿದ್ದೇನೆ. ನಾನು ತಮಗೆ ಹೇಳುತ್ತೇನೆ. ನಮಗೆ ಸ್ವರಾಜ್ಯ ಬಂದ ಮೇಲೆ ರಾಜ್ಯಾಂಗ ನಿರ್ಮಾಪಕರು ಈ ಕಾನ್‌ಸ್ಟಿಟ್ಯೂಷನ್ ಅಡಿಯಲ್ಲಿ ಆರ್ಟಿಕಲ್ 15(3)

"Nothing in this Article shall prevent the state from making any provision for women and Children." ಅಂತ ಹೇಳಿದ್ದಾರೆ.

ಈ ಒಂದು ರಾಜ್ಯಾಂಗದ ಹದಿನೈದನೇ ಪರಿಚ್ಛೇದದ ಅಡಿಯಲ್ಲಿ ಈ ಒಂದು ಕಮಿಷನ್‌ರ್‌ನ್ನು ನೇಮಕ ಮಾಡಿದರು. ಈಗಾಗಲೇ 47 ವರ್ಷ ಆಗಿ ಹೋಯಿತು. ಅದು ಕೂಡಲೇ ಜಾರಿಗೆ ಬರಬೇಕಾಗಿತ್ತು. ತಡವಾಗಿ ಬಂದಿದ್ದರಿಂದ ಮಹಿಳಾ ಅಭಿವೃದ್ಧಿ ನಮ್ಮ ಇಂಡಿಯಾ ದೇಶದಲ್ಲಿ ನಮ್ಮ ಕರ್ನಾಟಕದಲ್ಲಿ ತಡವಾಗಿದೆ. ಬಹುಶಃ ನಮ್ಮ ರಾಜ್ಯಾಂಗ ಜಾರಿಗೆ ಬಂದ ಕೂಡಲೇ ನಾವು ಈ ಒಂದು ಪ್ರಾವಿಜನ್ ಅನ್ನು ಉಪಯೋಗಿಸಿಕೊಂಡು ಆಯೋಗವನ್ನು ರಚನೆ ಮಾಡಿದ ಪಕ್ಷಕ್ಕೆ ಇವತ್ತು ಕೂಡ ಅವರು ಗಂಡಸರಿಗೆ ಸರಿಸಮಾನವಾದಂತಹ ಸ್ಥಾನಮಾನಗಳನ್ನು ಪಡೆಯುತ್ತಿದ್ದರು. ಎಂದು ನಾನು ವಿಧಿ ಇಲ್ಲದೆ ಹೇಳಬೇಕಾಗಿದೆ ಇವತ್ತು ಇಡೀ ಇಂಡಿಯಾ ದೇಶದಲ್ಲಿ ತಾವು ಕೇರಳಕ್ಕೆ ಹೋಗಿ ಅಲ್ಲಿ ನೋಡಿ ಅಲ್ಲಿ ಎಜುಕೇಷನ್ ಜಾಸ್ತಿ ಇದೆ. ವಿಮನ್ ಎಜುಕೇಶನ್ ನಿಯರ್‍ಲಿ 48 ಪರ್ಸೆಂಟ್ ಜಾಸ್ತಿ ಇದೆ. ರಾಜಾಸ್ಥಾನಕ್ಕೆ ಹೋಗಿ ನೋಡಿ 15 ಪರ್ಸೆಂಟ್. ನೀವು ಆಯೋಗವನ್ನು ರಚನೆ ಮಾಡುವಾಗ ಈ ಎಲ್ಲ ವಿಚಾರಗಳನ್ನು ನೀವು ಕ್ರೋಢಿಕರಿಸಿ ಯಾವ ವಿಧವಾದಂತಹ ಆಯೋಗ ಇರಬೇಕು. ಹೇಗೆ ಇರಬೇಕು? ಇದನ್ನು ಸ್ವಲ್ಪ ಆಲೋಚನೆ ಮಾಡಿದ್ದರೆ ನಮ್ಮ ಕರ್ನಾಟಕಕ್ಕೆ ಅನುಗುಣವಾಗಿ ಯಾವ ರೀತಿ ರಚನೆ ಮಾಡಬೇಕು ಎನ್ನತಕ್ಕ ವಾಸ್ತವಾಂಶ ತಮಗೆ ಗೊತ್ತಾಗುತಿತ್ತು. ಇವತ್ತು ಏನು ಆಗಿದೆ, ಕೇರಳದಲ್ಲಿ ಎಜುಕೇಶನ್ ಜಾಸ್ತಿ ಇದೆ. ಹೈಕೋರ್ಟ್ ಜಡ್ಜಸ್ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಕೇರಳ ಆ್ಯಕ್ಟ ಬಹಳ ಪವರ್‌ಫುಲ್ ಇದೆ. ಏಕೆಂದರೆ There womens are in majority, Women constitute 51% and male constitute 49%.

Sri. M.C.Nanaiah: In Karnataka quite a large member of Women they can be treated as men.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಹೀಗೆ ಸಹಿಸಿಕೊಂಡು ಕುಳಿತರೆ ಹೇಗೆ?

ಶ್ರೀ ಎಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಂತ್ರಿಯವರಿಗೆ ಹೇಳುತ್ತೇನೆ. ಬಹು ಜನ ಗಂಡಸರನ್ನೇ ನಾವು ಹೆಂಗಸರು ಎಂದು ಟ್ರೀಟ್ ಮಾಡಬಹುದು. ಅದರಿಂದ ಅವರ ಸಂಖ್ಯೆ ಜಾಸ್ತಿ ಆಗಬೇಕು.

ಶ್ರೀಮತಿ ಪ್ರಮಿಳಾ ನೇಸರ್ಗಿ: ನಂಜೇಗೌಡರು ಹೇಳಿದ್ದುದು ಈ ಸದನದಲ್ಲೋ ಅಥವಾ ಬೇರೆ ಕಡೆಯೋ ಅದು ಗೊತ್ತಾಗಲಿಲ್ಲ.

ಶ್ರೀ ವೈ.ರಾಮಕೃಷ್ಣ: ಈಗ ನಮ್ಮ ರಾಷ್ಟ್ರದಲ್ಲಿ ಮೊಟ್ಟಮೊದಲನೆಯ ಆಯೋಗ ರಚನೆ ಆಗಿದ್ದು ಕಾಕಾ ಕಾಳೇಳಕರ್ ಅವರ ಕಾಲದಲ್ಲಿ. ನಮಗೆ ಸ್ವರಾಜ್ಯ ಬಂದ ಮೇಲೆ ಮೊಟ್ಟಮೊದಲನೆಯದಾಗಿ ಆಯೋಗ ರಚನೆ ಆಗಿದ್ದು ಕಾಕಾ ಕಾಳೇಳಕರ್ ಅವರದ್ದು. ಆ ಕಾಕಾ ಕಾಳೇಳಕರ್ ಕಮಿಟಿಯಲ್ಲಿ ಅವರು ಏನು ಹೇಳಿದರು ಏಂದರೆ ಅದು ಪಬ್ಲಿಷ್ ಆಗಿಲ್ಲ ಅಥವಾ ಪ್ರಿಂಟೂ ಆಗಿಲ್ಲ. ಕೆಲವಾರು ಕಾರಣಾಂತರಗಳಿಂದ, ರಾಜಕೀಯ ಕೈ ಒತ್ತಡಕ್ಕೆ ಸಿಕ್ಕಿ ಅದು ಬರೀ ಒಂದು ಮಸೂದೆ ಇದೆ. ಪಾರ್ಲಿಮೆಂಟ್‌ನಲ್ಲಿದೆ. ಅದನ್ನು ಯಾರು ಬೇಕಾದರೂ ಹೋಗಿ ನೋಡಬಹುದು. ಓದಬಹುದು ಅವರು ಏನು ಹೇಳಿದ್ದಾರೆ ಎಂದರೆ ನೂರಕ್ಕೆ 50ರಷ್ಟು ಮಹಿಳೆಯರು ನಮ್ಮ ರಾಷ್ಟ್ರದಲ್ಲಿ ಇರುವಾಗ ಅವರು ಪ್ರಗತಿ ಹೊಂದದೇ ಇರುವಾಗ ಅವರನ್ನು ಏಕೆ ಬ್ಯಾಕ್‌ವರ್ಡ್ ಕ್ಲಾಸಿಗೆ ಸೇರಿಸಿದ್ದೀರಿ ಎಂದು ಅವರು ಹೇಳಿರತಕ್ಕ ಮಾತು. Entire women who constitute 51% of the population, they are treated as backward class, not as a caste, but as a class. ಇದನ್ನು ಹೀಗೆ ಸೇರಿಸಿದ್ದೇನೆ ಅಂತ ಬಹಳ ಧೈರ್ಯವಾಗಿ ಅವರು ಬರೆದಿದ್ದರು.

ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈ ಬಿಲ್ಲನ್ನು ತಾವೇನು ಡ್ರಾಫ್ಟ್ ಮಾಡಿದ್ದೀರಿ ಇದರಲ್ಲಿ ತಿದ್ದುಪಡಿಗಳಿಗೆ ಬಹಳ ಅವಕಾಶ ಇದೆ. ಮಾಡಿದರೆ ಉತ್ತಮ; ನಾನು ಹೇಳುತ್ತಾ ಇರತಕ್ಕದ್ದು ಇವತ್ತಲ್ಲಾ ನಾಳೆ ತಂದೇ ತರುತ್ತೀರಿ, ನನಗೆ ಅದರಲ್ಲಿ ನಂಬಿಕೆ ಇದೆ. ತಾವು ತಂದೇ ತರುತ್ತೀರಿ. ತರದಿದ್ದರೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮನ್ನು ನಾನು ಡೈರೆಕ್ಟಾಗಿ ಒಂದು ಪ್ರಶ್ನೆ ಕೇಳುತ್ತಿದ್ದೇನೆ. Whether it is advisory in nature or it is an autonomous body? please tell me. ಇದನ್ನು ಅಡ್ವೈಸರಿ ಬಾಡಿ ಎಂದು ಹೇಳಿದರೆ ಇದು ಕಮೀಷನ್ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದರಲ್ಲಿ ಹೇಳುತ್ತೀರಿ-ಸಿವಿಲ್ ಪ್ರೊಸೀಜರ್ ಕೋಡ್‌ಗೆ ಕೊಡಬೇಕಾದ ರೂಲ್ಸನ್ನು ಫಾಲೋ ಮಾಡುತ್ತೇವೆಂದು ಹೇಳುತ್ತೀರಿ. ಸಿವಿಲ್ ಪ್ರೊಸೀಜರ್ ಕೋಡನ್ನು ಇಲ್ಲಿ ತಂದಿದ್ದೀರಿ. ಅಡ್ವೈಸರಿ ನೇಚರ್ ಎಂದು ಹೇಳುತ್ತೀರಿ. ಇವತ್ತು ಶೆಡ್ಯೂಲ್‌ಕಾಸ್ಟ್ ಕಮೀಷನ್ ಇದೆ. ಮೈನಾರಿಟಿ ಕಮೀಷನ್ ಇದೆ, ವಿಮೆನ್ ಕಮೀಷನ್ ಇದೆ, ಬೇಕಾದಷ್ಟು ಕಮೀಷನ್‌ಗಳು ಕೆಲಸ ಮಾಡುತ್ತಿವೆ. They have got autonomous powers, they can frame their own rules. They can take evidences.

ಇದರಲ್ಲಿ ಮಾಡುವುದಕ್ಕೆ ಆಗುತ್ತದೆಯೇ? ಏಕೆ ಇಂತಹ ಬಿಲ್‌ನ್ನು ನೀವು ಮಾಡಿದಿರಿ? ಉದ್ದೇಶ ಚೆನ್ನಾಗಿದೆ. I am not questioning the motive in bringing this Bill. But it fails in bringing as much result as it should.

ಅದಕ್ಕೋಸ್ಕರವಾಗಿ ನೀವು ಪುನರಾಲೋಚನೆ ಮಾಡಿ. ಇವತ್ತು ಬಿಲ್ ಪಾಸ್ ಮಾಡಿಕೊಳ್ಳಿ. ಏಕೆಂದರೆ ನಮ್ಮ ಸಮ್ಮತಿ ಇದೆ ಮಾಡಿಕೊಳ್ಳಿ. ಆದರೆ ಬೇರೆ ರಾಜ್ಯಗಳಿಗೆ ಇದನ್ನು ನೋಡಿದಾಗ ಅಷ್ಟು ಗಮ್ಮತ್ತು ಬರುವುದಿಲ್ಲ. ನನ್ನ ಒಪೀನಿಯನ್ ನಾನು ಹೇಳಬೇಕಲ್ಲ. ಇಲ್ಲಿ ಸೆಕ್ಷನ್ 11(2) ಮಾಡಿದ್ದಾರೆ. ಇದು ಎಷ್ಟು ಅನ್ಯಾಯ ಎಂದು ಹೇಳಿದರೆ, ತಾವು ಒಪ್ಪಿ ತಾವು ಅಡ್ವೊಕೇಟ್ ಆಗಿ ಪ್ರಾಕ್ಟೀಸ್ ಮಾಡಿದ್ದೀರಿ, ತಮಗೆ ಅನುಭವ ಇದೆ, ಲಾ ಮಿನಿಷ್ಟರ್ ಆಗಿದ್ದೀರಿ ತಾವು ಹೇಳಿ.

" The Commission shall have the power to co-opt as members including the representative of the Non Government organisations more particularly Women organisations.

and the person so co-opted shall have right to attend the meeting but shall not have the right to vote."

ಇದೇನಾದರೂ ತಾವು ನೋಡಿದ್ದೀರಾ? ಇಂತಹದು. ಕಮೀಷನ್‌ನಲ್ಲಿ ಆರು ಜನ ಇರಬೇಕು. ನಾನು ಒಪ್ಪುತ್ತೇನೆ. ನ್ಯಾಷನಲ್ ಕಮೀಷನ್ ತಮಗೆ ರೆಕ್ಮಂಡ್ ಮಾಡಿರುವುದು ಆರು ಜನರನ್ನೇ; ಛೇರ್ಮನ್‌ಲಿಸ್ಟ್ ತಾವೇನು ಮಾಡಿದ್ದೀರಿ? ಇಲ್ಲಿ ನೀವು ಇಷ್ಟ ಬಂದಷ್ಟು ಜನರನ್ನು ನೇಮಕ ಮಾಡಬಹುದು. ಅವರನ್ನೆಲ್ಲಾ ತಾವು ಮೆಂಬರ್ಸ್ ಆಗಿ ಮಾಡಿಕೊಳ್ಳಬಹುದು. ಅವರಿಗೆ ವೋಟಿಂಗ್ ಪವರ್ ಇಲ್ಲ, ಪಾರ್ಟಿಸಿಪೇಟ್ ಮಾಡಬಹುದು. ಟಿಎ ಡಿಎ ಕೊಡಬಹುದು ಸ್ಯಾಲರಿ ಕೊಡಬಹುದು ಎಂದು ತಾವು ಮಾಡಿದ್ದೀರಿ but shall not have right to vote ಇದು ಏನು ಆಗುತ್ತದೆ? It will be a cultural organisation. It is nothing short of a cultural organisation.. ಅದನ್ನು ನ್ಯಾಶನಲ್ ಅಕಾಡೆಮಿ ಎಂದು ತಿಳಿದುಕೊಂಡಿದ್ದಾರೋ ಅಥವಾ ಕಮಿಷನ್ ಎಂದು ತಿಳಿದುಕೊಂಡಿರೋ? If it is a commission, that provision ಏಕೆ ಇದನ್ನು ತಾವು ಮಾಡಿದಿರಿ ಎಂದು ನಾನು ಕೇಳುತ್ತಿದ್ದೇನೆ. ಒಂದು ವೇಳೆ ನಿಮಗೆ ಎಕ್ಸಪರ್ಟೈಸ್ ಒಪೀನಿಯನ್ ಬೇಕೆಂದರೆ call them as witnesses. ಸಿವಿಲ್ ಪ್ರೊಸೀಜರ್ ಕೋಡ್ ಪ್ರಕಾರ ತಮಗೆ ಅಧಿಕಾರ ಇರುವಾಗ call them as witnesses, take their expert advice ಇದನ್ನು ಏಕೆ ತಾವು ಮಾಡುತ್ತೀರಿ? ಹೀಗೆ ಮಾಡುವುದರಿಂದ ಏನಾಗುತ್ತದೆ? ತಮಗೆ ಒಂದು ಉದಾಹರಣೆ ಹೇಳುತ್ತೇನೆ. ತಾವು ಕಮೀಷನ್ ಮೇಲೆ ಏನೋ ಒಂದು ವಿಚಾರ ಹೇಳುತ್ತೀರಿ. ಏನು ಹೇಳುತ್ತೀರಿ ಇಂತಹವರನ್ನು ತಾವು ಮೆಂಬರ್ ಆಗಿ ಮಾಡಿಕೊಳ್ಳಿ ಎಂದು ತಾವು ಹೇಳುತ್ತೀರಿ. ಚೀಫ್ ಮಿನಿಸ್ಟರ್ ಹೇಳುತ್ತಾರೆ, ಮಾಡುವುದಿಲ್ಲ ಮಾಡುತ್ತೀರಿ ಎಂದು ಇಟ್ಟುಕೊಳ್ಳಿ. ಡೆಪ್ಯೂಟಿ ಚೀಫ್ ಮಿನಿಸ್ಟರ್ ಹೇಳುತ್ತಾರೆ ಇವು ಬಿಟ್ಟು ಹೋಗಿದೆ

ಇದನ್ನು ಮಾಡಿ ಎಂದು ಹೇಳುತ್ತಾರೆ. ಜಾಲಪ್ಪನವರು ಹೇಳುತ್ತಾರೆ. ಮೈನಾರಿಟಿ ಕಮ್ಯುನಿಟಿಯಿಂದ ಇಂತಹವರನ್ನು ನೀವು ನೇಮಕ ಮಾಡಿಕೊಳ್ಳಿ ಎಂದು. ಅನಂತರ ಪ್ರತಿಯೊಬ್ಬ ಮಂತ್ರಿಗಳು ಸಹ ಒಬ್ಬೊಬ್ಬರ ಹೆಸರನ್ನು ಹೇಳಿಬಿಟ್ಟರೆ what will be the size of the Commission? ನಾನು ಒಪ್ಪಿದೆ. ಈಗ ನಿಮ್ಮ ಸಲಹೆಯನ್ನು ತಾನೇ ಅವರು ಕೇಳುವುದು? Whose advice they are going to adhere?

ಶ್ರೀ ಎಂ.ಸಿ.ನಾಣಯ್ಯ : ನಾವು ತಂದಿರುವ ಕಾನೂನು ಯಾವುದಿದೆ, ಮಾನ್ಯ ಹಿರಿಯ ಸದಸ್ಯರಾದ ರಾಮಕೃಷ್ಣರವರು ಹೇಳಿದಂತೆ ಕೇಂದ್ರ ಸರ್ಕಾರ್ ತಂದಿರುವ ಆಯೋಗ ಯಾವುದಿದೆ, ಅದರ ಹಿನ್ನೆಲೆಯಲ್ಲಿ ಅದನ್ನು ತರಬಹುದಿತ್ತೆಂದು ಅಥವಾ ಕೇರಳದಲ್ಲಿ ಯಾವ ರೀತಿ ಮಾಡಿದ್ದಾರೋ ಅದರ ಹಿನ್ನೆಯಲ್ಲಾದರೂ ತರಬಹುದಿತ್ತೆಂದು. ನಾನು ಹೇಳುತ್ತಿದ್ದೇನೆ, ಕೇಂದ್ರದ ಆಯೋಗ ಮಾಡಿರುವ ಆ್ಯಕ್ಟ್ ಏನಿದೆ, ಅದರಲ್ಲಿರುವ ಪ್ರತಿಯೊಂದನ್ನೂ ನಾವು ಅಳವಡಿಸಿಕೊಂಡಿದ್ದು, ಕೆಲವು ಸ್ಥಳೀಯವಾಗಿರುವ ಕೆಲವೇ ಕೆಲವು ತಿದ್ದುಪಡಿಗಳನ್ನು ಹೊರತುಪಡಿಸಿದರೆ ಪ್ರತಿಯೊಂದು ಸೆಂಟ್ರಲ್ ಆ್ಯಕ್ಟ್‌ನಲ್ಲಿ ಯಾವ ರೀತಿ ಇದೆಯೋ, ಅದಕ್ಕನುಗುಣವಾಗಿಯೇ ನಾವು ಕಾನೂನು ಮಾಡುತ್ತಿದ್ದೇವೆ. ನನ್ನ ಹತ್ತಿರ ಆ ಆ್ಯಕ್ಟ್ ಇದೆ, ತಮಗೆ ಬೇಕಾದರೆ ಕಳುಹಿಸಿಕೊಡುತ್ತೇನೆ, ನೋಡಿ. We have incorporated all the provisions of the Cental Act.

* Sri Y. Rama Krishna : It is a vast country. There are innumerable problems. Good many number of socio-economic problems are there. ಅಲ್ಲಿ ಅದು ಬೇಕಾಗುತ್ತದೆ ಆದರೆ, ಒಂದು ರಾಜ್ಯಕ್ಕೋಸ್ಕರ ಇದನ್ನು ಮಾಡುವುದು ಸರಿಯಲ್ಲ. ಒಂದು ವೇಳೆ ಮಾಡಿದಿರಿ ಅಂದರೆ ಅದಕ್ಕೇನು ಮಾಡಬೇಕು? Call them as witnesses, take their opinion and send them away. ನೀವೆಲ್ಲಾ ಆಯೋಗದಲ್ಲಿ ಕುಳಿತುಕೊಂಡು ಅಧಿಕಾರ ನಡೆಸುತ್ತೇವೆಂದರೆ is it ever possible? ಒಂದು ಕಡೆ ನೀವೇ ಮೊದಲು ತಮ್ಮ ರಿಮಾರ್ಕ್ಸ್ ಹೇಳಿದಿರಿ. ನೀವು ಪ್ರಮೀಳಾ ನೇಸರ್ಗಿಯವರಿಗೆ ಹೇಳುತ್ತಾ ಆಯೋಗದಲ್ಲಿ ಬಹಳ ಜನ ಮಹಿಳೆಯರಿದ್ದರೆ ಕಿತ್ತಾಡುತ್ತೀರಿ. ಎಂದಿದ್ದೀರಿ. ಹೀಗಾದರೆ ಏನಾಗುತ್ತದೆಂದು ತಾವು ಆಲೋಚನೆ ಮಾಡಿ.

Sri. M.C. Nanaiah : It was not my opinion, it is a fact of history.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದನ್ನು ನಾನು ಒಪ್ಪುವುದಿಲ್ಲ. ಯಾವುದು ಚರಿತ್ರೆ? ಈ ದೇಶದ ಚರಿತ್ರೆ ಬಗ್ಗೆ ಬೇಕಾದರೆ ಒಂದು ದಿವಸವೆಲ್ಲಾ ಚರ್ಚೆ ಮಾಡಿ ತೀರ್ಮಾನ ಮಾಡೋಣ. ಯಾವುದು ಇತಿಹಾಸ ? ಮತ್ತು ಯಾವುದು ನಿಮ್ಮ

ಬಾಯಿಂದ ಬಂದಿರುವ ಸತ್ಯವಿದೆಯೋ, ಅದರ ಬಗ್ಗೆಯೂ ವಿಚಾರ ಮಾಡೋಣ. ಆದರೆ, ಈ ಸಂದರ್ಭದಲ್ಲಿ ಅದನ್ನು ಮಾಡುವುದು ಒಳ್ಳೆಯದಲ್ಲವೆಂದು ನನ್ನ ಭಾವನೆ.

ಶ್ರೀಮತಿ ಬಿ.ಟಿ.ಲಲಿತಾನಾಯಕ್ : ನಾಲ್ಕು ಜನ ಅಧಿಕಾರಿಗಳು ಮತ್ತು ಏಳು ಜನ ಅಧಿಕಾರೇತರ ಸದಸ್ಯರುಗಳು ಈ ಆಯೋಗದಲ್ಲಿರುತ್ತಾರೆ. ಆ ಏಳು ಜನರಲ್ಲಿ ಎಲ್ಲರೂ ಮಹಿಳೆಯಿರುವುದಿಲ್ಲ ಕೆಲವರಿರುತ್ತಾರೆ ಮಹಿಳೆಯರಿದ್ದರೆ ಹೆಚ್ಚು ಕಿತ್ತಾಟವಿರುತ್ತದೆಂದು ತಾವು ಏನು ಹೇಳುತ್ತಿದ್ದೀರಿ, ಎಲ್ಲಿಯ ತನಕ ಬೆಂಕಿಯಲ್ಲಿ ಬಂಗಾರವನ್ನು ಪರೀಕ್ಷಿಸಬೇಕೋ ಅದರ ಬದಲಿಗೆ ಮಹಿಳೆಯನ್ನೇ ಸುಟ್ಟುಹಾಕುವಂಥ ಶ್ರೀರಾಮಚಂದ್ರರಿರುತ್ತಾರೋ ಅಲ್ಲಿಯವರೆಗೆ ಇದು ಬೇಕಾಗುತ್ತದೆ. ಎಲ್ಲಿಯವರೆಗೆ ರಾಮನಂಥವರು ಇರುತ್ತಾರೋ ಅಲ್ಲಿಯವರೆಗೆ ಸೀತೆಯಂತವರ ರಕ್ಷಣೆಗೆ ಈ ಆಯೋಗ ಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಹೇಳಿದಂತೆ ಚಿನ್ನವನ್ನು ಬೆಂಕಿಯಲ್ಲಿ ಹಾಕಿ ಪರೀಕ್ಷಿಸುವಂತೆ ನಿಮ್ಮ ರಾಮನನ್ನು ಯಾವುದರಲ್ಲಿ ಹಾಕಬೇಕು?

ಶ್ರೀ ವೈ.ರಾಮಕೃಷ್ಣ : ನಾನು ನಿಮಗೆ ಬೆಂಬಲ ಕೊಡಲು ನಿಂತಿದ್ದೇನೆ.

ಶ್ರೀಮತಿ ಬಿ.ಟಿ.ಲಲಿತಾನಾಯಕ್ : ಮಹಿಳೆ ಮಹಿಳೆಯನ್ನು ಸುಡಲಿಲ್ಲ, ಪುರುಷ ಮಹಿಳೆಯರನ್ನು ಸುಟ್ಟಿದ್ದಾನೆ, ಇದು ನೆನಪಿರಲಿ.

ಶ್ರೀ ವೈ.ರಾಮಕೃಷ್ಣ : ಆಯಿತು ಸ್ವಾಮಿ, ಈಗ How backward they are ಅಂದರೆ ಇದರ ಬಗ್ಗೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ನಮ್ಮ ವಿಧಾನಸಭೆಯಲ್ಲಿ 35 ಮೀಸಲು ಸ್ಥಾನಗಳಿವೆ. ಆ ಮೀಸಲು ಸ್ಥಾನಗಳಲ್ಲಿ ಗೆದ್ದು ಬಂದಿರುವ ಮಹಿಳೆಯರ ಸಂಖ್ಯೆ ಎಷ್ಟು? in spite of the reservation? ಈ 35 ಸ್ಥಾನಗಳಲ್ಲಿ ಮಹಿಳೆ ಎಲ್ಲಿಂದ ಬೇಕಾದರೂ ಸ್ಪರ್ಧಿಸಬಹುದಿತ್ತು. ಬಹುಶಃ ಇವೋತ್ತು ಇಬ್ಬರು ಮಹಿಳಾ ಮಂತ್ರಿಗಳನ್ನು ಹೊರತುಪಡಿಸಿದರೆ ಪ್ರಾತಿನಿಧ್ಯ ಬರುವುದಕ್ಕಾಗುವುದಿಲ್ಲ. Inspite of the reservation, ಪರಿಸ್ಥಿತಿ ಹೀಗಿರುವಾಗ, ದರೋಡೆ, ಖೂನಿ, ಅತ್ಯಾಚಾರಗಳು ಜಾಸ್ತಿಯಾಗುತ್ತಿರುವಾಗ ಮತ್ತು ಅವರ ಮೇಲೆ ಕೌಟುಂಬಿಕ ವಿಷಯದಲ್ಲಿ ಕೋರ್ಟ್‌ನಲ್ಲಿ ವ್ಯವಹಾರಗಳು ಜಾಸ್ತಿ ನಡೆಯುತ್ತಿರುವಾಗ ಇವೆಲ್ಲಾ ಅಂಶಗಳನ್ನು ಗಮನಲ್ಲಿಟ್ಟುಕೊಂಡು ದಕ್ಷತೆಯಿಂದ, ನಿಷ್ಪಕ್ಷಪಾತವಾಗಿ ಕೆಲಸ ಮಾಡುವವರನ್ನು ನೀವು ಆಯೋಗದಲ್ಲಿ ನೇಮಿಸಬೇಕು. ಈ ಕಾನೂನು ಮಾಡಿದರೆ ಸಮಸ್ಯೆಗಳು ಪರಿಹಾರವಾಗುತ್ತದೆಂದು ಭಾವಿಸಬಾರದು. ಆಯೋಗವನ್ನು ಕೈಗೆತ್ತಿಕೊಂಡು ಅದರ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಸಮರ್ಥ, ಶಕ್ತಿಯುತರಾದ ಮಹಿಳೆಯರನ್ನು ಆಯೋಗದಲಿ ನೇಮಿಸುವ ಅವಶ್ಯಕತೆಯಿದೆ. ಇದರಲ್ಲಿ ಒಂದು ಸಂತೋಷ ಪಡುವ ಸಂಗತಿಯೇನೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಪ್ರತಿನಿಧಿಸುವವರಿದ್ದಾರೆ, ಉಳಿದ ನಾಲ್ಕು ಜನ ಬೇರೆಯವರನ್ನು ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ನನಗನಿಸುತ್ತದೆ: outstanding personalities who are well - versed in all laws ಇವರಲ್ಲಿ ಹೇಳಿರುವಂತೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರ

ವಿಚಾರ ತಿಳಿದುಕೊಂಡವರಾಗಿರಬೇಕು ಅಥವಾ ವ್ಯವಸಾಯದ ಅಭಿವೃದ್ಧಿ ವಿಚಾರವಾಗಿ ತಿಳಿದುಕೊಂಡವರಿರಬೇಕು, ನಾನಾ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವವರನ್ನು ಆಯೋಗಕ್ಕೆ ನೇಮಿಸಿ, ಆಯೋಗದ ಉದ್ದೇಶಗಳು ಜಾರಿಗೆ ಬರಬೇಕು, ಆಯೋಗಕ್ಕೆ ಬರೀ ವಿದ್ಯಾವಂತರನ್ನು ಅಥವಾ ಅಕ್ಯಾಡೆಮಿಷಿಯನ್ಸ್ ಹಾಕುವುದಾದರೆ, ಅಕ್ಯಾಡೆಮಿಷಿಯನ್ಸ್ ಬಹಳ ಜನ ಸಿಗುತ್ತಾರೆ ನಿವೃತ್ತರಾಗಿರುವವರು ಸಿಗುತ್ತಾರೆ ಹಾಲಿ ಇರುವವರು ಸಿಗುತ್ತಾರೆ. ಬರೀ ಅಕ್ಯಾಡೆಮಿಷಿಯನ್ಸ್ ಹಾಕುವುದು ಸೂಕ್ತವಲ್ಲ. ವಸ್ತುಸ್ಥಿತಿ ಬಗ್ಗೆ ತಿಳಿವಳಿಕೆಯಿರುವ ಮಹಿಳೆಯರನ್ನು ಸದಸ್ಯರನ್ನಾಗಿ ನೇಮಿಸಿ, ಈ ಒಂದು ಆಯೋಗಕ್ಕೆ 46ಲಕ್ಷ ರೂಪಾಯಿಗಳನ್ನು ಏನು ತೆಗೆದಿರಿಸಿದ್ದೀರಿ, ಅದು ಸಾಲುವುದಿಲ್ಲ. ನಾವು ಸುಮಾರು 2 ಕೋಟಿ 35ಲಕ್ಷ ಮಹಿಳೆಯರ ಪ್ರಗತಿಯನ್ನು ಸಾಧಿಸಬೇಕಾದರೆ, ಅವರು ರಾಷ್ಟ್ರದ ಎಲ್ಲಾ ರಾಜ್ಯಗಳನ್ನೂ ತಿರುಗಬೇಕಾಗುತ್ತದೆ, ರಾಜಸ್ಥಾನದಿಂದ ಕೇರಳದ ತನಕ ಎಲ್ಲಾ ರಾಜ್ಯಗಳನ್ನೂ ಸುತ್ತಬೇಕಾಗುತ್ತದೆ ಮತ್ತು ಬಹಳ ಜನರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಆಯ-ವ್ಯಯದಲ್ಲಿ ಇದಕ್ಕಾಗಿ 46ಲಕ್ಷ ರೂಪಾಯಿಗಳನ್ನು ಏನು ಮಂಜೂರು ಮಾಡಿದ್ದೀರಿ, ಇದರಿಂದ ಮಹಿಳೆಯರ ಏಳಿಗೆ ಖಂಡಿತಾ ಸಾಧ್ಯವಿಲ್ಲ. ಈ ಆಯೋಗದ ಉದ್ದೇಶ ನೆರವೇರಲು ಯಾವ ರೀತಿಯ ಕಾರ್ಯಕ್ರಮಗಳಾಗಬೇಕೆಂದು ಹೇಳಿದ್ದೇವೆ. ಇದರಲ್ಲಿ ಸರ್ಕಾರದ ಕೈವಾಡ ಅಷ್ಟು ಕಡಿಮೆ ಇರಬೇಕು. ಹೆಚ್ಚಿನ ಅಧಿಕಾರ, ಸ್ವಾತಂತ್ರ್ಯ ಮತ್ತು ತಮ್ಮದೇ ಆದಂಥ ತೀರ್ಮಾನ ತೆಗೆದುಕೊಳ್ಳುವ ಒಂದು ಶಕ್ತಿಯನ್ನು ಅವರಿಗೆ ಕೊಟ್ಟು ಹೇಳಿರುವ ಉದ್ದೇಶಗಳನ್ನು ನಿಜವಾಗಿ ಸಾಧಿಸಿ ಕೀರ್ತಿ ಪಡೆಯಬೇಕು ಹಾಗೂ ಸಾಧ್ಯವಾದಷ್ಟು ಶೀಘ್ರವಾಗಿ ಇದಕ್ಕೆ ತಕ್ಕದಾದ ತಿದ್ದುಪಡಿ ತಂದು ಸದರಿ ವಿಧೇಯಕವನ್ನು ಅಂಗೀಕರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

* ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ನಾನು ಈಗ ಮಹಿಳೆಯರ ಬಗ್ಗೆ ಮಾತನಾಡುತ್ತಿದ್ದೇನೆ. ಬಂಗಾರಪ್ಪನವರು ಮುನಿಸಿಕೊಂಡು ಹೊರಗೆ ಕುಳಿತುಕೊಂಡರೆ ಹೇಗೆ? ಅಷ್ಟೊತ್ತಿನಿಂದ ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕದ ಬಗ್ಗೆ ಚರ್ಚೆ ನಡೆಯುತ್ತಿದ್ದರೂ ಬಂಗಾರಪ್ಪನವರು ಸದನಕ್ಕೆ ಬರಲಿಲ್ಲ. ಮಹಿಳೆಯರ ಬಗ್ಗೆ ಚರ್ಚೆ ನಡೆಯುತ್ತಿದೆ, ಬಹಳ ಬೇಗ ಬನ್ನಿ ಎಂದು ಹೇಳಿದೆ, ವೀರಪ್ಪಮೊಯಿಲಿಯವರೂ ಸಹ ಹೊರಗಡೆ ಕುಳಿತಿದ್ದರು, ಇದು ಸರಿಯಲ್ಲ. ಈ ತರಹದ ವಿಧೇಯಕದ ಬಗ್ಗೆ ಚರ್ಚೆಯಾಗುತ್ತಿರುವಾಗ ಮಾಜಿ ಮುಖ್ಯಮಂತ್ರಿಗಳಾದ ತಾವುಗಳು ಚರ್ಚೆಯಲ್ಲಿ ಭಾಗವಹಿಸದಿರುವುದು ಅತ್ಯಂತ ಅನ್ಯಾಯವೆಸಗಿದಂತಾಗುತ್ತದೆಂದು ಈ ಸದನದಲ್ಲಿ ನಾನು ಹೇಳಬೇಕಾಗುತ್ತದೆ, ಇದನ್ನು ಅನ್ಯಥಾ ಭಾವಿಸಬಾರದು. ಮಾನ್ಯ ಉಪಾಧ್ಯಕ್ಷರೆ, ರಾಜ್ಯ ಮಹಿಳಾ ಆಯೋಗ ವಿಧೇಯಕವನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಮಂತ್ರಿಗಳು ತಂದಿರುವುದು ಅತ್ಯಂತ ಸಂತೋಷ ಮತ್ತು ಸ್ವಾಗತಾರ್ಹವಾದುದು. ವಿಧೇಯಕದಲ್ಲಿ ಉದ್ದೇಶಗಳೆಂದು

ತಿಳಿಸಿದ್ದಾರೆ, ಉದ್ದೇಶಗಳೇನು? ನಮಗಿನ್ನೂ ಅರ್ಥವಾಗುತ್ತಿಲ್ಲ. ಉದ್ದೇಶಗಳು, ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳಿಗೆ ಎನ್ನುವುದು ಮತ್ತು ಮಹಿಳಾ ಆಯೋಗ ಅಧಿನಿಯಮ 90 ಎಂದು ಹೇಳಿ ಮುಗಿಸಿದ್ದಾರೆ. ಉದ್ದೇಶ ಮತ್ತು ಕಾರ್ಯಗಳ ವಿವರಣೆ ಸರಿಯಾಗಿಲ್ಲ. ಯಾವ ಉದ್ದೇಶದ ಸಾಧನೆಗೋಸ್ಕರ ಇದನ್ನು ತರುತ್ತಿದ್ದೀರಿ? ಕಾರಣಗಳೇನು ? ಎನ್ನುವುದನ್ನು ವಿಧೇಯಕದಲ್ಲಿ ನೀವು ಸ್ಪಷ್ಟಪಡಿಸಬೇಕಾಗಿತ್ತು. ಆಯೋಗದ ರಚನೆಯಿಂದ ಏನೇನು ಮಾಡುತ್ತೀರಿ? ಮಹಿಳೆಯರ ಮೇಲಾಗುವ ಯಾವುದರ ಬಗ್ಗೆ ಆಯೋಗ ರಚಿಸಲಾಗುತ್ತದೆಂದು ಹೇಳಲಿಲ್ಲ. ಆದುದರಿಂದ, ನನಗನಿಸುತ್ತದೆ : ಆಯೋಗದ ಬಗ್ಗೆ ತಾವು ಸ್ಪಷ್ಟವಾದ ಚಿತ್ರಣ ಕೊಟ್ಟಿಲ್ಲ. ಆದರೂ ಸಹ ತಾವು ತಂದಿರುವ ವಿಧೇಯಕವನ್ನು ನಾವು ಸ್ವಾಗತಿಸುತ್ತೇವೆ. ನನ್ನ ಮನಸ್ಸಿನಲ್ಲಿರುವುದೇನೆಂದರೆ, ಸಂಪೂರ್ಣವಾಗಿ ಮಹಿಳೆಯರ ಕಲ್ಯಾಣಕ್ಕಾಗಿ ಮುಡಿಪಾಗಿರುವ ವಿಧೇಯಕ ಇದಾಗಿರುವುದರಿಂದ ಇನ್ನು ಸ್ವಲ್ಪ ಹೆಚ್ಚಿನ ವಿಶಾಲ ಮನೋಭಾವನೆಯಿಟ್ಟುಕೊಂಡು ತಾವು ಅನೇಕ ಮಹಿಳಾ ಸಂಘಗಳ ಮಹಿಳಾ ಮುಖಂಡರುಗಳನ್ನು ಕರೆದು, ಒಟ್ಟಾಗಿ ಕಲೆತು, ಸಮಾಜದಲ್ಲಿ ಮಹಿಳೆ ಏನೇನು ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆಂಬುದರ ಬಗ್ಗೆ ಯಾವ ರೀತಿ ಅಂಶಗಳನ್ನು ಅಳವಡಿಸಬೇಕಾಗಿತ್ತೋ, ಅದನ್ನು ಹೆಚ್ಚಿನ ರೀತಿಯಲ್ಲಿ ಅಳವಡಿಸುವುದಕ್ಕೆ ಅವಕಾಶವಿತ್ತು. ಈ ಸಂದರ್ಭದಲ್ಲಿ ನಾನು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಎಂದು ಹೇಳುವುದಿಲ್ಲ. ಅಲ್ಲಿಗೆ ಕಳುಹಿಸಿದರೆ ಮತ್ತೆ ವಾಪಾಸ್ ಬರುವುದು ನಿಧಾನವಾಗುತ್ತದೆ ಹಾಗೂ ಇದು ಮುಂದಕ್ಕೆ ಹೋಯಿತಲ್ಲ ಎನ್ನುವ ಭಾವನೆಯೂ ಬರುತ್ತದಾದ್ದರಿಂದ, ಅದಕ್ಕೆ ಹೋಗದಿದ್ದರೂ ಇನ್ನು ಮುಂದೆಯಾದರೂ ಸದರಿ ವಿಧೇಯಕಕ್ಕೆ ಅನೇಕ ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಸಾಮಾನ್ಯವಾಗಿ ಇಂತಹ ಮಸೂದೆಗಳು ಸದನದ ಮುಂದೆ ಬರಬೇಕಾದರೆ ಮೊದಲು ವಿಷಯ ಸಮಿತಿ ಮುಂದೆ ಬಂದು ಅಲ್ಲಿ ಅದರ ಬಗ್ಗೆ ಚರ್ಚೆಯಾದ ಬಳಿಕ ಸದನದ ಮುಂದೆ ತರಬೇಕು. ಆದರೆ, ವಿಷಯ ಸಮಿತಿಗಳು ಇನ್ನೂ ರಚನೆಯಾಗದಿರುವುದರಿಂದ ವಿಧೇಯಕ ಇಲ್ಲಿ ಬಂದಿದೆ.

5.40 ಪಿ.ಎಂ

ಶ್ರೀ ವಾಟಾಳ್ ಮುಂದು..

ಮುಂದಾದರೂ ಸಹ ಇದಕ್ಕೆ ಹೆಚ್ಚಿನ ಶಕ್ತಿ ಬರುವ ರೀತಿಯಲ್ಲಿ ತಾವು ಅನೇಕ ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಮತ್ತು ಯಾವ್ಯಾವ ದೃಷ್ಟಿಯಿಂದ ಈ ಆಯೋಗವನ್ನು ಮಾಡುತ್ತಿದ್ದೇವೆ, ಇದರಿಂದ ಮಹಿಳೆಯರಿಗೆ ಎಷ್ಟು ಅನುಕೂಲತೆಗಳನ್ನು ಮಾಡಬಹುದು ಎನ್ನುವ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ತಾವು ನೀಡಬೇಕು. ಮತ್ತೆ ಇದರಲ್ಲಿ ಒಂದು ಕಡೆ 'ರಿಕ್ತತೆ ಮತ್ತು ಇತ್ಯಾದಿಗಳು ಆಯೋಗದ ವ್ಯವಹಾರಗಳನ್ನು ಅನುರ್ಜಿತಗೊಳಿಸತಕ್ಕದಲ್ಲವೆಂದು ಇದೆ', ರಿಕ್ತದೆ ಎಂದರೆ ಏನು? ಅದು ಈ ಮಸೂದೆಯಲ್ಲಿದೆ. ಇದು ನನಗೆ ಅರ್ಥವಾಗುತ್ತಿಲ್ಲ, ಇದು ಕನ್ನಡ ಪದವೆ? ಇದನ್ನಾರು ತರ್ಜಿಮೆ ಮಾಡಿದರು?

ಶ್ರೀ ಎಂ.ಸಿ.ನಾಣಯ್ಯ : ರಿಕ್ತತೆ ಎಂದರೆ ಖಾಲಿ ಜಾಗ. ಯಾವುದಾದರೂ ಹುದ್ದೆ ಖಾಲಿ ಬಿದ್ದರೆ ಅದನ್ನು ರಿಕ್ತತೆ ಎಂದು ಹೇಳುತ್ತಾರೆ. ನೀವು ಅಂದು ಆರಕ್ಷಕ ಎನ್ನುವುದನ್ನು ತೆಗೆದು ಪೋಲೀಸ್ ಪದವನ್ನು ಹಾಕಬೇಕೆಂದು ಹೇಳಿದ್ದಿರಲ್ಲ, ಅದಕ್ಕೆ ವೇಕೆನ್ಸಿ ಎಂದು ಇಂಗ್ಲೀಷ್ ಪದ ಬಂದು ಬಿಟ್ಟಿದ್ದೆಯಲ್ಲ. ಅದಕ್ಕಾಗಿ ರಿಕ್ತತೆ ಎನ್ನುವ ಪದವನ್ನು ಹಾಕಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಉದ್ಯೋಗ ಎನ್ನುವ ಪದ ಇಲ್ಲವೆ? ಅಧ್ಯಕ್ಷರೇ ತಮಗೆ ಈ ಪದ ಅರ್ಥವಾಯಿತೋ ಇಲ್ಲವೋ ಗೊತ್ತಿಲ್ಲ. ರಿಕ್ತತೆ ಎಂದು ಏಕೆ ಹೇಳಬೇಕು? ಯರೋ ಮಹಾ-ಪಂಡಿತರು ಕುಳಿತುಕೊಂಡು ಇದನ್ನು ತರ್ಜಿಮೆ ಮಾಡಿಬಿಡುತ್ತಾರೆ, ಅದರ ಅರ್ಥವನ್ನು ನಾವು ತಿಳಿದುಕೊಳ್ಳಲು ಪುನಃ ಬೇರೆ ಪಂಡಿತರ ಹತ್ತಿರ ಹೋಗಬೇಕಾಗುತ್ತದೆ. ಮಾನ್ಯ ಸಚಿವೆಯರಾದ ಲಲಿತಾನಾಯಕ್‌ರವರಿಗೆ ಇದು ಅರ್ಥವಾಯಿತೋ ಇಲ್ಲವೋ ಗೊತ್ತಿಲ್ಲ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಇಂಗ್ಲೀಷ್‌ನಲ್ಲಿ ಆಲೋಚನೆ ಮಾಡಿ ಕನ್ನಡದಲ್ಲಿ ಬರೆದಾಗ ಕೆಲವುಸಾರಿ ಈ ರೀತಿಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಮಸೂದೆಯನ್ನು ಮಾಡುವಾಗ ಮತ್ತು ಇಲ್ಲಿ ಮಸೂದೆಗೆ ಎಲ್ಲರ ಕೈಯಿಂದ ಒಪ್ಪಿಗೆಯನ್ನು ಪಡೆದುಕೊಂಡು ಹೋದಮೇಲೆ ನಾಳೆ ದಿವಸ ರಿಕ್ತತೆ ಎಂದರೆ ಏನು ಎಂದರೆ ಏನು ಮಾಡುವುದು?

ಶ್ರೀಮತಿ ಬಿ.ಟಿ.ಲಲಿತಾನಾಯಕ್ : ರಿಕ್ತತೆ ಎನ್ನತಕ್ಕ ಪದವಿದೆ. ಅದೇನು ಹೊರಗಿನದ್ದಲ್ಲ, ಆದರೆ ಇಷ್ಟು ಈ ಪದದ ಬಳಕೆ ಬೇಕಾಗಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಹುಟ್ಟಿ ಬಹಳ ದಿವಸಗಳಾಗಿದೆ, ಈ ಪದವನ್ನು ನಾನು ಕೇಳಿಯೇ ಇಲ್ಲ. ಮತ್ತು ನಾನು ಕನ್ನಡದ ಬಗ್ಗೆ ಊರಿನಲ್ಲಿ, ಹಾದಿ, ಬೀದಿಗಳಲ್ಲಿ ರಾಜ್ಯ ಎಲ್ಲಾ ಕಡೆ ಕೂಗಾಡಿ ಓಡಾಡಿದ್ದೇನೆ, ಓದಿದ್ದೇನೆ ಆದರೆ ಇಂಥ ಪದವನ್ನು ಕೇಳಿರಲಿಲ್ಲ. ನೀವು ಇಂಥ ಪದಗಳನ್ನು ಹಾಕಿ ಮಸೂದೆಯನ್ನು ಹಾಕಿ ಮಸೂದೆಯನ್ನು ಇಲ್ಲಿ ಮಕ್ಕಿಕಾ ಮಕ್ಕಿ ಮಸೂದೆಯ ಹೌದು ಎನ್ನುವವರ ಪರವಾಗಿದೆ ಎಂದು ಹೇಳುತ್ತೀರಿ ಅದಕ್ಕೆ ಹೌದು ಎನ್ನುವವರು ಇಲ್ಲಿ ಕುಳಿತಿರುತ್ತಾರೆ, ಯಾರಿಗೆ ರಿಕ್ತತೆ ಎನ್ನುವುದರ ಅರ್ಥ ಗೊತ್ತಿರುವುದಿಲ್ಲ ಅವರು ಹೌದು, ಹೌದು ಎಂದು ಒಪ್ಪಿಗೆ ನೀಡುತ್ತಾರೆ. ಹಂದ ಖಂಡವಾಗಿ ಮತಕ್ಕೆ ಹಾಕುತ್ತೇನೆಂದರೆ ಮಕ್ಕಿಕಾ ಮಕ್ಕಿ ಹೌದು, ಹೌದು ಎಂದರೆ ಹೇಗೆ ಹಾಗಾದರೆ ರಿಕ್ತತೆ ಎಂದರೆ ಏನು? ತಾವಾದರೂ ಸಹ ನಮಗೆ ಇದರ ಬಗ್ಗೆ ಜ್ಞಾನೋದಯ ಮಾಡಬೇಕು. ಪತ್ರಕರ್ತರಿಗೆ ಅರ್ಥವಾಯಿತೋ ಗೊತ್ತಿಲ್ಲ.

ಉಪಾಧ್ಯಕ್ಷರು : ಇನ್ನು ಮೇಲೆ ತರತಕ್ಕ ಯಾವುದೇ ಮಸೂದೆಯಲ್ಲಿ, ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ, ರೀತಿಯಲ್ಲಿ ತರಬೇಕು.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಸಚಿವರ ಪಾತ್ರ ಹೆಚ್ಚು, ಅವರು ಅದನ್ನು ಮಾಡಬೇಕು, ಈ ರೀತಿಯಾದ ಮಸೂದೆಯನ್ನು ತರುವಾಗ ಜನಸಾಮಾನ್ಯರಿಗೆ ಅರ್ಥವಾಗತಕ್ಕ ಭಾಷೆಯಲ್ಲಿ ಜನಸಾಮಾನ್ಯರ ಅಡು ಭಾಷೆಯನ್ನು ಇದರಲ್ಲಿ ಸೇರಿಸಿ ತರಬೇಕು. ಇದರಲ್ಲಿ ತಾವೇನು ಹೊಸದಾಗಿ ಮಾಡಬೇಕಾಗಿಲ್ಲ. ಕೆಲವು ಸಮಯದಲ್ಲಿ ತೀರಾ ಮಡಿವಂತಿಕೆಯನ್ನು ಮಾಡುವ ಬಗ್ಗೆ ನಾವ್ಯಾರು ಒಪ್ಪುವುದಿಲ್ಲ. ಕೆಲವು ಇಂಗ್ಲಿಷ್ ಪದಗಳು ಜನಸಾಮಾನ್ಯರಲ್ಲಿ ಬಳಕೆಯಾಗಿಬಿಟ್ಟಿದೆ. ಜನಸಾಮಾನ್ಯರ ಆಡುಭಾಷೆಯಲ್ಲಿ ಬಳಕೆಯಾಗಿರುವ ಪದಗಳನ್ನು ಸೇರಿಸುವುದರಲ್ಲಿ ಏನೋ ಇಂಗ್ಲಿಷ್ ಪದವನ್ನು ಸೇರಿಸಿಬಿಟ್ಟಿದ್ದೇವಲ್ಲ ಇನ್ನು ಮಡಿವಂತಿಕೆಯೇನು ಎನ್ನತಕ್ಕ ಭಾವನೆ ಬರಬೇಕಾಗಿಲ್ಲ. ಜನ ಸಾಮಾನ್ಯರು, ಹಳ್ಳಿಯ ಜನರು ಮಾತನಾಡತಕ್ಕ ಪದಗಳನ್ನು ಹಾಕಬೇಕು, ಹಳ್ಳಿಗಳಲ್ಲಿ ಆದುದರಿಂದ ಜನಸಾಮಾನ್ಯರು ಬಳಸತಕ್ಕ ಪದಗಳನ್ನು ತರ್ಜಿಮೆ ಮಾಡಿ ಹಾಕುವ ವ್ಯವಸ್ಥೆ ಮಾಡಬೇಕು. ಈ ಮಹಿಳೆಯರ ಆಯೋಗದ ಅಧ್ಯಕ್ಷರನ್ನಾಗಿ ಹೆಚ್.ಎನ್ ನಂಜೇಗೌಡರನ್ನು ಸೇರಿಸಬೇಕೆಂದು ನಾಗೇಗೌಡರು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್.ನಾಗೇಗೌಡ : ನಾನು ಅದನ್ನು ಹೇಳಲಿಲ್ಲ. ಅದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಮಹಿಳೆಯರ ಆಯೋಗಕ್ಕೆ ಮಹಿಳೆಯರೆ ಅಧ್ಯಕ್ಷರಾಗಿರಬೇಕೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ನೀವೇ ಆಗಿ. ನಿಮ್ಮ ಪ್ರಶ್ನೆ ಏನಿದು? ಆ ಆಯೋಗವನ್ನು ಮಾಡಲೆ ಬೇಡಿ, ಸುಮ್ಮನೆ ತೆಗೆದುಬಿಡಿ,

ಶ್ರೀ ವಾಟಾಳ್ ನಾಗರಾಜ್ : ನಾನು ಅದು ಬೇಡವೆಂದು ಹೇಳುವುದಕ್ಕೆ ಹೋಗಿಲ್ಲ. ನೀವು ಅದರ ಅಧ್ಯಕ್ಷರಾಗಬೇಕೆಂದು ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀಮತಿ ಪ್ರಮೀಳಾನೇಸರ್ಗಿ : ಮಹಿಳೆಯರು ಬೇಡ, ಮಕ್ಕಳು ಬೇಡ ಎಲ್ಲವನ್ನು ನೀವೇ ಇಟ್ಟುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನೀವು ದೂರದಲ್ಲಿ ಕುಳಿತಿದ್ದೀರಿ ಆ ರೀತಿ ಹೇಳಿದವರು ನಾಗೇಗೌಡರು.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾಗೇಗೌಡರು ಹೇಳಿದ್ದುದು ಬೇರೆ. ಆದರೆ ನೀವು ಹೇಳಿದ್ದುದು ಬೇರೆ. ಇಬ್ಬರು ಹೇಳಿದ್ದ ಮಾತಿನಲ್ಲಿ ವ್ಯಂಗ್ಯದಿಂದ ತುಂಬಿ ತುಳುಕುತ್ತಿತ್ತು ಎಂದು ದುಃಖದಿಂದ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ನನ್ನನ್ನು ವ್ಯಂಗ್ಯವಾಡಿ ಮಾತನಾಡಿದ್ದೇನೆಂದು ಹೇಳಿದ್ದೀರಿ, ಚರ್ಚೆ ಮಾಡುವಾಗ ಸಾಮರಸ್ಯವಿರಬೇಕು, ತಾವು ಕೋಪಿಸಿಕೊಂಡರೆ ಹೇಗೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಕೋಪಿಸಿಕೊಳ್ಳಲಿಲ್ಲ. ಕೋಪ ತಾಪಗಳೆಲ್ಲ ದವಡೆಗೆ ಮೂಲವೆಂದು ನನಗೆ ಚೆನ್ನಾಗಿ ಗೊತ್ತಿದೆ. ಆದರೆ ಸ್ವಲ್ಪ thus far and no further ಎಲ್ಲಿಯವರೆಗೆ ಹೋಗಬೇಕೋ ಅಲ್ಲಿಯವರೆಗೆ

ಹೋಗಬಹುದು ಹಾಸ್ಯಬೇಕು, ಆದರೆ ಆ ಮಿತಿಯನ್ನು ದಾಟಿದಾಗ ಸ್ವಲ್ಪ ದುಃಖವಾಗುತ್ತದೆ.

ಉಪಾಧ್ಯಕ್ಷರು : ಮಾನ್ಯ ನಾಗರಾಜ್‌ರವರೆ ಮಸೂದೆಗೆ ಸಂಬಂಧಪಟ್ಟಂತೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಮಸೂದೆಯ ಬಗ್ಗೆಯೇ ಮಾತನಾಡುತ್ತಿರುವುದು, ಮಹಿಳೆಯರ ಹೆಸರನ್ನು ಇಲ್ಲಿ ಎತ್ತಬಾರದೆ? ಈ ಮಸೂದೆಯ ಬಗ್ಗೆ ಮಹಿಳೆಯರ ವಿಚಾರ ಮಾತನಾಡಬೇಡಿ ಎಂದು ತಾವು ಹೇಳಿಬಿಡಿ, ನಾನು ಮಾತನಾಡುವುದಿಲ್ಲ. ಮಹಿಳೆಯರ ಬಗ್ಗೆ ಹೇಳಿದರೆ ಅವರು ಕೋಪ ಮಾಡಿಕೊಳ್ಳುತ್ತಾರೆ, ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ, ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಏನು ಪ್ರಮೀಳಾರವರನ್ನು ಇದಕ್ಕೆ ಅಧ್ಯಕ್ಷರನ್ನಾಗಿ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟರೊ ಅದಕ್ಕೆ ಇಡೀ ಸದನ ಸಂಪೂರ್ಣವಾಗಿ ನಾನೂ ಸೇರಿದಂತೆ ಬೆಂಬಲ ಕೊಡುತ್ತೇವೆ ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿ. ಅವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ, ಅವರು ದಕ್ಷರು, ಕೆಲಸವನ್ನು ಚೆನ್ನಾಗಿ ಮಾಡಬಲ್ಲರು, ಮತ್ತು ಇದರ ಬಗ್ಗೆ ಆಳವಾದ ಅಭ್ಯಾಸ ಮಾಡಿದ್ದಾರೆ, ಅವರು ಅದಕ್ಕೆ ಸೂಕ್ತವಾದಂಥ ವ್ಯಕ್ತಿಯೆಂದು ಅಂದು ಕೊಂಡಿದ್ದೇನೆ, ಮಾನ್ಯ ಸಚಿವೆಯರು ಅವರಿಗೆ ಸಂಪೂರ್ಣವಾದ ಬೆಂಬಲವನ್ನು ಕೊಡಬೇಕು. ದೇಶದಲ್ಲೆಲ್ಲಾ ಹುಡುಕುವ ಬದಲು ನಮ್ಮಲ್ಲೆ ಶಕ್ತಿಯುತವಾಗಿರತಕ್ಕ ಮಹಿಳೆ ಇರುವಾಗ ಅವರು ಬಿಜೆಪಿಯಲ್ಲಿ ಇದ್ದರೂ ಸಹ ಚಿಂತೆ ಇಲ್ಲ, ರಾಜಕೀಯವಾಗಿ ಬೇರೆಯವರನ್ನು ತರಲು ಹೋಗಬೇಡಿ, ಅವರು ಮಹಿಳೆಯರ ಪರವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ, ಅವರನ್ನು ಅಧ್ಯಕ್ಷರನ್ನಾಗಿ ಮಾಡುವಲ್ಲಿ ನನ್ನದೇನು ಅಭ್ಯಂತರವಿಲ್ಲ. ವಿರೋಧ ಪಕ್ಷದಲ್ಲಿರುವವರನ್ನು ಅಧ್ಯಕ್ಷರನ್ನಾಗಿ ಮಾಡಬಾರದೆಂದು ಅವರಲ್ಲಿ ಭಾವನೆ ಇದ್ದರೆ, ಆಗ ಪಕ್ಷ ರಾಜಕೀಯ ಎನ್ನತಕ್ಕ ವ್ಯತ್ಯಾಸ ಮಾಡದೆ ಬಿಜೆಪಿ ಯಲ್ಲಿರುವ ಇವರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಪ್ರಾರ್ಥನೆ. ಇಲ್ಲಿ ಏಕೆ ತಿದ್ದುಪಡಿಯನ್ನು ತರಬೇಕೆಂದು ಹೇಳಿದೆ ಎಂದರೆ, ಸಾಮಾಜಿಕ ಬದಲಾವಣೆ, ಕಂದಾಚಾರಗಳು ಮತ್ತು ಮೂಡನಂಬಿಕೆಗಳು ಮತ್ತು ಮಹಿಳೆಯರ ಬಗ್ಗೆ ನಡೆಯುತ್ತಿರತಕ್ಕಂಥ ದೌರ್ಜನ್ಯ,ಧಬ್ಬಾಳಿಕೆಯನ್ನು ನಿಲ್ಲಿಸತಕ್ಕ ಕಾರ್ಯವೇನು ಎನ್ನುವ ಬಗ್ಗೆ ನನ್ನ ಪ್ರಕಾರ ವಿವರಣೆಯನ್ನು ಕೊಡಬೇಕಾಗಿತ್ತು. ಮಹಿಳೆಯರ ಮೇಲೆ ನಾನಾ ರೀತಿಯ ಧಬಾಳಿಕೆಗಳು ನಡೆಯುತ್ತದೆ. ಇದನ್ನು ನಿಲ್ಲಿಸತಕ್ಕ ವ್ಯವಸ್ಥೆಗೆ ಯಾವ ರೀತಿಯಲ್ಲಿ ಪರಿಣಾಮಕಾರಿಯಾವ ಕ್ರಮಗಳನ್ನು ಹಾಕಿಕೊಳ್ಳಬೇಕು ಎಂಬ ಬಗ್ಗೆ ಹೇಳಬೇಕು. ಆನಂತರ ಮೂಢ ನಂಬಿಕೆಯ ಬಗ್ಗೆ ಹೇಳುವುದಾದರೆ ಅದನ್ನು ಮೂಡ ನಂಬಿಕೆ ಎಂದು ಹೇಳುತ್ತೀರೋ ಅಥವಾ ಧಾರ್ಮಿಕ ಚಿಂತನೆ ಎಂದು ಹೇಳುತ್ತಿರೋ ನನಗೆ ಇನ್ನು ಅರ್ಥವಾಗಿಲ್ಲ. ಈವತ್ತು ಸಹ ನಮ್ಮ ಮುಂದುವರೆದಂಥ ರಾಷ್ಟ್ರದಲ್ಲಿ, ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯಾದ ವರ್ಗದ ಜನರಲ್ಲಿ

ಬೇರೆ ಬೇರೆ ರೀತಿಯಾದ ಧಾರ್ಮಿಕ ವಿಧಿಗಳು ಇದೆ. ತಮಗೆ ಗೊತ್ತಿರುವಂತೆ, ಒಬ್ಬ ವಿಧವೆಯಾದಂಥ ಮಹಿಳೆ ವಿಧವೆಯಾದಳು ಎಂದರೆ ಅವಳು ಸಮಾಜಕ್ಕೆ ಬೇಡವಾದಂಥ ವಸ್ತು, ಈ ರೀತಿಯಾದ ಪರಿಸ್ಥಿತಿ ನಿರ್ಮಾಣವಾಗಿದೆ. ವಿಧವೆಯಾದ ತಕ್ಷಣ ಅವರ ಮೇಲೆ ನಡೆಯತಕ್ಕ ಕೆಲವು ದೌರ್ಜನ್ಯವೇನಿದೆ, ಸಾಮಾಜಿಕ ಕಟ್ಟುಕಟ್ಟಲೆಗಳಿಂದ ವಿಧವೆಯರನ್ನು ಒಂದು ರೀತಿಯಲ್ಲಿ ಅಸ್ಪೃಶ್ಯರಾಗಿ ಮೂಲೆಗುಂಪು ಮಾಡುತ್ತೇವೆ. ಎರಡನೆಯದಾಗಿ ವಿಧವೆಯಾಗುವುದಕ್ಕಿಂತ ಮೊದಲು ಮಹಿಳೆ ತನ್ನ ಪತಿ ಇದ್ದಾಗ ಸುಂದರವಾಗಿ ಕುಂಕುಮವನ್ನಚ್ಚಿ, ಹೂವನ್ನು ಮುಡಿದುಕೊಂಡು, ಬಳೆಗಳನ್ನಾಕಿಕೊಂಡು ಇನ್ನು ಅನೇಕ ರೀತಿಯಲ್ಲಿ ನಾಡಿನ ಸಂಸ್ಕೃತಿಯನ್ನು ಬಿಂಬಿಸತಕ್ಕ ಮಹಿಳೆಯನ್ನ ವಿಧವೆಯಾದ ನಂತರ ಏನು ಮಾಡುತ್ತೇವೆ ಎನ್ನತಕ್ಕ ಪ್ರಶ್ನೆ ಇದೆ, ಅದರ ಬಗ್ಗೆ ಇವತ್ತು ಹೇಳಬೇಕು. ಆ ಪದ್ಧತಿ ಹೋಗಬೇಕು. ಈ ಸಮಾಜದಲ್ಲಿ ಬದಲಾವಣೆ ಆಗಬೇಕು ಧಾರ್ಮಿಕ ಮುಖಂಡರು ಧರ್ಮ ಪೀಠಾಧಿಕಾರಿಗಳು ಇದನ್ನು ಬೋಧನೆ ಮಾಡಬೇಕು. ಇದನ್ನು ಬೋಧನೆ ಮಾಡಿದರೆ ನನಗನ್ನಿಸುತ್ತದೆ ಅವರ ಒಂದು ಬೋಧನೆ ಆರ್ಶೀವಾದ ನಿಜವಾಗಿ ಫಲಿಸುತ್ತದೆ ಎನ್ನತಕ್ಕಂತಹ ಮಾತನ್ನು ತಮಗೆ ಹೇಳುತ್ತಿದ್ದೇನೆ. ಇವತ್ತು ಅಧ್ಯಕ್ಷರೆ, ಗಂಡ ತೀರಿ ಕೊಡಂತಹ 10 ದಿನಗಳಲ್ಲಿ ಒಬ್ಬ ಮಹಿಳೆಗೆ ಮಾಡತಕ್ಕಂತಹ ವಿಚಿತ್ರವಾದ ಆ ನರಕದ ಪರಿಸ್ಥಿತಿ ಯಾರಿಗೂ ಬೇಡ. ಇದು ಸಾಮಾಜಿಕ ಬದಲಾವಣೆ ಆಗಬೇಕು ಕುಂಕಮ ತೆಗೆಯಿರಿ ಎಂದು ಹೇಳುವುದು ಬಳೆಗಳನ್ನು ಹೊಡೆದು ಹಾಕುವುದು ಇದು ಆದಾಗ ಅವಳು ಪಡತಕ್ಕಂತಹ ನೋವಿನ ಪರಿಸ್ಥಿತಿ ಏನಿದೆ ಅದನ್ನು ಧಾರ್ಮಿಕ ಮುಖಂಡರು ಕ್ರಾಂತಿಕಾರಕವಾದ ರೀತಿಯಲ್ಲಿ ಬದಲಾವಣೆ ಮಾಡಬೇಕು. ಯಾವುದೋ ಓಬಿರಾಯನ ಕಾಲದ ಒಂದು ವಿಚಾರವನ್ನು ಮುಂದುವರಿಸುವುದರ ಬದಲು ಬದಲಾವಣೆ ಆಗಬೇಕು. ಬದಲಾವಣೆ ಆಗಲಿಲ್ಲ ಅಂದರೆ ಕಷ್ಟ. ಇದು ಇನ್ನು ಬಹಳ ಕ್ರೂರವಾಗಿ ಮಾತನಾಡುವುದಾದರೆ ಆ ಪರಿಸ್ಥಿತಿ ನರಕ. ನರಕಕ್ಕೆ ಅಂದರೆ ಗಂಡ ತೀರಿದ ನಂತರ ನರಕ. ನರಕ ಇದ್ದರೆ ನಾನು ಅದು ಇದೆಯೇ ಅಥವಾ ಇಲ್ಲವೇ ಎಂದು ವಾದ ಕೂಡ ಮಾಡುವುದಕ್ಕೆ ಹೋಗುವುದಿಲ್ಲ. ನರಕ ಎನ್ನತಕ್ಕಂಥಾದ್ದು ಹೇಳತಕ್ಕಂತಹ ಮಾತು. ಆ ಪರಿಸ್ಥಿತಿಗೆ ತಲುಪುತ್ತಾರೆ. ಇದನ್ನು ನಾನು ಮಹಿಳಾ ಸಚಿವರಾದ ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತೇನೆ. ಇಂತಹ ಆಯೋಗಗಳನ್ನು ನಾವು ಎಷ್ಟೇ ರಚನೆ ಮಾಡಿದರೂ ಮಹಿಳೆ ತನ್ನ ಸ್ವಾಂತಂತ್ರ್ಯವನ್ನು ವಿಧವೆಯಾದ ಮೇಲೆ ಸಂಪೂರ್ಣವಾಗಿ ಸಾಮಾಜಿಕ ಸ್ವಾತಂತ್ರ್ಯ ಹೊರಟು ಹೋಗುತ್ತದೆ. ಅವರನ್ನು ಯಾರೂ ಕರೆಯುವುದಿಲ್ಲ. ವಿಧಿ ವಿಲಾಸ ಗಂಡ ಹೋದ ನಂತರ ಮುತ್ತೈದೆ ಆಗುವುದಿಲ್ಲ, ಆಕೆ ಎಲ್ಲವನ್ನು ಒಂದೊಂದರಂತೆ ಕಡಿದು ಹಾಕಿ ಒಂದು ಮೂಲೆ ಗುಂಪಾಗಿ ಮಾಡಿ ಕೊನೆ ಉಸಿರು ಇರುವವರೆಗೂ ಚಿಂತೆಯಲ್ಲೇ ತನ್ನ ಸಾವನ್ನು ಜೆರಾಸುತ್ತದೆ. ಆ ಪರಿಸ್ಥಿತಿಯಲ್ಲಿ ಇವತ್ತು ಸಾಮಾಜಿಕ ನಾವು ನೋಡುತ್ತಿದ್ದೇವೆ. ಇದು ಬಹಳ ಬದಲಾವಣೆ ಆಗತಕ್ಕಂಥದ್ದನ್ನು ನಾವು ಧಾರ್ಮಿಕವಾಗಿ

ಎಲ್ಲರೂ ಸೇರಿ ಎಲ್ಲಾ ಧರ್ಮದ ಎಲ್ಲಾ ಜಾತಿಯ ಜನ ಸೇರಿ ಇಂತಹ ಬದಲಾವಣೆ ಆಗತಕ್ಕಂತಹ ವ್ಯವಸ್ಥೆ ಆಗಬೇಕು. ಅಂತಹ ಒಂದು ಕಾನೂನು ತರಲಿಕ್ಕೆ ಜನರ ಮನವೊಲಿಸಿ ತರತಕ್ಕಂತಹ ವ್ಯವಸ್ಥೆ ಆಗಬೇಕು ಆಗ ನನಗನ್ನಿಸುತ್ತದೆ ಅನೇಕ ಕಡೆ ಮಹಿಳಾ ಸ್ವಾತಂತ್ರ್ಯ ಇದೆ ಎಂದು ಎಲ್ಲಿದೆ ಮಹಿಳಾ ಸ್ವಾತಂತ್ರ್ಯ? ಖಂಡಿತ ಇಲ್ಲ. ಇದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ, ಅತ್ತೆ ಸೊಸೆ ಕಾಟ ತಮಗೆ ಗೊತ್ತಿದೆ. ನಿಮಗೆ ಗೊತ್ತಿದೆ ಅಂದರೆ ನೀವು ಅನುಭವಿಸಿದ್ದೀರಿ ಎಂದು ಅಲ್ಲ. ಸಾಮಾಜಿಕವಾಗಿ ತಿಳಿದುಕೊಂಡಿದ್ದೀರಿ, ಚೆನ್ನಾಗಿ ವಿಚಾರ ತಿಳಿದುಕೊಂಡಿದ್ದೀರಿ ಅನ್ನುವುದು ಪ್ರಶ್ನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನನಗೆ ಗೊತ್ತಿರುವುದು ಅತ್ತೆಗೆ ಒಂದು ಕಾಲ ಸೊಸೆಗೆ ಒಂದು ಕಾಲ ಎಂದು ಅದು ಬಿಟ್ಟರೆ ನನಗೆ ಹೆಚ್ಚಿಗೆ ಏನೂ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ಅಂತಹ ಕಾಟ ಕೊರತೆ ಇರತಕ್ಕಂತಹ ಸೊಸೆ ಸಿಗದೆ ಇರಲಿ. ಅಂದರೆ ಒಳ್ಳೆಯವರು ಸಿಗಲಿ ಎಂದು. ಆದ್ದರಿಂದ ಅಧ್ಯಕ್ಷರೆ, ಈ ತರಹ ಬದಲಾವಣೆ ಆಗತಕ್ಕಂಥಾದ್ದು ತಾವು ಒಂದು ಕ್ರಾಂತಿಕಾರವಾದ ಸಾಮಾಜಿಕ ಚಿಂತನೆ ಇರುವಂಥಾದ್ದು ನಿಮ್ಮ ಬಗ್ಗೆ ಬಹಳ ಅಪಾರವಾದ ಗೌರವವಿದೆ. ಆದರೆ ಈ ವಿಧೇಯಕ ನೋಡಿದಾಗ ಸುಮ್ಮನೆ ಒಂದು ನಾಲ್ಕು ಜನ ಅಧಿಕಾರಿಗಳನ್ನು ನೇಮಕ ಮಾಡುವುದು, ಯಾವ ರೀತಿ ಇರಬೇಕು, ಏನು ಮಾಡಬೇಕು, ಇದರ ಕಾರ್ಯಾಲಯ ಇದರ ವ್ಯವಸ್ಥೆ ಇಷ್ಟು ಬರುತ್ತದೆ ಹೊರತು ಸಾಮಾಜಿಕವಾಗಿ ಒಬ್ಬ ಮಹಿಳೆಗೆ ಆಗತಕ್ಕಂತಹ ಅನ್ಯಾಯದ ಬಗ್ಗೆ ಸರಿಪಡಿಸತಕ್ಕಂತಹ ವ್ಯವಸ್ಥೆ ಇಲ್ಲ. ಇವತ್ತು ನೀವು ಎಷ್ಟೇ ನ್ಯಾಯಾಲಯಗಳು ಎಷ್ಟೇ ನಿಮ್ಮ ಕಾನೂನುಗಳು ಇದ್ದರೂ ದೊಡ್ಡ ಕಾನೂನಿನ ಪುಸ್ತಕಗಳು ಇದ್ದರೂ ಸಹಿತ ವರದಕ್ಷಿಣೆ ಪಿಡುಗನ್ನು ತಪ್ಪಿಸುವುದಕ್ಕೆ ಇವತ್ತು ಸಾಧ್ಯವಾಗುತ್ತಿಲ್ಲ. ಇವತ್ತು ವರದಕ್ಷಿಣೆಯ ಪಿಡುಗಿನಿಂದ ಎಷ್ಟು ಜನ ಮಹಿಳೆಯರು ನರಕ ಯಾತನೆಯನ್ನು ಅನುಭವಿಸುತ್ತಿಲ್ಲ. ಇದು ಎಲ್ಲರಿಗೂ ಗೊತ್ತಿದೆ ಇವತ್ತು ವರದಕ್ಷಿಣೆಯ ಕಾಟ ನಿಂತಿದೆಯೇ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಇವತ್ತು ವರದಕ್ಷಿಣೆ ಪಿಡುಗು ಹೆಣ್ಣು ಮಕ್ಕಳಿಗೆ ಅಲ್ಲ. ಏನಾಗಿದೆ ಅಂದರೆ ರೋಮನ್ ಕಾಲದಲ್ಲಿ ಉಪಾಧ್ಯಕ್ಷರೇ, ವಸ್ತುಗಳ ರೂಪದಲ್ಲಿ ಮಾರಾಟಕ್ಕೆ ಇಟ್ಟುಕೊಳ್ಳುತ್ತಿದ್ದರು ಮನುಷ್ಯನನ್ನು. ಆ ರೀತಿ ಇವತ್ತು ಗಂಡು ಮಕ್ಕಳು ತಮ್ಮನ್ನು ತಾವು ಮಾರಾಟ ಮಾಡಿಕೊಂಡು They are reducing themselves to the level of chattels. ಅಂದರೆ ವಸ್ತುಗಳು ಆಗುತ್ತಿದೆ. ಅವರ ಬೆಲೆ ಏನಾಗಿದೆ ಅಂದರೆ ರೆಫ್ರಿಜರೇಟರ್, ಒಂದು ಕಾರ್, ದುಡ್ಡು ಆದರಿಂದ.....

ಉಪಾಧ್ಯಕ್ಷರು : ನಾವು ಚರ್ಚೆ ಮಾಡತಕ್ಕಂಥಾದ್ದು ಕಾನೂನಿನ ಬಗ್ಗೆ ಅದನ್ನು ಬಿಟ್ಟು ಯಾವ್ಯಾವುದೋ ಸಮಸ್ಯೆಗಳನ್ನು ತೆಗೆದುಕೊಂಡು ಚರ್ಚೆ ಮಾಡಿದರೆ ನಾಗರಾಜ್‌ರವರೇ ನಿಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಈ

ಮಸೂದೆಗೆ ಸಂಬಂಧಪಟ್ಟ ಸಲಹೆ ಇದ್ದರೆ ಕೊಡಿ, ಮಹಿಳೆಯರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದರೆ ಈ ಸದನ ಇವತ್ತು ಒಂದು ತಿಂಗಳಾದರೂ ಅದನ್ನೇ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನೀವು ಮಸೂದೆಗಳನ್ನು ತಂದು ಬಿಟ್ಟು ಹತ್ತತ್ತು ಒಟ್ಟಿಗೆ ಹಾಕಿಕೊಂಡು ಪಾಸ್ ಮಾಡಿ ಎಂದು ಹೇಳುತ್ತೀರಾ?

ಉಪ-ಸಭಾಧ್ಯಕ್ಷರು : ಏನು ಕಾನೂನಿನ ತಿದ್ದುಪಡಿ ಆಗಬೇಕಾಗಿದೆಯೇ ಅದರ ಬಗ್ಗೆ ಸಲಹೆ ಕೊಡಿ. ಸುಮ್ಮನೆ ಯಾವುದೋ ಒಂದು ಸಮಸ್ಯೆಗಳನ್ನು ಚರ್ಚೆ ಮಾಡಿಕೊಂಡು ಹೋದರೆ ಸರಿ ಹೋಗುವುದಿಲ್ಲ. ದಯವಿಟ್ಟು ಸಹಾಯ ಮಾಡಿ. ಒಂದೂವರೆ ಗಂಟೆ ಆಯಿತು.

ಶ್ರೀ ವಾಟಾಳ್ ನಾಗರಾಜ್ : ವಿಧೇಯಕಕ್ಕೆ ಸಂಬಂಧ ಪಟ್ಟಹಾಗೆ ಇರತಕ್ಕಂಥ ಸಮಸ್ಯೆಗಳು ಚರ್ಚೆಯಾಗಬೇಕು. ಆಗಲೇ ವಿಧೇಯಕ ಎನ್ನುವುದು. ತಾವೇ ಈ ತರಹ ಆದರೆ ಹೇಗೇ? ನಿಮಗೆ ಮಹಿಳೆಯರ ಬಗ್ಗೆ ಏನೋ ವಿರೋಧ ಇದೆ. ಅಂತ ಹೇಳಿ ನನ್ನ ಭಾಷಣ ಮುಗಿಸುತ್ತೇನೆ ಸ್ವಾಮಿ, ತೊಂದರೆಯಾಗುವ ಹಾಗಿದ್ದರೆ ನಾನು ಭಾಷಣ ಮುಗಿಸುತ್ತೇನೆ. ಹೆಜ್ಜೆ ಹೆಜ್ಜೆಗೂ ನಮಗೆ ಯಾವ್ಯಾವುದು ಮಾತನಾಡಬೇಕು, ಏನೇನು ಮಾತನಾಡಬಾರದು ಎಂದು ಹೇಳಿ. ಈ ಮಸೂದೆ ಬಗ್ಗೆ ಮಾತನಾಡುವಾಗ ನಾವು ಇಲ್ಲಿಯೇ ಇದು ಬಿಟ್ಟು ಅತ್ತಿತ್ತ ಅಲ್ಲಾಡಬಾರದು ಎಂದು ಹೇಳಿ.

ಉಪಾಧ್ಯಕ್ಷರು : ಈಗ ನಾನು ಏನು ಮಾಡಬೇಕೆಂದು ನನಗೆ ಹೇಳಿಕೊಟ್ಟರೆ ನಾನು ಅದನ್ನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಮಸೂದೆ ಪಾಸ್ ಮಾಡುವಾಗ ಆ ಮಸೂದೆಯ ಬಗ್ಗೆ ಚರ್ಚೆ ಮಾಡುವಾಗ ಈ ಮಹಿಳೆಯರಿಗೆ ಅನೇಕ ಸಾಮಾಜಿಕ ನ್ಯಾಯಗಳ ಬಗ್ಗೆ ಮಾತನಾಡಬೇಕಾಗುತ್ತದೆ. ಅನೇಕ ವಿಚಾರಗಳ ಬಗ್ಗೆ ಮಾತನಾಡಬೇಕಾಗುತ್ತದೆ. ಅದು ಏನೂ ಮಾತನಾಡಬೇಡಿ ನೀವು ಕುದುರೆಗೆ ಕಡಿವಾಣ ಹಾಕಿದ ಹಾಗೆ ಇಷ್ಟರಲ್ಲಿ ಹೋಗಬೇಕೆಂದರೆ ಅದು ಸಾಧ್ಯವಿಲ್ಲ.

ಉಪಾಧ್ಯಕ್ಷರು : ಯಾರು ಬೇಕಾಗಿದ್ದರೂ ಏನಾದರೂ ಮಾತನಾಡಿಕೊಳ್ಳಿ, ನನಗೆ ಕೇಳತಕ್ಕಂತಹ ಅಧಿಕಾರ ಇಲ್ಲ ಅಂದರೆ ಹೇಳಿ ಸುಮ್ಮನೆ ಕುಳಿತುಕೊಂಡು ಕೇಳುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಈ ಕಾಯಿದೆಯಲ್ಲಿ ನಿಜವಾಗಿಯೂ ಮಾನ್ಯ ಶಾಸಕರು ಏನು ಹೇಳಿದರು ಅದು ಸತ್ಯ ಇದೆ. ಏಕೆಂದರೆ ಕಾನೂನಿನಿಂದ ಯಾವ ಪರಿವರ್ತನೆ ಆಗುವುದಿಲ್ಲ ಮಾನಸಿಕವಾಗಿ ಯಾವತ್ತು ಪರಿವರ್ತನೆ ಆಗುತ್ತದೆಯೋ ಅವತ್ತಿನ ದಿವಸ ನಾವು ಏನಾದರೂ ಒಂದು ಸಾಧನೆ ಮಾಡುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಅವರು ಹೇಳಿದರು. ಮಹಿಳೆಯರಲ್ಲಿ ಮೂಢ ನಂಬಿಕೆಯಿಂದ ಗೊಡ್ಡು ಆಚಾರ ಸಂಪ್ರದಾಯದ ಬೇಟೆಯಿಂದ ಹೊರಗೆ ಬಂದಾಗ ಸಮಾನತೆ

ಬರುವುದಕ್ಕೆ ಸಾಧ್ಯವಿದೆ. ಆದ್ದರಿಂದ ಈ ಮಸೂದೆ ಮಾತಿನ ಉದ್ದೇಶ ಈ ಮೂಢ ನಂಬಿಕೆಯಿಂದ ಹೊರಗೆ ಬರಬೇಕು ಎನ್ನುವ ಮಾತನ್ನು ಅವರು ಏನು ಹೇಳಿದರು ಅದನ್ನು ನಿಜವಾಗಿ 100ಕ್ಕೆ 110 ಪರ್ಸೆಂಟ್ ಒಪ್ಪುತ್ತೇನೆ, ಅನ್ನುವ ಮಾತನ್ನು ಹೇಳುತ್ತಾ ಅವರು ಮುಂದೆ ಮಾತನಾಡಲಿ ತಾವು ಅನುಮತಿ ಕೊಡಬೇಕು.

* ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಸಭಾಧ್ಯಕ್ಷರೆ, ಈ ಆಯೋಗ ಬಹಳ ಗಂಭೀರವಾದ ಆಯೋಗ. ಈಗ ಸಂಸದೀಯ ವ್ಯವಹಾರಗಳ ಸಚಿವರು ಕೇಂದ್ರ ಸರ್ಕಾರದಲ್ಲಿ ಏನು ಒಂದು ಆಯೋಗ ಇದೆ ಅದೇ ರೀತಿಯಲ್ಲಿ ಇದನ್ನು ತಂದಿದ್ದರೆ. ಇದು ರಾಜ್ಯ ವ್ಯಾಪ್ತಿಯಲ್ಲಿ ಎಷ್ಟರ ಮಟ್ಟಿಗೆ ಜಾರಿಗೆ ಬರುತ್ತಿದೆ ಎಂದು ನಾವು ನೋಡಬೇಕಾಗಿದೆ. ಆದರೆ ಎಲ್ಲವೂ ಹಣವನ್ನು ದುರುಪಯೋಗ ಪಡಿಸಿಕೊಳ್ಳತಕ್ಕಂತಹ ಸಂಘಸಂಸ್ಥೆಗಳು ಆಗಿವೆ. ಯಾವುದೇ ಒಂದು ಆಯೋಗಕ್ಕೆ ಬಹಳ ಗಂಭೀರವಾದ ಕಲ್ಪನೆ ಇರಲೇಬೇಕು. ಒಂದು ಸಾರಿ ಜಪಾನ್‌ನಿಂದ ಕೆಲವು ಮಹಿಳೆಯರು ಬಂದಿದ್ದರು, ಭಾರತದ ಸಂಸ್ಕೃತಿಯ ಬಗ್ಗೆ ಬಹಳ ಕೀಳು ಮಟ್ಟದಲ್ಲಿ ಮಾತನಾಡಿದ್ದು ಎಲ್ಲಾ ಪೇಪರ್‌ನಲ್ಲಿ ಓದಿದ್ದೇನೆ. ನಿಮ್ಮಲ್ಲಿ ವರದಕ್ಷಿಣೆಗೋಸ್ಕರ ಹೆಣ್ಣು ಮಕ್ಕಳನ್ನು ಸುಡುವಂತಹ ಒಂದು ಕೀಳು ಪದ್ಧತಿಯನ್ನು ಬೆಳೆಸುತ್ತಿದ್ದೀರಿ ನಿಜವಾಗಿಯೂ ಇದು ಇಡೀ ಗಂಡಸರ ಕುಲಕ್ಕೂ ಅವಮಾನ. ಇಡೀ ಸಂಸ್ಕೃತಿಗೆ ಅವಮಾನ ಎಂದು ಹೇಳಿ ಒಂದು ಮಾತನ್ನು ಜಪಾನ್‌ನಿಂದ ಬಂದಿರತಕ್ಕಂತಹ ಮಹಿಳೆಯರು ಹೇಳಿದರು. ಆದರಿಂದ ದಯವಿಟ್ಟು ತಾವು ಗಭೀರವಾಗಿ ಆಲೋಚನೆ ಮಾಡಬೇಕು. ಈ ಆಯೋಗದ ಜೊತೆ ಕಾನೂನಿನ ಮೂಲಕ ಈ ಸಮಾಜದಲ್ಲಿ ಏನಾದರೂ ಮಹಿಳೆಯರಿಗೆ ಬದಲಾವಣೆ ಮಾಡುತ್ತೀರೆಂದು ತಿಳಿದುಕೊಂಡಿದ್ದರೆ ಅದು ಸಾಧ್ಯವಿಲ್ಲ. ಮಹಿಳಾ ಆಯೋಗಕ್ಕೆ ಒಂದು ಕಲ್ಪನೆ ಇರಬೇಕು. ಮಹಿಳೆಯನ್ನು ಮೂರು ಭಾಗವಾಗಿ ತಾವು ಆಲೋಚನೆ ಮಾಡಿ ನೋಡಬೇಕು. ಒಂದು ಪೂರ್ಣ ಬಡತನದ ರೇಖೆಯಲ್ಲಿ ಇರತಕ್ಕಂತಹ, ಕೂಲಿ ಮಾಡತಕ್ಕಂತಹ ಹೆಣ್ಣು ಮಕ್ಕಳು ಇನ್ನು ಒಂದು ಮಧ್ಯಮ ವರ್ಗದಲ್ಲಿ ಇರತಕ್ಕಂತಹ ಹೆಣ್ಣು ಮಕ್ಕಳು, ಮೂರನೆಯದು ಸೇಫೆಸ್ಟಿಕೇಟೆಡ್ ಸ್ವಲ್ಪ ಜ್ಞಾನ ಇರತಕ್ಕಂತಹ ಸ್ವಲ್ಪ ಶ್ರೀಮಂತ ಮಟ್ಟದ ಹೆಣ್ಣುಮಕ್ಕಳು ಮೂರು ಜನ ಹೆಣ್ಣುಮಕ್ಕಳ ಜೀವನದ ಸುಧಾರಣೆ ಬಗ್ಗೆ ಆಲೋಚನೆ ಮಾಡಬೇಕು. ಸುಮಾರು 14 ವರ್ಷಗಳ ಹಿಂದೆ ನಾನು ಏಷಿಯನ್ ಗೇಮ್ಸ್ ನೋಡುವುದಕ್ಕೆ ಪೂನಾಕೆ ಹೋದೆ. ಪೂನಾದಲ್ಲಿ ಒಬ್ಬ ಹುಡುಗ ಸಿಕ್ಕ ಅಲ್ಲಿ ಕೆಲವು ರೆಡ್‌ಲೈನ್ಸ್ ಸ್ಟ್ರೀಟ್ ಎಂದು ಹೇಳಿ ಮಹಿಳೆಯರನ್ನು ವೇಶ್ಯಾ ವಾಟಿಕೆಗೆ ಒಳಪಡಿಸುವ ಜಾಗ ಇರತಕ್ಕಂಥ ವಿಷಯದ ಬಗ್ಗೆ ನನ್ನ ಜೊತೆ ಮಾತನಾಡಿದ. ಇಡೀ ಕರ್ನಾಟಕದಲ್ಲಿ ಅಲ್ಲಿರತಕ್ಕಂತಹ ವೇಶ್ಯಾ ವಾಟಿಕೆಯ ಮಹಿಳೆಯರಲ್ಲಿ 100ಕ್ಕೆ 50 ಜನ ಕರ್ನಾಟಕದ ಮಕ್ಕಳು. ಹೀಗೆ ಇಂತಹ ತಾವು ದಯಮಾಡಿ ಈ ಕಲ್ಪನೆ ಇಟ್ಟುಕೊಳ್ಳಬೇಕು. ತಾವು ಮಹಿಳೆಯರ ಸಮಸ್ಯೆ ಅತ್ಯಂತ ಗಂಭೀರವಾದ ಸಮಸ್ಯೆ ಎಲ್ಲಾ ಜಾತಿಗಳಲ್ಲೂ, ಎಲ್ಲಾ ಧರ್ಮಗಳಲ್ಲೂ

ಮಹಿಳೆಯರಲ್ಲಿ ಒಂದು ಶೋಷಿತ ವರ್ಗಕ್ಕೆ ಸಂಬಂಧಪಟ್ಟವರು. ಕೇವಲ ಶೋಷಿತ ಅದು ಯಾವುದೇ ಧರ್ಮ ಆಗಬಹುದು, ಯಾವುದೇ ಜಾತಿ ಆಗಬಹುದು. ಕೇವಲ ಮೋಜಿಗೋಸ್ಕರ ಮಾತನಾಡತಕ್ಕಂತಹ ಒಂದು ಪರಿಸ್ಥಿತಿ ಆಗಬಾರದು. ಬಹಳ ಗಂಭೀರವಾದ ಪರಿಸ್ಥಿತಿ ಇದು ಕೇವಲ ಕಾನೂನು ಮಾಡಿದರೆ ಇದೆಲ್ಲಾ ಸದನದಲ್ಲಿ ಕಾನೂನು ಮಾಡಿದಿವಿ ನಾವು 250 ಜನರ ಮೇಲೆ ಮದುವೆಗೆ ಸೇರಬಾರದು ಎಂದು ಕಾನೂನು ಮಾಡಿಕೊಂಡಿದ್ದೇವೆ. ನಾವು ಮಂತ್ರಿಗಳು, ಮಹೋದಯರು ಎಲ್ಲಾ 10,15,20 ಸಾವಿರ ಜನ ಸೇರಿ ದೊಡ್ಡದಾಗಿ ಮದುವೆ ಮಾಡಿದ್ದೆವು. ಆ ಕಾನೂನು ಏನು ಅವರ ಮೇಲೆ ಪರಿಣಾಮ ಬೀರಲೇ ಇಲ್ಲ. ಕೇವಲ ಕಾನೂನು ಪುಸ್ತಕದಲ್ಲಿ ಇದ್ದರೆ ಪ್ರಯೋಜನವಾಗುವುದಿಲ್ಲ. ಇದರಿಂದ ಏನಾದರೂ ಪ್ರಯೋಜನವಾದರೆ ಮಾತ್ರ ಏನಾದರೂ ಅನುಕೂಲವಾಗುತ್ತದೆ. ಎಲ್ಲಾ ಗ್ರಾಮೀಣ ಪ್ರದೇಶದಲ್ಲಿ ಬಡತನದ ಬರಗಾಲದ ನೋವನ್ನು ತಡೆಯಲಾರದೆ ಹೋಗಿ, ಆರ್ಥಿಕ ಅಸಮಾನತೆಯ ಅನಾನೂಕೂಲವನ್ನು ಕಂಡು ಈ ವೇಶ್ಯಾವಾಟಿಕೆಗೆ ತಲುಪಿರತಕ್ಕಂಥ ವಿಚಾರವಾಗಿದೆ. ಇವತ್ತು ಬೇಕಾದರೆ ತಾವು ಹೋಗಿ ತಿಳಿದುಕೊಂಡು ಬರಬಹುದು. ಆಯೋಗ ಎನ್ನುವುದು ಬಹಳ ಗಂಭೀರವಾದ ವಿಷಯ. ಇಡೀ ಮಹಿಳೆಯರ ವಿಚಾರವನ್ನು ಚರ್ಚೆ ಮಾಡಿ ಅವರನ್ನು ಮೂಲಭೂತವಾಗಿ ಬದಲಾವಣೆ ಮಾಡತಕ್ಕಂಥ ವಿಚಾರವನ್ನು ತಾವು ಆಳವಾಗಿ ಗಂಭೀರವಾಗಿ ಯೋಚನೆ ಮಾಡಬೇಕು. ಇವತ್ತು ಇಡೀ ಮಹಿಳೆಯರು ಶೋಷಣೆಗೆ ಒಳಗಾಗಿರುವುದು ಯಾವುದರಿಂದ ಎಂದರೆ ಮಧ್ಯಪಾನದಿಂದ. ಮಧ್ಯಪಾವನ್ನು ತೆಗೆಯುತ್ತೀರಾ ನೀವು? ಇವತ್ತು ಅತ್ಯಂತ ಬಡತನದ ರೇಖೆಯ ಕೆಳಗೆ ಇರತಕ್ಕಂಥ ಎಲ್ಲಾ ಹೆಣ್ಣುಮಕ್ಕಳ ಜೀವನ ಅಸ್ತವ್ಯಸ್ತವಾಗಿರುವುದು ಮಧ್ಯಪಾನದಿಂದ. ಮಧ್ಯಪಾನವನ್ನು ಮಾಡಿ ಹೋದಂತಹ ವ್ಯಕ್ತಿ ಯಾವ ತರಹದ ಹಿಂಸೆ ಕೊಟ್ಟರೂ ಸಹಿಸಿಕೊಳ್ಳುತ್ತಾರೆ. ನಾನು ಯಾವುದೋ ಸಭೆಯಲ್ಲಿ ಮಾತನಾಡುತ್ತಾ ಇಂಗ್ಲೇಂಡ್‌ನಲ್ಲಿ ಒಬ್ಬ ಮಹಿಳೆ ತನ್ನ ಗಂಡನ ಹಿಂಸೆಯನ್ನು ತಾಳಲಾರದೆ ಕೊನೆಗೆ ಅವನಿಗೆ ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿಬಿಟ್ಟಳು ಆಗ ಅಲ್ಲಿ ಲೋಯರ್ ಕೋರ್ಟ್ ಅವಳನ್ನು ಅಪರಾಧಿ ಎಂದು 10 ವರ್ಷ ಜೀವಾವಧಿ ಶಿಕ್ಷೆ ಮಾಡಿತಂತೆ. ಆದರೆ ಹೈಯರ್ ಕೋರ್ಟ್ ಅವಳನ್ನು ನಿರಾಪರಾಧಿ ಎಂದು ಬಿಡುಗಡೆ ಮಾಡಿತು. ಇಂತಹ ನೋವಿನಲ್ಲಿ ಇರತಕ್ಕಂಥ ಲಕ್ಷಾಂತರ ಮಹಿಳೆಯರ ವಿಚಾರದಲ್ಲಿ ಈ ಆಯೋಗ ಕೆಲಸ ಮಾಡುತ್ತದೆ ಎಂದರೆ ಸಾವಿರಾರು ಕೆಲಸಗಳು ಇವೆ. ದಯವಿಟ್ಟು ಇದನ್ನು ಗಂಭೀರವಾಗಿ ಯೋಚನೆ ಮಾಡಬೇಕು. ಇನ್ನು ಉದ್ಯೋಗದ ಬಗ್ಗೆ ಹೇಳುವುದಾದರೆ ಏನು ಉದ್ಯೋಗವನ್ನು ಸೃಷ್ಟಿ ಮಾಡಿದ್ದೇವೆ ನಾವು. ? ನಾನು ಮಹಿಳಾ ಸಂಘಗಳನ್ನು ಸಾವಿರಾರು ನೋಡಿದ್ದೇನೆ. ಮಹಿಳಾ ಸಂಘಗಳು ಏನು ಮಾಡುತ್ತಾರೆ? ಅವು ಶೋಕಿ ಸಂಘವಾಗಬಾರದು. ಮಹಿಳಾ ಸಂಘಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸ್ಥಳದಲ್ಲೇ ಉದ್ಯೋಗ ಸೃಷ್ಟಿ ಮಾಡತಕ್ಕಂಥ ವಿಚಾರವನ್ನು ಇಟ್ಟುಕೊಳ್ಳಬೇಕು. ಅದಕ್ಕೆ ಇವತ್ತು 42 ಲಕ್ಷ

ರೂಪಾಯಿ ದುಡ್ಡು ಇಟ್ಟುಕೊಂಡಿದ್ದಾರೆ. ಏನು ಮಾಡುತ್ತೀರಿ 42 ಲಕ್ಷ ರೂಪಾಯಿ ದುಡ್ಡನ್ನು. ಸಹಕಾರಿ ಕ್ಷೇತ್ರದಲ್ಲಿ ಇವತ್ತು ಬೇಕಾದಷ್ಟು ಉದ್ಯೋಗಗಳನ್ನು ಸೃಷ್ಟಿ ಮಾಡಬಹುದು. ಆದರೆ ಯಾವುದೇ ಕೆಲಸವನ್ನು ನಾವು ಮಾಡುತ್ತಿಲ್ಲ. ಕೇವಲ ಮಹಿಳೆಯರಿಗೆ ಅಂಗನವಾಡಿ ಟೀಚರ್ ಎಂದು ಉದ್ಯೋಗ ಕೊಟ್ಟು ಅವರಿಗೆ ತಿಂಗಳಿಗೆ 350 ರೂಪಾಯಿ ಸಂಬಳ ಕೊಡುತ್ತೇವೆ. ನಾವು ಮಹಿಳೆಯರಿಗೆ ಉದ್ಯೋಗದ ಮೀಸಲಾತಿ ನಿಯಮವನ್ನು ಕೂಡ ಅಳವಡಿಸಿಕೊಂಡಿಲ್ಲ. ದಯವಿಟ್ಟು ತಾವು ಈ ಒಂದು ಮಸೂದೆಯನ್ನು ಏನು ತರುತ್ತಿದ್ದೀರಿ ಇದಕ್ಕೆ ಸಾರ್ಥಕತೆ ಬರಬೇಕು. ಇನ್ನು ಅವರಿಗೆ ಕೊಡುವಂತಹ ಕೂಲಿ ಬಗ್ಗೆ ಹೇಳುವುದಾದರೆ ನಾನು ಒಂದು ಭಾರಿ ಧಾರವಾಡಕ್ಕೆ ಹೋಗಿದ್ದಾಗ ನೂರು ಜನ ಹೆಣ್ಣುಮಕ್ಕಳು ಬರುತ್ತಿದ್ದರು. ಅವರು ಕೆಲಸಕ್ಕೆ ರಾತ್ರಿ ನಾಲ್ಕು ಅಥವಾ ಐದು ಗಂಟೆಗೆ ಹೋಗಿದ್ದರು ಮಧ್ಯಾಹ್ನ ಹನ್ನೆರಡೂವರೆ ಗಂಟೆಗೆ ಬರುತ್ತಿದ್ದಾರೆ. ಅವರಿಗೆ 5 ರೂಪಾಯಿ ಕೂಲಿ. ನಾಲ್ಕೂವರೆ ಗಂಟೆಗೆ ಎದ್ದು ಗೋಧಿ ಕೊಯ್ಯುವುದಕ್ಕೆ ಹೋಗಿ ಹನ್ನೆರಡು ಗಂಟೆಗೆ ಬರುತ್ತಿದ್ದಾರೆ ಅದಕ್ಕೆ ಅವರಿಗೆ ಪಗಾರ ಕೇವಲ 5 ರೂಪಾಯಿ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಒಬ್ಬ ಮಾನ್ಯ ಸದಸ್ಯರು : ಇದು ಯಾವಾಗ ಇರಬಹುದು?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಇದು ಸುಮಾರು 4-5 ವರ್ಷಗಳ ಹಿಂದಿನ ಮಾತು. ನೀವು ಅಲ್ಲಿನ ಸ್ಥಳೀಯರು ಇರಬಹುದು, ಆದರೆ ನಾನು ಆ ಪರಿಸ್ಥಿತಿಯನ್ನು ಕಣ್ಣಲ್ಲಿ ನೋಡಿದ್ದೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಹಸ್ರಾರು ಹೆಣ್ಣುಮಕ್ಕಳು 5-6 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅವರ ಶೋಷಣೆ ನಡೆಯುತ್ತಿದೆ.

ಒಬ್ಬ ಮಾನ್ಯ ಸದಸ್ಯರು : ಅಲ್ಲಿ ಇರಬಹುದು ಕೆಲವು ಏರಿಯಾಗಳಲ್ಲಿ ಇರಬಹುದು. ನಮ್ಮಲ್ಲಿ ಕೆಲವು ಹೆಣ್ಣುಮಕ್ಕಳಿಗೆ 25 ರೂಪಾಯಿ ಕೊಡುತ್ತೇವೆ. ಕೆಲವು ಹಳ್ಳಿಗಳಲ್ಲಿ 10 ರೂಪಾಯಿ ಇದೆ. 5 ರೂಪಾಯಿ ಇದೆ. ಕೂಲಿಯಲ್ಲಿ ತಾರತಮ್ಯ ಇದೆ.

ಶ್ರೀ ರಮಾನಾಥ್ ರೈ : ಕಾರ್ಮಿಕರ ಮತ್ತು ಮಹಿಳೆಯರ ಶೋಷಣೆ ಮಾಡುವಂತಹ ಸ್ಥಳ ಎಂದರೆ ಅದು ದಕ್ಷಿಣ ಕನ್ನಡ ಜಿಲ್ಲೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ತಾವು ಏನು ಆಯೋಗ ರಚನೆ ಮಾಡಿದ್ದೀರಿ, ಅದಕ್ಕೆ ಒಂದು ಕಲ್ಪನೆ ಇರಬೇಕು. ಇದು ಆಯೋಗ ಏನಾಗಿದೆ ಎಂದರೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣವನ್ನು ಕೇವಲ ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿ ಜೀವನ ಮಾಡತಕ್ಕಂಥ ವಿಚಾರ ಬೆಳೆದಿದೆ. ಆದುದರಿಂದ ತಾವು ದಯವಿಟ್ಟು ಆಯೋಗದಲ್ಲಿ ಮಹಿಳೆಯರ ಕಲ್ಯಾಣದ ಬಗ್ಗೆ ಯೋಚನೆ ಮಾಡಬೇಕು ಎಂದು ಸನ್ಮಾನ್ಯ

ಸಭಾಧ್ಯಕ್ಷರ ಮೂಲಕ ಶ್ರೀಮತಿ ಲಲಿತಾನಾಯಕ್‌ರವರ ಗಮನಕ್ಕೆ ತರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಹೆಚ್.ವಿಜಯಶಂಕರ್(ಹುನ್ಸೂರು) : ಮಾನ್ಯ ಅಧ್ಯಕ್ಷರೆ, ಇವತ್ತು ಮಹಿಳಾ ಆಯೋಗವನ್ನು ರಚನೆ ಮಾಡುವಂತಹ ವಿಚಾರವನ್ನು ಸರ್ಕಾರ ಏನು ಯೋಚನೆ ಮಾಡುತ್ತಿದೆ ಇದು ಬಹಳ ಸೂಕ್ತವಾದಂತಹ ವಿಚಾರ. ಮಹಿಳೆಯರಿಗೆ ಅದರಲ್ಲೂ ಗ್ರಾಮೀಣ ಮಟ್ಟದ ತಾಯಂದರಿಗೆ ಆಗುತ್ತಿರುವಂತಹ ಎಲ್ಲಾ ರೀತಿಯ ಶೋಷಣೆಗೆ ಈ ಒಂದು ಆಯೋಗದಿಂದ ಪರಿಹಾರ ಸಿಗುತ್ತದೆ, ಪರಿಹಾರ ಸಿಗುವಂತಹ ದಿಕ್ಕಿನಲ್ಲಿ ಕೆಲಸ ಮಾಡುತ್ತದೆ ಎನ್ನುವ ಭರವಸೆಯನ್ನು ನಾವು ಇಟ್ಟುಕೊಂಡಿದ್ದೇವೆ. ಅದಕ್ಕೆ ಈ ಒಂದು ಸಂದರ್ಭದಲ್ಲಿ ಕೆಲವೊಂದು ಸಲಹೆಗಳನ್ನು ಕೊಡಬೇಕು ಎಂದು ಬಯಸಿದ್ದೇನೆ. ಸಾರಿಗೆ ಸಂಸ್ಥೆಯಲ್ಲಿ ಶಾಸ್ತ್ರಕ್ಕೆ ಮಹಿಳೆಯರಿಗೆ ಮೀಸಲು ಎಂದು ಬಳಸುತ್ತೀರಿ. ಆದರೆ ಅಲ್ಲಿ ಯಾವ ತಾಯಂದಿರಿಗೂ ಕೂಡ ಎದ್ದು ಸೀಟನ್ನು ಬಿಟ್ಟುಕೊಡುವ ವ್ಯವಸ್ಥೆ ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ. ಅದನ್ನು ನೀವು ಕಡ್ಡಾಯವಾಗಿ ಜಾರಿಗೆ ತರಬೇಕು. ಮಹಿಳೆಯರಿಗೆ ಮೀಸಲಿರುವಂತಹ ಸ್ಥಳ ಏನಿದೆ ಬಸ್‌ಗಳಲ್ಲಿ ಅಥವಾ ಓಡಾಟ ವ್ಯವಸ್ಥೆಯಲ್ಲಿ ಆಗಲಿ ಅದು ಕಡ್ಡಾಯವಾಗಿ ಜಾರಿಗೆ ತರುವ ಮುಖಾಂತರ ಒಂದು ವ್ಯವಸ್ಥೆಯನ್ನು ಮಾಡಬೇಕು ಎನ್ನುವ ಸಲಹೆಯನ್ನು ಕೊಡುತ್ತಿದ್ದೇನೆ. ಮತ್ತು ಓದುವಂತಹ ವಿಚಾರದಲ್ಲಿ ಹೇಳುವುದಾದರೆ ಅವರ ಫೀಸ್ ಇತರೆ ಸೌಲಭ್ಯಗಳನ್ನಾಗಲಿ ಮಹಿಳೆಯರಿಗೆ ಹೆಣ್ಣುಮಕ್ಕಳಿಗೆ ಹೆಚ್ಚಿನ ವಿನಾಯಿತಿಯನ್ನು ಕೊಡಬೇಕು. ಅದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಹಾಗೂ ಗ್ರಾಮೀಣ ಮಟ್ಟದಲ್ಲಿ ಮಹಿಳೆಯರು ಇವತ್ತು ಏನು ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಸಂಘಟನಾತ್ಮಕವಾಗಿ ಹೋರಾಟ ಮಾಡುವಂತಹ ಕೆಲಸ ನಡೆಯುತ್ತಿದೆ ಅದಕ್ಕೆ ಅವರಿಗೆ ಅವರದೇ ಆದಂತಹ ಒಂದು ಸ್ವಂತ ಕಟ್ಟಡಗಳನ್ನು, ಮಹಿಳಾ ಕೇಂದ್ರಗಳನ್ನು ತೆರೆಯುವುದಕ್ಕೆ ಸರ್ಕಾರದಿಂದ ಒಂದು ವಿಶೇಷವಾದಂಥ ಯೋಜನೆಯನ್ನು ತಯಾರು ಮಾಡಬೇಕು. ಅವರಿಗೆ ಗ್ರಾಮೀಣ ಮಟ್ಟದಲ್ಲಿ ನಿವೇಶನವನ್ನು ಕೊಡುವ ಬಗ್ಗೆ ಆಲೋಚನೆ ಮಾಡಬೇಕು. ಅವರಿಗೆ ಕಟ್ಟಡವನ್ನು ತತ್‌ಕ್ಷಣ ಒದಗಿಸಿಕೊಡುವಂತಹ ಕಾರ್ಯವನ್ನು ತಾವು ಮಾಡಬೇಕು ಎಂದು ಕೇಳಿಕೊಳ್ಳುತ್ತಾ, ಇದರ ಜೊತೆಗೆ ಪ್ರಾಥಮಿಕ ಶಿಕ್ಷಣ ಏನಿದೆ ಇದನ್ನು ಸಹ ಹೆಚ್ಚಾಗಿ ಮಹಿಳೆಯರಿಗೆ ಮೀಸಲಿಟ್ಟರೆ ಒಳ್ಳೆಯದು. ಏಕೆಂದರೆ ಅಲ್ಲಿ ಶಿಕ್ಷಕರನ್ನು ನೇಮಿಸುವಂತಹ ವಿಚಾರದಲ್ಲಿ ಮಹಿಳೆಯರಿಗೆ ಆದ್ಯತೆಯನ್ನು ಕೊಟ್ಟರೆ, ಅವರಿಗೆ ವಿಶೇಷವಾದಂತಹ ಅವಕಾಶವನ್ನು ಮಾಡಿಕೊಟ್ಟರೆ ಗ್ರಾಮೀಣ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಪ್ರಮಾಣಿಕವಾಗಿ ವ್ಯವಸ್ಥೆ ಆಗುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಭಾವಿಸಿದ್ದೇನೆ. ಈ ವಿಚಾರವನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಮನವಿಯನ್ನು ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ: ಮಾನ್ಯ ಅಧ್ಯಕ್ಷರೇ ಮಹಿಳಾ ಆಯೋಗವನ್ನು ತಂದಿರುವುದು ಬಹಳ ಸಂತೋಷದ ಸಂಗತಿ ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಬಗ್ಗೆ ಬಹಳಷ್ಟು ವಿಷಯಗಳನ್ನು ತಿಳಿದುಕೊಂಡಿರತಕ್ಕಂಥ ಶ್ರೀಮತಿ ಲಲಿತಾ ನಾಯಕ್‌ರವರು ಮೊದಲಿನಿಂದಲೂ ಹೋರಾಡಿದವರು. ಮಹಿಳೆಯರಿಗೆ ಸ್ವತಂತ್ರವಾದಂತಹ ಒಂದು ವ್ಯವಸ್ಥೆಯನ್ನು ಮಾಡಿ ಅವರಿಗೆ ಸಾಕಷ್ಟು ಸಹಾಯ ಮಾಡಬೇಕು ಎಂದು ಈ ಆಯೋಗವನ್ನು ತಂದಿದ್ದಾರೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ ಈಗಾಗಲೇ ಇದಕ್ಕೆ ಅನೇಕ ಹಿರಿಯರು ಸೂಚನೆಯನ್ನು ಕೊಟ್ಟಿದ್ದಾರೆ. ಕೇವಲ ಹೆಸರಿಗೆ ಮಾತ್ರ ಈ ಆಯೋಗವಾಗಬಾರದು. ಮಹಿಳೆಯರಿಗೆ ಸರಿಯಾದಂತಹ ಒಂದು ರಕ್ಷಣೆ ಸಿಗಬೇಕು. ಅವರಿಗೂ ಸಹ ಈ ಸಮಾಜದಲ್ಲಿ ಸಮಬಾಳು ಸಿಗಬೇಕಾಗಿದೆ. ಗಂಡಸರಷ್ಟೇ ಹೆಣ್ಣುಮಕ್ಕಳಿಗೂ ಸಮನಾದ ಹಕ್ಕುಗಳು ಸಿಗಬೇಕಾಗಿದೆ. ಶಿಕ್ಷಣ ಅಷ್ಟೇ ಅಲ್ಲ ಮಹಿಳಾ ಸಂಘಟನೆಗಳು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಇವೆ. ಆ ಸಂಘಟನೆಗಳ ಮೂಲಕ ಶೋಷಣೆಗೆ ಒಳಗಾಗುತ್ತಿರುವಂತಹ ಮಹಿಳೆಯರಿಗೆ ಸರಿಯಾದಂತಹ ಸಹಾಯ ಕೊಡುವಲ್ಲಿ ಹಾಗೂ ಸ್ವಾವಲಂಬಿಯಾಗಿ ಬದುಕುವುದಕ್ಕೆ ಅವಕಾಶ ಆಗುವಂಥ ದೃಷ್ಟಿಯಲ್ಲಿ ಹಣಕಾಸಿನ ಸಹಾಯವನ್ನು ಮಾಡಬೇಕು. ಮಹಿಳಾ ಸಂಘಟನೆಗಳು ಸರಿಯಾಗಿ ಬೆಳೆಯುವುದಕ್ಕೆ ಅವಕಾಶ ಮಾಡಿ ಸರಿಯಾದಂತಹ ಕಟ್ಟಡಗಳನ್ನು ಒದಗಿಸುವಂತಹ ವ್ಯವಸ್ಥೆಯಾಗಬೇಕು. ಈಗಿರುವಂಥ ಮಹಿಳಾ ಸಮಾಜ ಕಲ್ಯಾಣ ಇಲಾಖೆ ಏನು ಇದೆ ಅದು ಏನೂ ಕೆಲಸ ಮಾಡುತ್ತಿಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಅದು ಹೆಸರಿಗೆ ಮಾತ್ರ ಇಲಾಖೆಯಾಗಿದೆ. ಅಲ್ಲಿ ಮಹಿಳೆಯರ ಬಗ್ಗೆ ಮತ್ತು ಮಕ್ಕಳ ಬಗ್ಗೆ ಯಾವುದೇ ತರಹದ ಸೇವೆ ಸಿಗುತ್ತಾ ಇಲ್ಲ. ಕೇಂದ್ರದಿಂದ ಬೇಕಾದಷ್ಟು ಹಣ ಬರುತ್ತಿದೆ ಮಕ್ಕಳ ಮತ್ತು ಮಹಿಳೆಯರ ಸಲುವಾಗಿ ಬರುತ್ತಿದೆ. ಶೋಷಣೆ ಆಗುತ್ತಿರುವಂತಹ ಮಹಿಳೆಯರ ಸಲುವಾಗಿ ಇವತ್ತು ತಾವು ತಂದಂಥಹ ಆಯೋಗ ಬಹಳ ಉತ್ತಮವಾದುದು. ಹೆಚ್ಚು ನೈಜವಾಗಿ ಕೆಲಸ ಮಾಡಬೇಕು ಮತ್ತು ಇದು ತಮ್ಮ ಕಾಲದಲ್ಲಿ ತಂದಂಥ ಆಯೋಗ ಇದು ಶಕ್ತಿಯುತವಾಗಿ ಕೆಲಸ ಮಾಡಬೇಕು. ಕರ್ನಾಟಕ ಮಾದರಿಯಾದಂತಹ ರಾಜ್ಯ. 12ನೇ ಶತಮಾನದಲ್ಲಿ ಬಸವಣ್ಣನವರ ಕಾಲದಲ್ಲಿ ಮಹಿಳೆಯರಿಗೆ ಸಮಾಜದಲ್ಲಿ ಸಮಾನವಾದಂತಹ ಅವಕಾಶವನ್ನು ಕೊಟ್ಟಂತಹ ರಾಜ್ಯ. ಸರಿಸಮಾನವಾಗಿ ಅವರನ್ನು ಇಟ್ಟುಕೊಂಡು ಅವರೂ ಸಹ ಸರಿಯಾದಂಥ ಶಕ್ತಿಯನ್ನು ಕೊಟ್ಟು ಅವರ ಮೂಲಕ ಸಮಾಜವನ್ನು ತಿದ್ದುವಂಥ ಕಾರ್ಯವನ್ನು ಮಾಡಿದಂಥಹ ಈ ರಾಜ್ಯ. ಈ ರಾಜ್ಯದಲ್ಲಿ ಮಹಿಳೆಯರ ಬಗ್ಗೆ ಶೋಷಣೆ ಆಗುತ್ತಿರುವುದನ್ನು ಕಂಡು ಈ ಆಯೋಗದ ಮೂಲಕ ಸರ್ಕಾರ ಮಹಿಳೆಯರಿಗೆ ಶಾಶ್ವತವಾದ ಬೆಳವಣಿಗೆಗೆ ಯೋಗ್ಯವಾದಂತಹ ಸಹಾಯವನ್ನು ಕಲ್ಪಿಸಬೇಕು ಎಂದು ಹೇಳಿ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಿಗೆ ಸೂಚನೆ ಕೊಡುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು.

ಶ್ರೀಮತಿ ಎನ್.ಜ್ಯೋತಿರೆಡ್ಡಿ: ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಸರ್ಕಾರ ಮಹಿಳಾ ಆಯೋಗದ ಬಗ್ಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಿಲ್ ರೂಪದಲ್ಲಿ ತರುವುದಕ್ಕೆ ನಮ್ಮ ಸಭೆಯ ಮುಂದೆ ಇಟ್ಟಿದ್ದಾರೆ. ಇದಕ್ಕೆ ನಾನು ಹೃದಯಪೂರ್ವಕವಾಗಿ ಸ್ವಾಗತ ಮಾಡುತ್ತಾ, ಮಹಿಳಾ ಆಯೋಗವನ್ನು ರಚನೆ ಮಾಡಿ, ಮಹಿಳೆಯರಿಗೆ ಹಕ್ಕು ಹಾಗೂ ಮಹಿಳೆಯರಿಗೆ ನ್ಯಾಯ ಸಮ್ಮತವಾದಂತಹ ಒಂದು ಸ್ಥಾನವನ್ನು ಕೊಡಬೇಕು ಎಂದು ನಮ್ಮ ಸರ್ಕಾರದವರು ಇದನ್ನು ತಂದಿದ್ದಾರೆ. ಇದನ್ನು ನಾನು ತುಂಬಾ ಸಂತೋಷದಿಂದ ಒಪ್ಪುತ್ತಿದ್ದೇನೆ. ಆದರೆ ಈಗಾಗಲೇ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಮಾತನಾಡುವಾಗ ಈ ಕಮಿಷನ್‌ಗೆ ಮಹಿಳೆಯರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕು ಎಂದು ಹೇಳಿ ಅದರ ಮೇಲೆ ವಾದ ವಿವಾದಗಳು ನಡೆಯುತ್ತಿತ್ತು. ಯಾವುದೇ ಒಂದು ಒಳ್ಳೆಯ ಕಾರ್ಯವನ್ನು ಮಾಡುವುದಕ್ಕೆ ಮಹಿಳೆಯರ ಸ್ಥಾನಮಾನಗಳನ್ನು ಈ ಸಮಾಜದಲ್ಲಿ ಎತ್ತಿಹಿಡಿಯುವುದಕ್ಕೆ ಮತ್ತೊಬ್ಬ ಮಹಿಳೆಯೆ ಬೇಕಾಗಿಲ್ಲ. ಮಹನೀಯರು ಆ ಕೆಲಸವನ್ನು ಮಾಡಬಹುದು ಎಂಬುದು ನನ್ನ ಭಾವನೆ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜುರವರೆ, ಒಪ್ಪಿಕೊಳ್ಳಿ ಅವರು ಏನು ಹೇಳಿದರೆಂದರೆ ಮಹಿಳೆಯರಿಗಾಗಿ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಒಬ್ಬ ಮಹಿಳೆಯೆ ಬೇಕಾಗಿಲ್ಲ. ಒಬ್ಬ ಮಹನೀಯರು ಆದರೂ ಆಗಬಹುದುದೆಂದು ಹೇಳಿದರು. ಇದಕ್ಕೆ ನಾವೆಲ್ಲರೂ ಸೇರಿ ವಾಟಾಳ್‌ರವರನ್ನು ಒಪ್ಪಿಕೊಳ್ಳಿ ಎಂದು ಹೇಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜು: ಯಾರು ಏನೇ ಹೇಳಿದರೂ, ನೀವು ನನಗೆ 10 ಕೋಟಿ ರೂ.ಗಳನ್ನು ಕೊಟ್ಟರೂ ನಾನು ಒಪ್ಪುವುದಿಲ್ಲ. ಏಕೆಂದರೆ ಮಹಿಳೆಯರ ಕಾಟದಿಂದ ತಪ್ಪಿಸಿಕೊಳ್ಳುವುದು ಬಹಳ ಕಷ್ಟ.

ಶ್ರೀ ಎಂ.ಪಿ.ಪ್ರಕಾಶ್: ವಾಟಾಳ್ ನಾಗರಾಜ್‌ರವರು ಯಾವ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ ನೋಡಿ, ಅವರಿಗೆ ಅಂತಹ ಅನುಭವವೇನಾದರೂ ಆಗಿದೆಯೋ?

ಅಧ್ಯಕ್ಷರು: ನಮ್ಮಿಬ್ಬರ ಮಧ್ಯೆ ಇವರು ಬರುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರು ನಿಮ್ಮ ಮಧ್ಯೆ ಬರುವುದು ಬೇಡ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ವಾಟಾಳ್ ನಾಗರಾಜ್‌ರವರು ಮಹಿಳೆಯರ ಬಗ್ಗೆ ಈ ರೀತಿಯಾಗಿ ಹೇಳುತ್ತಾರಲ್ಲಾ? ಅವರೇನು ಬ್ರಹ್ಮಚಾರಿಯೋ?

ಅಧ್ಯಕ್ಷರು: ಅವರು ಯಾವ ವಿಚಾರದಲ್ಲೂ ಸೋಗು ಹಾಕುವುದಿಲ್ಲ ಬಿಡಿ.

ಶ್ರೀ ವಾಟಾಳ್ ನಾಗರಾಜ್: ನನಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನೀವು ಏನಾದರೂ ಮಾಡಿ ಒಪ್ಪಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ಬಂಗಾರಪ್ಪನವರು ನಿಮ್ಮನ್ನು ಬಿಡುವುದಕ್ಕೆ ಆಗುವುದಿಲ್ಲ ನೀವು ಒಪ್ಪಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ನಾಗೇಗೌಡರು ಪಕ್ಕದಲ್ಲಿ ಬಂದು ಏನಾದರೂ ಮಾಡಿ ಒಪ್ಪಿಕೊಳ್ಳಲೇಬೇಕು ಎಂದು ಹೇಳುತ್ತಿದ್ದಾರೆ. ಈಗ ನಾನು ಬಹಳ

ಇಕ್ಕಟ್ಟಿನಲ್ಲಿ ಸಿಕ್ಕಿಬಿಟ್ಟಿದ್ದೇನೆ. ಈಗ ತಾವು ದಯಮಾಡಿ ನನ್ನನ್ನು ಪಾರು ಮಾಡಬೇಕು. ನೀವು ಏನಾದರೂ ಒಪ್ಪಿಕೊಂಡುಬಿಡಿ ಎಂದರೆ ನಾನು ಒಪ್ಪಿಕೊಂಡು ಬಿಡುತ್ತೇನೆ.

ಅಧ್ಯಕ್ಷರು: ಇವತ್ತು ಮಾನ್ಯ ಪಟೇಲರು ಸದನಕ್ಕೆ ಬಂದಿಲ್ಲ. ಅವರು ಬಂದ ಮೇಲೆ ಅವರ ಜೊತೆಯಲ್ಲಿ ಚರ್ಚೆ ಮಾಡಿ ನಿಮಗೆ ವಿಷಯವನ್ನು ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಪಟೇಲರು ಸದನದಲ್ಲಿದ್ದರೆ ಚೆನ್ನಾಗಿತ್ತು.

ಶ್ರೀಮತಿ ಎನ್.ಜ್ಯೋತಿರೆಡ್ಡಿ: ಮಾನ್ಯ ವಾಟಾಳ್ ನಾಗರಾಜ್ ಅವರು ಮಹಿಳಾ ಆಯೋಗಕ್ಕೆ ಮಹಿಳೆಯರೇ ಅಧ್ಯಕ್ಷರಾಗಬೇಕೆಂದು ಹೇಳಿದ್ದು ತುಂಬಾ ಸಂತೋಷ. ಆದರೆ ಈ ಸಮಾಜದಲ್ಲಿ ಮಹಿಳೆಯರಿಗೆ ಆಗುತ್ತಿರುವಂತಹ ಅನ್ಯಾಯಗಳನ್ನು ಒಬ್ಬ ಮಹಿಳೆಯ ಕಷ್ಟ ಸುಖಗಳನ್ನು ಮತ್ತೊಬ್ಬ ಮಹಿಳೆಯರಿಂದ ಸಾಧ್ಯ, ಇದು ಮಹನಿಯರಿಗೆ ಅರ್ಥವಾಗುವುದಿಲ್ಲವೆಂದಲ್ಲ. ಆದರೂ ಸಹ ಸುಲಭವಾಗಿ ಮತ್ತೊಬ್ಬ ಮಹಿಳೆಯು ಸುಲಭವಾಗಿ ಅರ್ಥ ಮಾಡಿಕೊಳ್ಳುವಂತಹ ಅವಕಾಶವಿರುತ್ತದೆ. ಆದುದರಿಂದ ಅಧ್ಯಕ್ಷರ ಸ್ಥಾನವನ್ನು ಕೊಡುವುದಾದರೆ ಮಹಿಳೆಯರಿಗೆ ಕೊಡಿ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಹಿಳೆಯರಿಗಾಗಿ ಮಹಿಳಾ ಸಮಾಜಗಳು ಮತ್ತು ಮಹಿಳಾ ಆಯೋಗವೆಂದು ಸ್ಥಾಪನೆ ಮಾಡುತ್ತೇವೆ. grass root level, ಏನು ಮಹಿಳೆಯರಿಗೆ ಅನ್ಯಾಯವಾಗುತ್ತಿದೆ ಪುರಾಣ ಕಾಲದಿಂದಲೂ ಕೆಲವು ಮಹಿಳೆಯರ ಮೇಲೆ ದೌರ್ಜನ್ಯ ಮತ್ತು ಒತ್ತಡಗಳು ಬರುತ್ತಿವೆ ಅದಕ್ಕೆ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು. we will get good results otherwise not ಈ ಆಯೋಗದಿಂದಲೇ ಮಹಿಳೆಯರಿಗೆ ಈ ಸಮಾಜದಿಂದ ಆಗಲಿ, ಒಕ್ಕೂಟಗಳಿಂದಾಗುತ್ತದೆಂದು ನಾನು ಭಾವಿಸುತ್ತಿಲ್ಲ. ಏಕೆಂದರೆ ಹಿಂದಿನಿಂದಲೂ ಒಬ್ಬ ಗಂಡನನ್ನು ಕಳೆದುಕೊಂಡ ವಿಧವೆಗೆ ಕುಂಕುಮ ತೆಗೆಯುವುದು, ಬಳೆಯನ್ನು ಒಡೆಯುವುದು ಈಗಲೂ ಈ ಸಮಾಜದಲ್ಲಿ ನಡೆಯುತ್ತಿದೆ. ಆದುದರಿಂದ ಮಹಿಳೆಯರು ಎಷ್ಟು ಮಾನಸಿಕವಾಗಿ ನೋವನ್ನು ಅನುಭವಿಸುತ್ತಿದ್ದಾರೆ ಎನ್ನುವ ವಿಷಯವನ್ನು ಸಮಾಜದಲ್ಲಿ ಇನ್ನು ಯಾರೂ ಅರ್ಥ ಮಾಡಿಕೊಂಡಿಲ್ಲ.

ಶ್ರೀ ಎನ್.ರಾಜಣ್ಣ: ಅರ್ಥಮಾಡಿ ಕೊಂಡಿದ್ದೇವೆ, ಅದಕ್ಕೆ Let us follow great Britain system ಗ್ರೇಟ್ ಬ್ರಿಟನ್‌ನಲ್ಲಿ ಗಂಡ ಬಿಡಲಿ, ಅಥವಾ ಕಳೆದುಕೊಳ್ಳಲಿ ಯಾವಾಗಲೂ ಒಂದೇ ರೀತಿಯಲ್ಲಿರುತ್ತಾರೆ.

ಶ್ರೀಮತಿ ಎನ್.ಜ್ಯೋತಿರೆಡ್ಡಿ: ಆದುದರಿಂದ ದಯಮಾಡಿ ಈ ಸಮಾಜದಲ್ಲಿ ಪ್ರತಿಯೊಬ್ಬರೂ ಬದಲಾವಣೆಯಾಗಬೇಕು. ನಾವೆಲ್ಲರೂ ಈ ಸಮಾಜದಲ್ಲಿ ವ್ಯಕ್ತಿಗಳಾಗಿದ್ದೇವೆ. ಈ ಸಮಾಜದ ಒಂದು ಅಂಗವಾಗಿದ್ದೇವೆ. ನಾವೆಲ್ಲರೂ ಒಪ್ಪಿಕೊಂಡು ಈ ಸಾಮಾಜಿಕ ಬದಲಾವಣೆಯನ್ನು ತರುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು, Rules, Regulation they will bring some changes ಅಂದರೆ ಅಷ್ಟಾಗಿ ನನಗೆ ನಂಬಿಕೆ ಸಿಕ್ಕುವುದಿಲ್ಲ. ಮಹಾತ್ಮಗಾಂಧೀಜಿಯವರು ಹೇಳಿದಂತೆ

ಅರ್ಧ ರಾತ್ರಿಯಲ್ಲಿ ರಸ್ತೆಯ ಮೇಲೆ ಒಬ್ಬ ಹೆಣ್ಣುಮಗಳು ಹೋದರೆ ಅವಳಿಗೆ ಯಾವ ಆಪತ್ತು ಆಗದೇ ಇರುವಂತಹ ಸಂದರ್ಭ ಬಂದಾಗ ನಮ್ಮ ಸಮಾಜ ಬದಲಾಗಿದೆ ಎಂದು ನಾವು ತಿಳಿದುಕೊಳ್ಳಬಹುದು. ಎಂದು ರಾತ್ರಿಯಲ್ಲಿ, ಹಗಲು ಸಹ ಓಡಾಡುವುದಕ್ಕೆ ಕಷ್ಟ ಪಡುವಂತಹ ಸಾಮಾಜಿಕ ಪರಿಸ್ಥಿತಿ ಈಗ ನಮ್ಮಲ್ಲಿ ಇದೆ. ಅದನ್ನು ಬದಲಾವಣೆ ಮಾಡಬೇಕಾಗಿದೆ. ಈ ಆಯೋಗವನ್ನು ನಮ್ಮ ಸರ್ಕಾರ ರಚನೆ ಮಾಡಿದೆ. ಇದನ್ನು ನಾವು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಂಡು ನಾವು ಬಡ ಜನತೆಗೆ, ಬಡ ಹೆಣ್ಣುಮಕ್ಕಳಿಗೆ ಅವರಲ್ಲಿ ಏನು ನ್ಯೂನತೆಗಳನ್ನು ಕಾಣುತ್ತಿದ್ದೇವೆ. ಅದನ್ನು ಮಾನಸಿಕವಾಗಿ ಪರಿವರ್ತನೆಗೆ ತರುವುದಕ್ಕೆ ಈ ಆಯೋಗ ಕೆಲಸ ಮಾಡಬೇಕೆಂದು ನನ್ನ ಆಶಯವಾಗಿದೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಶೇ.50ರಷ್ಟು ಮಹಿಳೆಯರಿಗಾಗಿ ಮೀಸಲಾತಿಯನ್ನು ಕೊಡಿ ಎಂದು ನನ್ನ ಸ್ನೇಹಿತರು ಹೇಳಿದರು. ಈ ರಿಜರ್ವೇಷನ್ ಪಾಲಿಸಿಯನ್ನು ಕಡ್ಡಾಯವಾಗಿ ತಂದು ಕೆಲವು ಹೆಣ್ಣುಮಕ್ಕಳು ವಿಧಾನಸಭೆಗೆ ಬಂದಿದ್ದೇವೆ. ಹಾಗೆ ಬರುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಇಂತಹ ಆಯೋಗಗಳಿಂದ ಬರುವಂತಹ ಕೆಲವು ಒಳ್ಳೆಯ ವಿಷಯಗಳನ್ನು ನಾವು ಸಾಮಾಜಿಕ ವ್ಯವಸ್ಥೆಯಲ್ಲಿ ತಂದು ಇದನ್ನು ಮತ್ತಷ್ಟು ಬಲಪಡಿಸುವುದಕ್ಕೆ ಅವಕಾಶ ಸಿಕ್ಕುತ್ತದೆ ಎಂದು ಹೇಳುತ್ತೇನೆ. ನಮ್ಮ ಸರ್ಕಾರದವರು ಈ ಬಿಲ್ ಅನ್ನು ತಂದುದ್ದಕ್ಕೆ ಅವರನ್ನು ಅಬಿನಂದಿಸುತ್ತಾ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕುಂಬಳೆ ಸುಂದರರಾವ್: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಮಹಿಳಾ ಮಂತ್ರಿಯೊಬ್ಬರು ಮಹಿಳೆಯರ ಹಿತಕ್ಕಾಗಿ ಒಂದು ಮಸೂದೆಯನ್ನು ತರುವಂತಹ ಯೋಚನೆ ಮಾಡಿ ಇಲ್ಲಿ ಅದನ್ನು ಮಂಡಿಸಿದ್ದು ಸ್ವಾಗತಾರ್ಹವಾಗಿದೆ. ಆದರೆ ಇದನ್ನು ಕುರಿತು ಬಂದಂತಹ ಅಭಿಪ್ರಾಯ ಏನಿದೆ, ಅದರಲ್ಲಿ ಕೆಲವೊಂದು ಅಂಶಗಳನ್ನು ನಾನು ಪ್ರಸ್ತಾಪಿಸಲಿಚ್ಛಿಸುತ್ತೇನೆ. ಮಾತಿನ ಭರದಲ್ಲಿ ಸ್ತ್ರೀಯರಿಗೆ ಅನ್ಯಾಯ ಮಾಡುವುದಕ್ಕೆ ಪುರುಷ ವರ್ಗವಿದೆ ಎನ್ನುವಂಥ ಭಾವನೆ ಇರುವ ಮಾತುಗಳು ಬಂದವು. ಇದು ನನಗೆ ಆಶ್ಚರ್ಯವಾಗುತ್ತದೆ. ಈ ದೇಶದಲ್ಲಿ ಸ್ತ್ರೀಯರಿಗೆ ನಮ್ಮ ಪುರಾಣ ಕಾಲದಿಂದ ಇಲ್ಲಿಯವರೆಗೂ ಯಾವ ಸ್ಥಾನವನ್ನು ಕೊಟ್ಟಿದ್ದೆವೋ, ಯಾವ ಗೌರವವನ್ನು ಕೊಟ್ಟಿದೆವೆಯೋ ಅದನ್ನು ಅಷ್ಟು ಸುಲಭವಾಗಿ ನಾವು ಮರೆತುಬಿಡುವುದಕ್ಕಾಗುವುದಿಲ್ಲ. ರಾಮನು ಸೀತೆಯನ್ನು ಬಿಟ್ಟ ಎಂಬಲ್ಲಿಗೆ ರಾಮನಂತಿದ್ದ ಗುಂಪು ಅಂದರೆ ನಾವೆಲ್ಲರೂ ಸೀತೆಗೆ ಅನ್ಯಾಯ ಮಾಡುವವರೆಂದು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ರಾಮನು ಸೀತೆಯನ್ನು ಏಕೆ ಬಿಟ್ಟು ಕೊಟ್ಟ ಎಂಬುದನ್ನು ಸ್ವಲ್ಪ ವಿವೇಚಿಸುವಂತಹ ವಿಷಯವಾಗಿದೆ. ಪ್ರಜೆಗಳಿಗೆ ಒಬ್ಬ ಪ್ರಭುವಾಗಿ ಸ್ವತಃ ಸುಖವನ್ನು ತ್ಯಾಗ ಮಾಡಿ, ಪ್ರಜೆಗಳ ಅಭಿಪ್ರಾಯ, ಅವರ ಹಿತಕ್ಕೆ ತನ್ನ ಪ್ರಥಮ ಪ್ರಾಶ್ತ್ಯವೆಂದು ರಾಮನು ಸೀತೆಯನ್ನು ಬಿಟ್ಟನು. ಸೀತೆಯನ್ನು ಬಿಟ್ಟಂತಹ ರಾಮನು ಮತ್ತೊಂದು ಮದುವೆಯಾಗಿದ್ದರೆ ಅದು

ದ್ರೋಹವಾಗುತ್ತಿತ್ತು. ರಾಮನು ಅಶ್ವಮೇಧಯಾಗವನ್ನು ಮಾಡುವಾಗ ಸೀತೆಯ ಹೊನ್ನಿನ ಪುತ್ತಳಿಯನ್ನು ಮಾಡಿಸಿ ಅಶ್ವಮೇಧಯಾಗವನ್ನು ಮಾಡುತ್ತಾನೆ. ಅದು ರಾಮ ಸೀತೆಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲ. ಎಲ್ಲಿಯವರೆಗೆ ಎಂದರೆ ಸೀತೆಯನ್ನು ರಾವಣ ಅಪಹರಣ ಮಾಡಿಕೊಂಡು ಆಕಾಶ ಮಾರ್ಗದಲ್ಲಿ ಹೋಗುವಾಗ ಯಕ್ಷಗಾನದಲ್ಲಿ ಇದರ ಬಗ್ಗೆ ಒಂದು ಪದ್ಯ ಬರುತ್ತದೆ. ಅದು ಸೀತೆಯ ಬಾಯಿಯಿಂದ ಬರುತ್ತದೆ. ಅದು ಹೀಗೆ ಇದೆ '' ಶಿವ ಶಿವ ಹೆಣ್ಣು ಜನ್ಮವೆ ಸಾಕು ಎನ್ನ ಕಂಡು ಮರೆಯಿರೊ, ರಾಮ ರಾಮ ದಶರಥನ ಸೊಸೆಯಾಗಿ ಜನಕನ ಸುತೆಯಾಗಿ ಈ ಗತಿಯಾಯಿತೆ ರಾಮ ರಾಮ ಎಂದು ಆಕೆಗೆ ಗಂಡನ ಮೇಲೆ ಎಷ್ಟು ಗಾಢವಾದ ಭಕ್ತಿ ಅವಳಿಗೆ ಇತ್ತು ಎಂಬುದು ಇದರಿಂದ ಗೊತ್ತಾಗುತ್ತದೆ. ಲಕ್ಷ್ಮೀಶನ ಜೈಮಿನಿಯನ್ನು ತೆಗೆದುನೋಡಿದಾಗ ಸೀತೆಯನ್ನು ಕಾಡಿಗೆ ಬಿಟ್ಟಾಗ ಅವಳು ಏನು ಹೇಳುತ್ತಾಳೆಂದರೆ '' ಕರುಣಾಳು ರಾಘವನಲ್ಲಿ ತಪ್ಪಿಲ್ಲ'' ನನ್ನ ಗಂಡ ನನಗೆ ದ್ರೋಹ ಮಾಡಲಿಲ್ಲ. ನಾವು ಇವತ್ತು ರಾಮ ಅನ್ಯಾಯಗಾರನೆಂದು ಭಾಷಣ ಮಾಡುತ್ತೇವೆ, ಸ್ವತಃ ಹೆಂಡತಿಯೇ ಫಿರ್ಯಾದು ಕೊಡದಿದ್ದಾಗ ನಾವು ಇದರ ಬಗ್ಗೆ ತೀರ್ಪು ಕೊಡುವುದು ಹೇಗೆ ಎಂದು ನಾನು ಕೇಳುವುದು. ಸೀತೆಗೆ ರಾಮನ ಬಗ್ಗೆ ಆಕ್ಷೇಪವಿಲ್ಲ. ಮನುವಿನ ಪರಂಪರೆಯಲ್ಲಿ '' ನಸ್ತ್ರೀಃ ಸ್ವಾತಂತ್ರ್ಯ ಮರ್ಹಿತಿ ಎಂದು ಹೇಳಿದ ಮನುವಿನ ಪರಂಪರೆ ಇಲ್ಲದ. '' ಯತ್ರ ನಾರಿಯಸ್ತು ಪೂಜ್ಯಂತೇ, ರಮಂತೇ ತತ್ರ ದೇವತಾಃ' ಎಂದು ಹೇಳುತ್ತಾರೆ. ಅವರ ಅಭಿಪ್ರಾಯವೇನೆಂದರೆ ತುಂಡು ಶ್ಲೋಕವನ್ನು ಹಿಡಿದುಕೊಂಡು ನಾವು ಗಂಡಸರು ಅನ್ಯಾಯಗಾರರು ಎಂದು ತೀರ್ಮಾನ ಮಾಡುವುದಕ್ಕೆ ಮತ್ತು ಸ್ತ್ರೀ ಸ್ವಾತಂತ್ರ್ಯ ವಿರೋಧಿಗಳೆಂದು ತೀರ್ಮಾನ ಮಾಡುವುದಕ್ಕೆ ಅವಸರದ ಹೆಜ್ಜೆಯನ್ನಿಡಬಾರದೆಂದು ಸೂಚಿಸುವುದಕ್ಕಿಚ್ಛಿಸುತ್ತೇನೆ. ಇನ್ನು ಈ ಕಾನೂನು ಏನಿದೆಯೋ, ಇದು ಔಪಚಾರಿಕ ಆಗಬಾರದು ಎಂದು ನನ್ನ ಪ್ರಾರ್ಥನೆ. ಇದುವರೆಗೆ ನಾವು ಸ್ತ್ರೀಯರಿಗೆ ಏನು ಕೊಡಬೇಕೆಂದು ಬಯಸಿದ್ದೆವೊ ಅದರ ಬಗ್ಗೆ ಸ್ಪಷ್ಟ ಕಲ್ಪನೆ ಈ ಕಾನೂನಿನಿಂದ ಬರುವಹಾಗೆ ಆಗಬೇಕು. ಸ್ತ್ರೀಯರದಾದಂಥ ಭಾವನೆ, ಸ್ತ್ರೀಯರದಾದ್ದಂಥ ವಿಚಾರ, ಸ್ತ್ರೀಯರದಾದ್ದಂಥ ಸ್ಥಾನಮಾನ, ಇವುಗಳನ್ನು ಕುರಿತು ನಾವು ಯೋಚನೆ ಮಾಡಿದಾಗ ನನಗೆ ಒಂದಂತು ಸ್ಪಷ್ಟವಾಗುತ್ತಿದೆ ಇವೊತ್ತಿನ ಶಿಕ್ಷಣದಲ್ಲಿ ಸ್ತ್ರೀಯರ ಸ್ಥಾನಮಾನವನ್ನು ನಾವು ಎತ್ತರಕ್ಕೆ ಏರಿಸಬಹುದು, ನಮ್ಮ ಸ್ನೇಹಿತರು ಒಂದು ಮಾತನ್ನು ಹೇಳಿದರು ಶಿಕ್ಷಕರ ಸ್ಥಾನಕ್ಕೆ ನಾವು ಸ್ತ್ರೀಯರನ್ನು ನೇಮಕ ಮಾಡಿದರೆ ಆ ಮಾತ್ರ ಶಿಕ್ಷಣ ಏನಿದೆಯೊ ಅದು ಪ್ರಭಾವಶಾಲಿಯಾಗುತ್ತದೆ, ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ, ಒಳ್ಳೆಯ ಸಮಾಜ ನಿರ್ಮಾಣಕ್ಕೆ ಅದು ಸಹಾಯಕವಾಗುತ್ತದೆ. ನಾವು ಯಾವ ಶಾಲೆಗೆ ಹೋಗೋಣ ಮಾಸ್ತರಗಳಿಗಿಂತ ಮಾಸ್ತರಣಿಯರು ಯಾರಿದ್ದಾರೆ ಅವರಿಗೆ ಹೆಚ್ಚು ಮರ್ಯಾದೆ ಸಿಗುತ್ತದೆ ಮತ್ತು ಅವರು ಬೆತ್ತ ಹಿಡಿಯದೆ ಪಾಠ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಪ್ರಾಥಮಿಕ ಶಿಕ್ಷಣ ಏನಿದೆ ಆ ಶಿಕ್ಷಣ ರಂಗಕ್ಕೆ

ಮಹಿಳೆಯರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಅವರನ್ನು ಹೆಚ್ಚು ಉಪಯೋಗಿಸುವುದರಿಂದ ಬಾಲಕರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರುತ್ತದೆ. ಒಳ್ಳೆಯ ಸಂಸ್ಕಾರ ಬೀರುವುದಕ್ಕೆ ಸಾಧ್ಯವಾಗುತ್ತದೆ. ಪರಿಣಾಮವಾಗಿ ವಿದ್ಯೆಯ ರಂಗದಲ್ಲಿ ಸ್ತ್ರೀಯರದಾದ್ದಂಥ ಸ್ಥಾನವನ್ನು ಎತ್ತರಿಸಿದಹಾಗೆ ಆಗುತ್ತದೆ. ಇನ್ನೊಂದು ಮಾತು ಏನು ಎಂದು ಹೇಳಿದರೆ, ನಮ್ಮ ಸ್ತ್ರೀಯರದಾದ್ದಂಥ ಮಹಿಳಾ ಮಂಡಲಿಗಳೇನಿದ್ದಾವೆ ಅದು ಕೇವಲ ಶೋಕಿಮಂಡಲಿಗಳಾಗುವಂಥ ಸ್ಥಿತಿ ಇದೆ ಎಂದು ಒಂದು ಮಾತು ಬಂತು ಇದಕ್ಕೆ ನನ್ನ ಸಹಮತ ಇದೆ. ಬಹಳ ಮಹಿಳಾ ಮಂಡಲಿಗಳು ಏನು ಅಂಥ ಕೇಳಿದರೆ ಶ್ರೀಮಂತ ವರ್ಗದ ಮಹಿಳೆಯರಿಗೆ ಮಾತ್ರ ಅಲ್ಲಿ ಸ್ಥಾನ. ಅವರು ಸಾಯಂಕಾಲ ಹೊತ್ತುಕಳೆಯುವುದಕ್ಕೆ ಸೇರುತ್ತಾರೆ, ಅವರದೇ ಆದಂತಹ ಪ್ರತ್ಯೇಕ ವಾದಂತಹ ಕಾರ್ಯಕ್ರಮವನ್ನು ಮಾಡುತ್ತಾರೆಯೇ ಹೊರತು ಸಮಾಜಕ್ಕೆ ಹಿತವನ್ನು ಉಂಟುಮಾಡುವ, ಈ ಸಮಾಜದ ಭವಿಷ್ಯವನ್ನು ರೂಪಿಸುವ ತಮ್ಮ ಮಕ್ಕಳ ಯೋಗ್ಯತೆಯನ್ನು ರೂಪಿಸುವಂಥ ರೀತಿಯ ವ್ಯವಸ್ಥೆಯಲ್ಲಿ ನಡೆಯುತ್ತಾ ಇಲ್ಲ. ಈ ಮಹಿಳಾ ಮಂಡಲಿಗಳು ಏನಿದ್ದಾವೆ ಅದು ಮಾತೃ ಮಂಡಲಿಗಳಾಗಬೇಕೆಂದು ನನ್ನ ವಿನಂತಿ. ಮಾತೃ ಮಂಡಲಿ ಅಂತ ಅಂದರೆ ಮಕ್ಕಳನ್ನು ಶಿಕ್ಷಣದಿಂದ, ಸಂಸ್ಕಾರದಿಂದ, ಸದ್ಗುಣಗಳಿಂದ ಕೂಡಿದವರನ್ನಾಗಿ ಮಾಡುವಂತಹ ಒಂದು ಕಾರ್ಯಕ್ರಮ. ಯಾವುದಕ್ಕೆ ನೀವು ಅನುದಾನವನ್ನು ಕೊಡುತ್ತೀರಿ ಅಥವಾ ಯಾವುದನ್ನು ಸರ್ಕಾರದ ಮೂಲಕ ನೀವು ತರುತ್ತೀರಿ ಅಂತಹ ಒಂದೊಂದು ಮಹಿಳಾ ಮಂಡಲಿ ಆಗುವುದಕ್ಕಿಂತ ಮಾತೃ ಮಂಡಲಿಯಾದರೆ ಮಾತೃಸ್ಥಾನದ ಗೌರವ ಏನಿದೆಯೋ ಅದನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ. ಅದರ ಮೂಲಕವಾಗಿ ಮಕ್ಕಳಿಗೆ ಒಳ್ಳೆಯ ಭಾವನೆ, ಒಳ್ಳೆಯ ಸಂಸ್ಕಾರ, ಒಳ್ಳೆಯ ಅವಕಾಶ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಲ್ಲಿ ಸರ್ಕಾರ ಯೋಚಿಸಬೇಕಾಗಿದೆ. ಇನ್ನು ವರದಕ್ಷಿಣೆಯನ್ನು ಕುರಿತು ಒಂದು ಮಾತು ಬಂತು. ಇದು ಎಲ್ಲಾ ಕಡೆಯಲ್ಲೂ ಬರುವಂತಹದ್ದೆ. ಈ ವರದಕ್ಷಿಣೆ ಪರಿಣಾಮ ಏನು? ಹೆಣ್ಣಿಗೆ ಬಾಳು ದುಸ್ತರವಾಗುವುದು ವರದಕ್ಷಿಣೆಯ ಪರಿಣಾಮವಾಗಿ. ನಮ್ಮ ಜಿಲ್ಲೆಯ ಒಂದೆರಡು ಪ್ರಸಂಗಗಳನ್ನು ನಾನು ನೆನಪು ಮಾಡುತ್ತೇನೆ. ಒಬ್ಬಿಬ್ಬರು ಹೆಣ್ಣುಮಕ್ಕಳು ವರದಕ್ಷಿಣೆ ಕೇಳಿದ ಗಂಡಸನ್ನು ಒಲ್ಲೆ ಎಂದು ಹೇಳಿ ಮದುವೆಯಾಗದೆ ಕುಳಿತದ್ದು ನಮ್ಮ ಅನುಭವದಲ್ಲಿದೆ. ವರದಕ್ಷಿಣೆ ನೀನು ಯಾವಾಗ ಕೇಳಿದೆ, ನಾನು ಮಾರಾಟದ ಸ್ವತ್ತಲ್ಲ, ನನಗೆ ನೀನು ಗಂಡನಾಗುವುದೇ ಬೇಡ, ಕಡೆಗೆ ಆ ಹುಡುಗಿಗೆ ಗಂಡೇ ಸಿಗಲಿಲ್ಲ ಅದು ಬೇರೆ ಗಂಡಾಂತರ. ಅದಕ್ಕೆ ಈ ರೀತಿಯ ದ್ರಾಷ್ಯತೆಯನ್ನು ಹೆಣ್ಣು ತೋರಿಸಬೇಕು ಅಂತಾದರೆ ಹೆಣ್ಣು ವಿಚಾರವಂತಳಾಗಿರಬೇಕು. ಹೆಣ್ಣು ಮಾರಾಟದ ವಸ್ತುವಲ್ಲ, ದುಡ್ಡು ಕೊಟ್ಟು ಹೆಣ್ಣನ್ನು ಕೊಡುವಂಥ ದುಸ್ಥಿತಿ ಬದಲಾಗಬೇಕು ಎಂದು ಯೋಚಿಸಬೇಕು. ಆದರೆ ಈ ವರದಕ್ಷಿಣೆ ಪರಿಣಾಮವಾಗಿ ಸ್ತ್ರೀಯರಿಗೆ ಅನ್ಯಾಯವಾಗಿದೆ, ವಧುದಹನ ಆಗಿದೆ. ಇಲ್ಲೊಂದು ಸ್ವಾರಸ್ಯ ನಾನು ಗಮನಿಸುತ್ತೇನೆ.

ಮದುವೆಯಾಗಿ ಗಂಡನ ಮನೆಗೆ ಹೋಗುವಂಥ ಹೆಣ್ಣುಮಗಳು ಯಾರಿದ್ದಾಳೋ ಸನ್ಮಾನ್ಯ ಅಧ್ಯಕ್ಷರೆ, ಅವಳಿಗೆ ಕೀಟಲೆ ಕೊಡುವುದು ಮಾವ ಅಲ್ಲ, ಅತ್ತೆ. ಅವಳೂ ಒಬ್ಬ ಹೆಣ್ಣೇ, ಈ ಸತ್ಯವನ್ನು ನಾವು ಗಮನಿಸಬೇಕಾಗುತ್ತದೆ. ಈ ರೀತಿಯಲ್ಲಿ ಹೆಣ್ಣುಗಳಲ್ಲಿ ಪರಿವರ್ತನೆ ಉಂಟಾದಾಗ ಮಾನಸಿಕವಾದಂತಹ, ಒಂದು ವಿಶೇಷವಾದಂತಹ ಗುಣ, ಯೋಗ್ಯತೆ ಎದ್ದುಬಂದಾಗ ಅವಳು ನನ್ನ ಹಾಗೆ, ನಾನು ನಾಳೆ ಅತ್ತೆಯಾಗುವವಳು ಎಂಬ ಭಾವನೆ ಬಂದಾಗ ಒಂದು ರೀತಿಯಲ್ಲಿ ಪರಿವರ್ತನೆ ಆಗುವುದಕ್ಕೆ ಸಾಧ್ಯ. ಹೀಗೆ ಆಗಬೇಕು ಅಂತಾದರೆ ಅದಕ್ಕೆ ಹೆಣ್ಣು.......

ಶ್ರೀಮತಿ ಬಿ.ಟಿ.ಲಲಿತಾ ನಾಯಕ್: ಮಹಿಳೆ ಅತ್ತೆಯಾಗಿರುತ್ತಾಳೆ ಎನ್ನುವಂಥ ಮಾತಿಗೆ ನಾನು ಉತ್ತರ ಹೇಳುತ್ತೇನೆ. ಮಹಿಳೆ ಏಕೆ ಹಾಗೆ ಮಾಡುತ್ತಾಳೆ ಎಂಬುದನ್ನು ತಾವು ಆಲೋಚನೆ ಮಾಡಬೇಕು. ಮಹಿಳೆ ಬಾಲ್ಯವಿವಾಹದಿಂದ ನಾಲ್ಕು ಗೋಡೆಗಳ ನಡುವೆಯೆ ಇದ್ದರೂ, ಅವಳ ಮನಸ್ಸು ಸಂಕುಚಿತವಾಗಿರುವುದರಿಂದ ಅವಳು ಏನು ಮಾಡುತ್ತಾಳೆ ಅವಳು ವಿಶಾಲವಾಗಿ ಆಲೋಚನೆ ಮಾಡುವುದಕ್ಕೆ ಶಕ್ತಳಾಗಿಲ್ಲ. ಅಂತಹ ಒಂದು ವೈಶಾಲ್ಯತೆ ಅವಳಿಗೆ ಬರಬೇಕು ಎನ್ನುವುದೇ ಈ ಮಹಿಳಾ ಆಯೋಗದ ಉದ್ದೇಶ. ಆದ್ದರಿಂದ ಇವತ್ತು ಮಹಿಳೆಯ ತಲೆಯಲ್ಲಿ ಏನೇನು ತುಂಬಿದ್ದಾರೆ ಅವೆಲ್ಲವೂ ಮಹಿಳೆಯ ತಲೆಯಲ್ಲಿ ಎಷ್ಟು ಕುಳಿತುಬಿಟ್ಟಿದೆಯೆಂದರೆ, ಅವಳು ಧೀರ್ಘವಾಗಿ ಆಲೋಚನೆ ಮಾಡುವಷ್ಟು ಶಕ್ತಿಯನ್ನು ಇದುವರೆಗೂ ಪಡೆದಿಲ್ಲ. ಆದ್ದರಿಂದಲೇ 21ನೇ ಶತಮಾನಕ್ಕೆ ಹೋಗುತ್ತಾ ಇರುವಂಥ ಈ ಸಂದರ್ಭದಲ್ಲಾದರು ಕೂಡ ಮಹಿಳೆ ವಿಶಾಲವಾಗಿ ಆಲೋಚನೆ ಮಾಡಿ ತನ್ನ ಸೊಸೆಯನ್ನು ತಾನು ಸುಡುವಂಥ ಒಂದು ಸಂಕುಚಿತ ಭಾವನೆಯಿಂದ ಹೊರಗಡೆ ಎಳೆದುಕೊಂಡು ಬರುವುದಕ್ಕಾಗಿಯೇ ಇಂತಹ ಆಯೋಗಗಳು ಆಗುತ್ತಾ ಇರುವುದು. ಆದರೂ ಕೂಡ ನೀವೇನು ಹೇಳುತ್ತಿದ್ದೀರಾ ಅತ್ತೆ, ಸೊಸೆ ನಡುವೆ ವಿರಸ-ಜಗಳ ಎಂದು ಇಲ್ಲ ಅತ್ತೆ ಸೊಸೆ ಜಗಳ; ಅತ್ತೆ ಸುಡುತ್ತಾಳೆ ಹೀಗೆ ಅನ್ನುವಂಥ ಮಾತು ಏಕೆ ಬರುತ್ತಿದೆಯೆಂದರೆ ಈ ಪುರುಷ ಪ್ರಧಾನವಾದ ಸಮಾಜದಲ್ಲಿ ಮಹಿಳೆ ಇನ್ನೂ ಮಾನಸಿಕವಾಗಿ ಬೆಳವಣಿಗೆ ಹೊಂದುವುದಕ್ಕೆ ಸಾಧ್ಯ ಆಗಿಲ್ಲ. ಅಂತಹ ಒಂದು ಸಾಧ್ಯತೆ ಬಗ್ಗೆ ನಾವೆಲ್ಲರೂ ಕೂಡ ಆಲೋಚನೆ ಮಾಡಬೇಕು ಎನ್ನುವುದೆ ಇಲ್ಲಿ ಮುಖ್ಯ.

ಶ್ರೀ ಕುಂಬಳೆ ಸುಂದರರಾವ್: ಸನ್ಮಾನ್ಯ ಅಧ್ಯಕ್ಷರೆ, ಪುರುಷ ಪ್ರಧಾನವಾದ ಸಮಾಜ ಎಂದು ಸನ್ಮಾನ್ಯ ಸಚಿವರು ಹೇಳಿದರು ಸಂತೋಷ. ಆದರೆ ಈ ಪುರುಷ ಪ್ರಧಾನವಾದ ಸಮಾಜದಲ್ಲಿ ಪುರುಷರೆ ಬರೆದಂಥ ಯಾವುದೇ ಸೂಕ್ತಿಗಳಲ್ಲಿ ಹೆಣ್ಣಿಗೆ ಕೊಟ್ಟಂಥ ಸ್ಥಾನವನ್ನು ನಾವು ಸ್ವಲ್ಪ ಗಮನಿಸಬೇಕಾಗಿದೆ. ''ಕಾರ್ಯೆಸು ದಾಸಿ, ಕರುಣೆಸು ಮಂತ್ರಿ ಇಂತಹ ಸದ್ಗುಣಗಳನ್ನು ಯಾವ ಹೆಣ್ಣಿನಲ್ಲಿ ಆರೋಪ ಮಾಡಿದರೂ ಅದು ಪುರುಷರೇ ಮಾಡಿದ್ದುದು ಅಂಥ ಆದರೆ ಹೆಣ್ಣಿಗೆ ಅವಗಣನೆ ಮಾಡುವುದಕ್ಕೆ ಪುರುಷರು ಹೋಗಿಲ್ಲ ಅಂತ ಆಗುತ್ತದೆ. ಇನ್ನೊಂದು ಶ್ಲೋಕವನ್ನು ನಾನು ಹೇಳುವುದಕ್ಕೆ

ಇಷ್ಟಪಡುತ್ತೇನೆ. ಹೆಣ್ಣು ಹೇಗಿರಬೇಕು ಎಂದು ಕೇಳಿದರೆ ಪುರುಷ ಪ್ರಧಾನವಾದ ಸಮಾಜದಲ್ಲಿ ಪುರುಷರದ್ದೆ ಮಾತು, ''ಪ್ರಿಯಂವದ, ಪಾತಕುಶಲ, ಪ್ರೇಕ್ಷಣೀಯ, ಪತಿವ್ರತ ಪುತ್ರಸು, ಪಂಚಪೈರ್ನಾರಿ, ಭುವಿ ಪ್ರಾಚ್ನೋತಿಗೌರವಂ' ಇದು ಹೆಣ್ಣಿಗೆ ಕೊಟ್ಟಂಥ ವಿಶಿಷ್ಟವಾದಂಥ ಒಂದು ವ್ಯಾಖ್ಯಾನ. ಗಂಡಸರೇ ಹೆಣ್ಣಿಗೆ ಈ ಸ್ಥಾನವನ್ನು ಕೊಟ್ಟಿದ್ದಾರೆ....

ಶ್ರೀಮತಿ ಬಿ.ಟಿ.ಲಲಿತಾ ನಾಯಕ್: ಪುರುಷ ಹೇಗೆ ಇರಬೇಕೆಂಬುದನ್ನು ತಾವು ಹೇಳಿ.

ಶ್ರೀ ಕುಂಬಳೆ ಸುಂದರರಾವ್: ಅದನ್ನು ಖಂಡಿತ ಹೇಳುತ್ತೇನೆ. ಪುರುಷ ಇದನ್ನು ಹೇಳಿದವನು ಎಷ್ಟು ಒಳ್ಳೆಯವನಿರಬಹುದು ಎಂದು ನೀವು ಯೋಚನೆ ಮಾಡಿ. ಪುರುಷ ಆಯೋಗ ತಂದಾಗ ಅದು ವಿಮರ್ಶೆಯಾಗಲಿ, ಒಟ್ಟಿನಲ್ಲಿ ನನಗೆ ಏನು ತೋರುತ್ತದೆ ಆಂತ ಅಂದರೆ..

ಶ್ರೀಮತಿ ಬಿ.ಟಿ.ಲಲಿತನಾಯಕ್: ಸ್ತ್ರೀಯರು ಹೇಗಿರಬೇಕೆಂದು ಸಾವಿರಾರು ಜನ ಹೇಳಿದ್ದಾರೆ, ಪುರುಷರು ಹೇಗಿರಬೇಕೆಂಬುದನ್ನು ಹೇಳಿ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ಒಂದು ಕ್ರಿಯಾಲೋಪ. ಈ ವ್ಯಾಜ್ಯ ಎಲ್ಲಿಗೆ ತಲುಪತ್ತೋ ಇನ್ನು ಗೊತ್ತಿಲ್ಲ. ದಯಮಾಡಿ ತಾವು ಇದನ್ನು ಸ್ವಲ್ಪ ಬಹಳ ಧೀರ್ಘವಾಗಿ ಎಚ್ಚರಿಕೆಯಿಂದ.. ಏಕೆಂದರೆ ಅವರು ಬಹಳ ಕೋಪದಿಂದ ಹೇಳುತ್ತಿದ್ದಾರೆ. ಇವರು ಸ್ವಲ್ಪ ಹೆಚ್ಚುಕಡಿಮೆ ಕೋಪಕ್ಕೆ ಬರುತ್ತಿದ್ದಾರೆ. ನಾವು ಇಲ್ಲಿ ಬಂಗಾರಪ್ಪನವರು ಮಾತನಾಡಬೇಕೆಂದು ಎತ್ತಿ ಕಟ್ಟುತ್ತಿದ್ದೇವೆ ಈಗ ಅದು ತೀರ್ಮಾನವಾಗಿದೆ. ಇದಾದ ಮೇಲೆ ನಾಗೇಗೌಡರು ಮಾತನಾಡುತ್ತಾರೆ. ಇವೆಲ್ಲಾ ಬಹಳ ಚೆನ್ನಾಗಿದೆ, ಚರ್ಚೆ ಆಗಬೇಕಾಗಿದೆ.

ಅಧ್ಯಕ್ಷರು : ಇಲ್ಲ... ನಾನು ಇನ್ನೊಂದು ವಿಧೇಯಕವನ್ನು ಮುಗಿಸಬೇಕಾಗಿದೆ ಸುಂದರರಾಯರೆ ಬೇಗ ಮುಗಿಸಿ ಬಿಡಿ.

ಶ್ರೀ ಕುಂಬಳೆ ಸುಂದರರಾವ್: ನಾನು ಬೇಗ ಮುಗಿಸುತ್ತೇನೆ, ಬಹಳ ಧೀರ್ಘವಾಗಿ ಹೋಗುವ ಉದ್ದೇಶ ನನಗೆ ಇಲ್ಲ. ಮಹಿಳೆಯರಿಗೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅವಕಾಶ ಕೊಡಬೇಕೆನ್ನುವುದನ್ನು ನಾನು ಒತ್ತಿ ಹೇಳುತ್ತಿದ್ದೇನೆ. ಹೆಚ್ಚಿನ ಅವಕಾಶದ ಜೊತೆಯಲ್ಲಿ ಇನ್ನೊಂದು ದುರಂತ ಈ ಮೊದಲೇ ಈ ಸಭೆಯಲ್ಲಿ ಪ್ರಸ್ತಾಪವಾಗಿದೆ ಅದನ್ನು ಮತ್ತೊಮ್ಮೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಾ ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಶೌಚಾಲಯ ಇಲ್ಲದಂಥ ಒಂದು ದುಸ್ಥಿತಿ ಇದೆ. ನಿಮ್ಮ ಈ ಆಯೋಗದಲ್ಲಿ ಅಂಥ ದೋಷವನ್ನು ಪರಿಹಾರ ಮಾಡುವುದಕ್ಕೆ ಪ್ರತ್ಯೇಕವಾದಂಥ ಒಂದು ವ್ಯವಸ್ಥೆ ಇರುವುದು ಒಳ್ಳೆಯದು. ಅದು ಅವಶ್ಯ ಆಗಬೇಕು ಎಂದು ಹೇಳುತ್ತಾ ಇಷ್ಟೊಂದು ವಿಚಾರವನ್ನು ಪ್ರಪ್ರಥಮವಾಗಿ ವಿಧಾನಸಭೆಯಲ್ಲಿ ಮಂಡಿಸುವುದಕ್ಕಾಗಿ ಕೃತಜ್ಞತೆ ಹೇಳುತ್ತಾ ನನ್ನ ಮಾತುಗಳನ್ನು ಉಪಸಂಹರಿಸುತ್ತಿದ್ದೇನೆ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್: ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ವಿಧೇಯಕವನ್ನು ಮಾನ್ಯ ಸದಸ್ಯರುಗಳು ಮಾನ್ಯ ಪ್ರಮಿಳಾ ನೇಸರ್ಗಿಯವರು ಸೇರಿದಹಾಗೆ ಎಲ್ಲಾ ಮಾನ್ಯ ಸದಸ್ಯರುಗಳು ಸ್ವಾಗತ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ. ಒಂದು ನೋವಿನ ಸಂಗತಿಯೆಂದರೆ, ಬಹಳಷ್ಟು ಜನ ಇದನ್ನು ಕನ್ನಡದಲ್ಲಿ ಹೇಳಿದರು ಕೂಡ ಮಾನ್ಯ ಪ್ರಮಿಳಾ ನೇಸರ್ಗಿಯವರು ಮತ್ತು ಇನ್ನೂ ಒಂದೆರಡು ಮೂರು ಜನ ಸದಸ್ಯರು ಕಸ್ತೂರಿ ಕನ್ನಡದಲ್ಲಿದ್ದರೂ ಕೂಡ ಅದನ್ನು ಬಿಟ್ಟು ಅವರು ಬಹಳ ತಿಣಕಾಡಿ ಇಂಗ್ಲೀಷ್‌ನಲ್ಲಿ ಹೇಳಿ ಅದರ ಅರ್ಥಕ್ಕಾಗಿ ಬಹಳಷ್ಟು ಗೋಳಾಡಿದರು, ಇದು ಸರಿಯಲ್ಲ. ಅದು ಸರಿಯಿಲ್ಲ ಎನ್ನುವಂಥ ಮಾತನ್ನು ಹೇಳಿದರು. ಅದು ಕನ್ನಡದಲ್ಲಿ ಆ ರೀತಿ ತಪ್ಪಾಗಿದ್ದರೆ ನಾನು ಎತ್ತಿಕೊಳ್ಳುತ್ತಿದೆ. ಆದರೂ ಅದು ಇಂಗ್ಲೀಷ್‌ನಲ್ಲಿ ಇದ್ದುದರಿಂದ ಇದು ಕರ್ನಾಟಕದಲ್ಲಿ ಅಷ್ಟೇನು ಪ್ರಮುಖವಲ್ಲ ಎಂದು ಹೇಳಿದ್ದಾಗ್ಯೂ ಕೂಡ ಮಹಿಳಾ ಚಟುವಟಿಕೆ ಅನ್ನುವಂಥ ಪದಕ್ಕೆ ಆಕ್ಟಿವಿಸ್ಟ್ ಅನ್ನುವುದು ಬಂದಿದೆ. ಅದು ಮಹಿಳಾ ಕಾರ್ಯಕರ್ತರು ಎನ್ನುವುದನ್ನು ನಾವು ಮುಂದೆ ತಿದ್ದಿಕೊಳ್ಳುತ್ತೇವೆ. ಎನ್ನುವ ಮಾತನ್ನು ತಮಗೆ ಹೇಳುತ್ತಿದ್ದೇನೆ. ಇದು ಅಗತ್ಯ ಇಲ್ಲ ಆದರೂ ಕೂಡ ನಾನು ಹೇಳುತ್ತಿದ್ದೇನೆ. ಏಕೆಂದರೆ ಕನ್ನಡದಲ್ಲಿ ತಿದ್ದುವುದು ನಮಗೆ ಬಹಳ ಮುಖ್ಯ. ಆಯೋಗದ ಅಧ್ಯಕ್ಷರು ಪುರುಷರಾದರೂ ಕೂಡ ಏನು ತಪ್ಪಿಲ್ಲ ಎನ್ನುವ ಮಾತನ್ನು ನನ್ನ ಸೋದರಿ ಹೇಳಿದರು, ಅಂತಹ ಧಾರಾಳತನ ನಮಗೆ ಇಲ್ಲ. ಅದಕ್ಕೆ ಮಹಿಳೆಯರೇ ಅಧ್ಯಕ್ಷರಾಗಬೇಕು. ಮಹಿಳೆಯ ನೋವನ್ನು ಮಹಿಳೆ ಮಾತ್ರ ಬಲ್ಲಳು, ಯಾರು ಮಹಿಳೆ ಆಗಿರುತ್ತಾಳೆ ಅವಳಿಗೆ ಆ ನೋವು ಗೊತ್ತಿರುತ್ತದೆ. ಆದರೆ ಬಹಳಷ್ಟು ಜನ ಪುರುಷರು ಮಹಿಳೆಯನ್ನು ಕಣ್ಣಿನಿಂದ ನೋಡುವಂಥ ಮತ್ತು ಮಹಿಳೆಯ ಹೃದಯವನ್ನು..... ಏನು ಆಗಿಲ್ಲ ಕುಳಿತುಕೊಳ್ಳಿ ಅದು ನನ್ನ ಅಭಿಪ್ರಾಯ ಕೂಡ.

ಅಧ್ಯಕ್ಷರು : ಲಲಿತನಾಯಕ್‌ರವರೆ ಈಲ್ಡ್ ಆಗಿ ಪರ್ವಾಗಿಲ್ಲ ಏನು ಹೇಳುತ್ತಾರೆ ಎಂದು ಕೇಳೋಣ.

ಶ್ರೀಮತಿ ಎನ್.ಜ್ಯೋತಿರೆಡ್ಡಿ: ನಾನು ಅವರನ್ನು ಟೀಕೆ ಮಾಡಲಿಲ್ಲ, ನಾನು ಹೇಳಿದ್ದುದು ಮಹಿಳೆಯು ಕಷ್ಟ ಸುಖ ತಿಳಿದುಕೊಳ್ಳಲಿಕ್ಕೆ ಪುರುಷರು ಅಧ್ಯಕ್ಷರಾದರು ಪರವಾಗಿಲ್ಲ ಆದರೂ ಸಹ ಒಬ್ಬ ಮಹಿಳೆಯ ನೋವನ್ನು ಇನ್ನೊಬ್ಬ ಮಹಿಳೆ ತುಂಬಾ ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಅದ್ದರಿಂದ ಮಹಿಳೆಯರಿಗೆ ಕೊಡಿ ಎಂದು ನಾನು ಮತ್ತೆ ಹೇಳಿದೆ ಅದನ್ನು ಸಚಿವರು ಕೇಳಿಸಿಕೊಳ್ಳಲಿಲ್ಲ, ನನಗೂ ಅಷ್ಟು ಉದಾರ ಸ್ವಭಾವ ಇಲ್ಲ. ಆದರೂ ಆಗಬಹುದು ಅಂತ ಮಾತ್ರ ಹೇಳಿದೆ ಅಷ್ಟೆ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್: ಜ್ಯೋತಿರೆಡ್ಡಿಯವರ ಬಗ್ಗೆ ನನಗೆ ಗೌರವ ಇದೆ. ಅವರು ಯಾವಾಗಲೂ ಪ್ರಗತಿಪರರು.

ಒಬ್ಬ ಮಾನ್ಯ ಸದಸ್ಯರು: ಮಹಿಳೆಯರ ನೋವು ಮಹಿಳೆಯರಿಗೆ ಗೊತ್ತಿದ್ದರೆ ಅತ್ತೆಗಳಿಂದಲೇ ಸೊಸೆಯವರ ಜೀವ ಹಾನಿಯಾಗುತ್ತಿರುವುದನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಮಹಿಳೆಯರೆ ಈಗ ಮುಖ್ಯವಾಗಿ ಇರುವುದು.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್: ಅಂತಹ ಅತ್ತೆಯನ್ನು ಕಳುಹಿಸುವುದಕ್ಕೆಯೇ ಈ ಆಯೋಗ. ಅಂತಹ ಕೆಟ್ಟ ಅತ್ತೆಯರು ಕೆಟ್ಟ ಮನಸ್ಸಿನ ಸೊಸೆಯರೆಲ್ಲರೂ ಕೂಡ ವಿಶಾಲವಾಗಿ ಆಲೋಚನೆ ಮಾಡಲಿ. ಒಂದು ಅರಿವು ಮೂಡಲಿ ಎಂಬ ಭಾವನೆ ಈ ಒಂದು ಆಯೋಗಕ್ಕೆ ಇದೆ. ಅದಕ್ಕಾಗಿ...

ಶ್ರೀ ರಮಾನಾಥ ರೈ: ದೊಡ್ಡ ಸಂಖ್ಯೆಯಲ್ಲಿ ಪುರುಷ ಸದಸ್ಯರಿರತಕ್ಕಂಥ ಈ ಸದನದಲ್ಲಿ ನಾವು ಈ ಆಯೋಗವನ್ನು ಮಂಡನೆ ಮಾಡುವುದಕ್ಕೆ ಸ್ವಾಗತ ಮಾಡಿ ಒಪ್ಪಿಕೊಳ್ಳುತ್ತೇವೆ. ಅದಕ್ಕಿಂತ ದೊಡ್ಡ ವಿಚಾರ ಮತ್ತೆ ಯಾವುದಿದೆ? ಮತ್ತೆ ಪುರುಷರಿಗೆ ಮಹಿಳೆಯರ ಬಗ್ಗೆ ಅವರ ನೋವು ನಲಿವಿನ ಬಗ್ಗೆ ಅಷ್ಟು ಅನುಕಂಪ ಇರುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಸನ್ಮಾನ್ಯ ಮಂತ್ರಿಗಳು ಇದನ್ನು ವಾಪಸ್ಸು ತೆಗೆದು ಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಇದು ಬಹಳ ದೊಡ್ಡ ಮಾತು.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೇ, ಮಹಿಳೆಯನ್ನು ಮತ್ತು ಮಹಿಳೆಯರ ನೋವನ್ನು ಯಾರ್‍ಯಾರು ಅರ್ಥ ಮಾಡಿಕೊಂಡಿದ್ದಾರೆ ಎಂಬುದು ಬಹಳ ಗಂಭೀರವಾದಂತಹ ವಿಚಾರ. ಮಹಿಳೆಯರಿಗೆ ಯಾವ ಯಾವ ನೋವಿದೆ..

ಶ್ರೀ ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೇ ಮಹಿಳೆಯರಿಗೆ ಪ್ರಮುಖವಾಗಿ ಮೂರು ರೀತಿಯ ನೋವುಗಳು ಇರುತ್ತವೆ. ಅದು ಅವರಿಗೆ ಗೊತ್ತಿದೆ, ನಾನು ಬಿಡಿಸಿ ಹೇಳುವಂತಿಲ್ಲ. ಆ ನೋವುಗಳು ಯಾವುವು ಎಂದರೆ These words are explained as ordered by the speaker.

ಶ್ರೀಮತಿ ಪ್ರಮಿಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೇ, ಈ ರೀತಿ ಮಾತನಾಡುವುದಕ್ಕೆ ಸಭೆ ಇರುವುದಾದರೆ, ದಯವಿಟ್ಟು ತಾವು ಕ್ಷಮಿಸಬೇಕು. ನಾವು ಇಲ್ಲಿ ಮಹಿಳಾ ಆಯೋಗದ ಬಗ್ಗೆ ಬಹಳ ಗಂಭೀರವಾದಂತಹ ವಿಷಯವನ್ನು ಚರ್ಚೆ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀಮತಿ ಎಂ.ಪ್ರಮಿಳಾ ನೇಸರ್ಗಿ: ಈ ರೀತಿ ಮಾತನಾಡುವುದು ಸರಿಯಲ್ಲ. ಇದು ಸಭ್ಯತೆ ಅಲ್ಲ. ಸದನದಲ್ಲಿ ಮಹಿಳಾ ಸದಸ್ಯರೂ ಇದ್ದಾರೆ. ಮಾನ್ಯ ಸದಸ್ಯರು ಈ ರೀತಿ ಮಾತನಾಡಬಾರದು.

(ಗೊಂದಲ)

ಅಧ್ಯಕ್ಷರು: ಪ್ರಮಿಳಾ ನೇಸರ್ಗಿಯವರೇ ತಾವು ಹೇಳುವುದು ನನಗೆ ಅರ್ಥವಾಗುತ್ತದೆ. I will have it examined.

(ಗೊಂದಲ)

ಶ್ರೀಮತಿ ಎಂ.ಪ್ರಮಿಳಾ ನೇಸರ್ಗಿ: There is a limit. Why is this? ಮಾನ್ಯ ಸದಸ್ಯರು ಇಲ್ಲಿ ಬಾಯಿ ಬಂದಂತೆ ಮಾತನಾಡಬಹುದು ಎಂದು ತಿಳಿದುಕೊಂಡಿದ್ದರೆ ಅದು ತಪ್ಪು.

(ಗೊಂದಲ)

ಶ್ರೀಮತಿ ಎನ್.ಜ್ಯೋತಿರೆಡ್ಡಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ರೀತಿ ಮಾತನಾಡುವುದು ಸರಿಯಲ್ಲ. ದಯವಿಟ್ಟು ತಾವು ನಮ್ಮ ರಕ್ಷಣೆಗೆ ಬರಬೇಕು.

(ಗೊಂದಲ)

ಶ್ರೀಮತಿ ಪ್ರಮಿಳಾ ಎಸ್.ನೇಸರ್ಗಿ: ಮಹಿಳೆಯರ ಬಗ್ಗೆ ಈ ರೀತಿಯಾಗಿ ಲಘುವಾಗಿ ಮಾತನಾಡುವುದು ತಪ್ಪು.

(ಗೊಂದಲ)

Mr.Speaker: I will have it examined.

(ಗೊಂದಲ)

ಶ್ರೀಮತಿ ಪ್ರಮಿಳಾ ಎಸ್.ನೇಸರ್ಗಿ: ಮಾನ್ಯ ಅಧ್ಯಕ್ಷರೇ, ಈ ರೀತಿ ಮಾತನಾಡತಕ್ಕ ಸದಸ್ಯರನ್ನು ನೀವು ಸದನದಿಂದ ಎಕ್ಸ್‌ಪೆಲ್ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ನಾರಾಯಣಸ್ವಾಮಿ: ಮಾನ್ಯ ಸದಸ್ಯರಾದ ರಾಜಣ್ಣನವರು ಮಾತನಾಡತಕ್ಕ ರೀತಿ ಸರಿಯಲ್ಲವೆಂಬುದನ್ನು ನಾವು ಒಪ್ಪುತ್ತೇವೆ. ಆದರೆ ಅದಕ್ಕೆ ಮಾನ್ಯ ಸದಸ್ಯರಾದ ಪ್ರಮೀಳರವರು ಇಷ್ಟೊಂದು ಆವೇಶ ಪಡಬೇಕಾಗಿಲ್ಲ.

ಅಧ್ಯಕ್ಷರು: ನಾರಾಯಣ ಸ್ವಾಮಿಯವರೇ, ತಾವು ಎಲ್ಲಾ ವಿಷಯದ ಬಗ್ಗೆಯೂ ಮಧ್ಯೆ ಮಾತನಾಡುತ್ತೀರಿ.

(ಗೊಂದಲ)

ಶ್ರೀಮತಿ ಬಿ.ಟಿ.ಲಲಿತಾನಾಯಕ್: ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರುಗಳು ಹಲವಾರು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಇಲ್ಲಿ ಮಾನ್ಯ ಸದಸ್ಯರೊಬ್ಬರು ಆಡಿದಂತಹ ಮಾತುಗಳನ್ನು ಆಡುವಂತಹ ಮನಸ್ಸುಗಳು ಇಲ್ಲಿದೇ ಇದ್ದರೆ ಈ ಆಯೋಗದ ಅವಶ್ಯಕತೆ ಇರುತ್ತಿರಲಿಲ್ಲ. ಅಂತಹ ಜನಗಳು ಇರುವುದರಿಂದಲೇ ವಿಧೇಯಕವನ್ನು ತರಬೇಕಾಗಿದೆ. ಯಾರು ಮಹಿಳೆಯರನ್ನು ಅಗೌರವದಿಂದ ಕಾಣುತ್ತಿದ್ದಾರೆ, ಯಾರು ಮಹಿಳೆಯರನ್ನು ಶೋಷಣೆಗೆ ಒಳಪಡಿಸುತ್ತಿದ್ದಾರೊ, ಅಂತಹವರಿಗಾಗಿಯೇ ಈ ಮಸೂದೆಯನ್ನು ತರುತ್ತಿದ್ದೇವೆ. ಆದುದರಿಂದ ನಾವು ಯಾರು ಏನು ಹೇಳಿದರೂ ಕ್ಷಮಿಸಬಹುದು. ಇಡೀ ಸಮಸ್ತ ದೇಶದಲ್ಲೇ ಇಂತಹದ್ದು ನಡೆಯುತ್ತಿರುವಾಗ ಈ ಸದನದಲ್ಲಿ ಒಬ್ಬಿಬ್ಬರು ಮೂವರು ಇಂತಹವರು ಇದ್ದಾರೆ ಎಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ನಮಗೆ ನೋವು ಆಗಿದ್ದರೂ ಕೂಡ ನಾವು ಇದನ್ನು ಸಹಿಸಿಕೊಳ್ಳುತ್ತೇವೆ. ಹೆಣ್ಣು ಎಂದರೆ ಏನು ಎನ್ನುವುದು ಅವರು ಹೇಳಿಬಿಟ್ಟರು.

ಶ್ರೀ ಎಂ.ಸಿ.ನಾಣಯ್ಯ : ನಮ್ಮ ಸಂಸದೀಯ ಚೌಕಟ್ಟಿನೊಳಗೆ ವಿಟ್ಸ್, ಹ್ಯೂಮರ್ ಇದೆಲ್ಲಾ ಬೇಕಾಗುತ್ತದೆ. ಆದರೆ ಸಂಸದೀಯ ಚೌಕಟ್ಟಿನ ಮೇರೆಯನ್ನು

ಬಿಟ್ಟು ನಾವು ಹೋಗಬಾರದು ಎನ್ನತಕ್ಕ ಮಾತನ್ನು ನಾವೆಲ್ಲರೂ ಕೂಡ ಅರ್ಥಮಾಡಿಕೊಂಡಿದ್ದೇವೆ. ನನ್ನ ಸಹೋದ್ಯೋಗಿಯಾಗಿರತಕ್ಕ ಶ್ರೀಮತಿ ಬಿ.ಟಿ.ಲಲಿತಾ ನಾಯಕ್ ಅವರಿಗೆ ನೋವು ಆಗಿರತಕ್ಕ ಮಾತನ್ನು ಯಾರೂ ಇಲ್ಲಿ ಆಡಲಿಲ್ಲ ಎನ್ನತಕ್ಕ ಮಾತನ್ನು ನಾನಿಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಆದರೂ ಕೂಡ ನಾವು ಚೌಕಟ್ಟಿನ ಮೇರೆಯನ್ನು ಮೀರಿ ಮಾತನಾಡುವುದು ಸರಿಯಲ್ಲ. ಈ ಸದನದಲ್ಲಿ ಎಲ್ಲರಿಗೂ ಕೂಡ ಗೌರವ ಇದೆ ಎನ್ನತಕ್ಕ ಮಾತನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಯಾರಿಗೂ ಕೂಡ ಅಗೌರವ ಮಾಡಬೇಕೆಂಬ. ಉದ್ದೇಶ ಈ ಸದನದಲ್ಲಿ ಯಾರಿಗೂ ಇಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಮಾನ್ಯ ಸದಸ್ಯರುಗಳು ಮಾತನಾಡತಕ್ಕ ಶೈಲಿ, ಸ್ವಲ್ಪ ಆ ಕಡೆ ಈ ಕಡೆ ಆದಾಗ ನಮ್ಮ ಡಿಬೇಟ್ಸ್ ಸ್ವಲ್ಪ ಮುಟ್ಟಿಗೆ Drat ಆದಾಗ ಸ್ವಲ್ಪ ಲೈವ್ಲಿಯಾಗುತ್ತದೆ ಎಂದು ಹೇಳಿ ಪಾರ್ಲಿಮೆಂಟರಿ ರಿಪಾರ್ಟಿಸ್ ಆಗಿ ವಿಟ್ಸ್ ಅಂಡ್ ಹ್ಯೂಮರ್ಸ್ ನಡೆಯುತ್ತದೆ. ಆದರೆ ಯಾರೂ ಕೂಡ ಚೌಕಟ್ಟಿನ ಹೊರಗೆ ಹೋಗುವುದಕ್ಕೆ ಮಾನ್ಯ ಸಭಾಧ್ಯಕ್ಷರು ಅವಕಾಶ ಕೊಡುವುದಿಲ್ಲ ಎಂದು ನಾನು ನಂಬಿದ್ದೇನೆ. ಮಾನ್ಯ ಸಚಿವರು ತಾವು ದಯವಿಟ್ಟು ಮುಂದುವರೆಸಿ.

Mr.Speaker: I will examine it.

ಶ್ರೀಮತಿ ಬಿ.ಟಿ.ಲಲಿತಾನಾಯಕ್: ಸಾಕಷ್ಟು ಜನ ಸಾಮಾನ್ಯ ಸದಸ್ಯರುಗಳು ಕೆಲವು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಸಾಕಷ್ಟು ಸಲಹೆಗಳನ್ನೂ ಕೊಟ್ಟಿದ್ದಾರೆ. ಆ ಸಲಹೆಗಳನ್ನು ನಾವು ಖಂಡಿತವಾಗಿಯೂ ಸ್ವೀಕಾರ ಮಾಡುತ್ತಿದ್ದೇವೆ. ಈ ಆಯೋಗದಿಂದ ರಚಿಸಲ್ಪಡುವಂತಹ ಸಮಿತಿಗಳು ಒಂದು ನಿರ್ಧಿಷ್ಟ ವಿಷಯವನ್ನು ಪರಿಶೀಲಿಸುವಾಗ ಆ ವಿಚಾರದಲ್ಲಿ ತಜ್ಞರಾದಂತಹ ವ್ಯಕ್ತಿಗಳನ್ನು ನಾವು ಸಮಿತಿಗಳಿಗೆ ನೇಮಕ ಮಾಡಿಕೊಳ್ಳುತ್ತೇವೆ. ಉದಾಹರಣೆಗೆ, ಆರೋಗ್ಯ, ಕಾನೂನು, ಇಂತಹದರಲ್ಲಿ ಪರಿಣಿತರಾದ ವ್ಯಕ್ತಿಗಳನ್ನು ತೆಗೆದುಕೊಳ್ಳಬೇಕೆಂದಿರುವುದರಿಂದ ಮಾನ್ಯ ಸದಸ್ಯರಿಗೆ ಈ ಬಗ್ಗೆ ಯಾವುದೇ ಅನುಮಾನ ಬೇಡ. ಯಾರ್ಯಾರೋ ಸದಸ್ಯರುಗಳನ್ನು ನೇಮಕ ಮಾಡಿಕೊಂಡು ಒಂದು ರೀತಿಯ ಬೇರೆಯದಾದ ಅಭಿಪ್ರಾಯವನ್ನು ತಾಳಬಹುದು. ಎನ್ನುವ ಅನುಮಾನಗಳನ್ನು ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿದರು. ಆ ರೀತಿಯ ಅನುಮಾನ ಬೇಡ. ಆಯಾ ವಿಷಯಗಳಲ್ಲಿ ಯಾರು ಪರಿಣಿತರಿದ್ದಾರೆ, ಅಂತಹವರನ್ನು ತೆಗೆದುಕೊಳ್ಳುವುದಕ್ಕೆ ಮಸೂದೆಯಲ್ಲಿ ಸಾಧ್ಯವಿದೆ ಎನ್ನುವುದು ಒಂದು ಮುಖ್ಯವಾದಂತಹ ವಿಷಯ. ಇನ್ನು ನಿಯಮಾವಳಿಗಳನ್ನು ನಾವು ಶೀಘ್ರದಲ್ಲೇ ರೂಪಿಸುತ್ತೇವೆ. ಮಾನ್ಯ ಸದಸ್ಯರುಗಳು ನಿಯಮಾವಳಿಗಳು ಈ ರೀತಿ ಇರಬೇಕು, ಆ ರೀತಿ ಇರಬೇಕು ಎಂಬ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಮಸೂದೆ ಅಂಗೀಕಾರವಾದ ಕೂಡಲೇ ನಾವು ನಿಯಮಾವಳಿಗಳನ್ನು ರೂಪಿಸುತ್ತೇವೆ. ರಾಷ್ಟ್ರೀಯ ಕಾನೂನು ಶಾಲೆಯಿಂದ ರಚಿಸಲ್ಪಟ್ಟಿರುವ ಈ ಕರಡು ಮಸೂದೆಯಲ್ಲಿ ಭಾರತೀಯ ದಂಡ ಸಂಹಿತೆ ಕೆಳಗೆ ದಂಡ ವಿಧಿಸುವಂತಹ ಅಧಿಕಾರವನ್ನು ಮಹಿಳಾ ಆಯೋಗಕ್ಕೆ ಕೊಟ್ಟಿಲ್ಲ. ಆಯೋಗಕ್ಕೆ

ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಬಹಳಷ್ಟು ಮಾನ್ಯ ಸದಸ್ಯರುಗಳು ಸಲಹೆ ಮಾಡಿದರು. ಆದರೆ ಈ ರೀತಿಯ ಅಧಿಕಾರವನ್ನು ನ್ಯಾಯಾಲಯಗಳು ಮಾತ್ರ ಚಲಾಯಿಸುವುದಕ್ಕೆ ಸಾಧ್ಯ. ಈ ಆಯೋಗ ಇರುವುದು ನ್ಯಾಯವನ್ನು ಕೊಡುವುದಕ್ಕೆ ಮತ್ತು ಅದಕ್ಕೆ ಒಂದು ಸೀಮಿತವಾದ ಅರ್ಥ ಇದೆಯೇ ಹೊರತು ಅದೇ ಒಂದು ನ್ಯಾಯಾಲಯದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಕಾನೂನು ಬಲ್ಲವರಾದ ತಮಗೆಲ್ಲರಿಗೂ ತಿಳಿದಂತಹ ವಿಷಯವಾಗಿದೆ. ಆದುದರಿಂದ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಅಂತಹ ಒಂದು ಮಿತಿಮೀರಿದ ಅಧಿಕಾರ ನೀಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಅದರದೇ ಆದಂತಹ ಒಂದು ಇತಿಮಿತಿ ಇದ್ದರೂ ಕೂಡ ಅದು ಒಬ್ಬ ಮಹಿಳೆಗೆ ಯಾವ ಯಾವ ರೀತಿಯಲ್ಲಿ ನ್ಯಾಯವನ್ನು ಒದಗಿಸಬಹುದು ಎಂಬುದನ್ನು ತಾವು 10ನೇ ಭಾಗದಲ್ಲಿ ಗುರುತಿಸಬಹುದು. ಬಹಳಷ್ಟು ಅಧಿಕಾರ ಈ ಆಯೋಗಕ್ಕೆ ಇದೆ. ಈ ಆಯೋಗ ಮೂರು ತಿಂಗಳಲ್ಲಿ ಒಮ್ಮೆ ಮಾತ್ರ ಮೀಟಿಂಗ್ ಕರೆಯಬಹುದು. ಅಥವಾ ಕರೆಯದಿರಬಹುದು ಎಂಬ ಅನುಮಾನವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದರು. ಆದರೆ ಮೂರು ತಿಂಗಳ ಅವಧಿಯಲ್ಲಿ ಆಯೋಗವು ಎಷ್ಟು ಸಾರಿ ಬೇಕಾದರೂ ಸಭೆಯನ್ನು ಕರೆಯಬಹುದು. ಒಂದಕ್ಕಿಂತ ಹೆಚ್ಚು ಸಲ ಆಯೋಗವು ಸಭೆಯನ್ನು ಕರೆಯುತ್ತದೆ. ಅಂತಹ ಒಂದು ನಿಯಮಾವಳಿ ಅದರಲ್ಲಿದೆ. ಅಂದರೆ ಮೂರು ತಿಂಗಳ ನಂತರ ಅಂತಲ್ಲ. ಮೂರು ತಿಂಗಳೊಳಗಾಗಿ ಒಂದು ಅಥವಾ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಯಮಾವಳಿಗಳನ್ನು ಇನ್ನು ಮುಂದೆ ಮಾಡಬೇಕು. ತಾವು ಯೀಲ್ಡ್ ಆದರೆ ಒಂದು ಮಾತು ಹೇಳುತ್ತೇನೆ. ನಾನೇಕೆ ಆ ಸಲಹೆಯನ್ನು ಮಾಡಿದೆ ಎಂದರೆ ಕೆಲವೊಂದು ಅಡ್ವೈಸರಿ ಬೋರ್ಡ್‌ಗಳಲ್ಲಿ ಮೂರು ತಿಂಗಳಿಗೊಂದು ಸಲ ಮೀಟಿಂಗ್ ಕರೆಯುತ್ತಾರೆ. ಕರೆದರೆ ಕರೆಯುತ್ತಾರೆ, ಕರೆಯದೇ ಇದ್ದರೆ ಕರೆಯುವುದಿಲ್ಲ. ಆ ಮೀಟಿಂಗ್ ನಡೆಯಲು ತಾವು ಒಂದು ಡೇಟ್ ನಿಗದಿ ಮಾಡಿ. ಪ್ರತಿ ತಿಂಗಳು ಸೆಕೆಂಡ್ ಸಾಟರ್‌ಡೇ ಅಥವಾ 5ನೇ ತಾರೀಖು ಯಾವುದಾದರೂ ಆಗಬಹುದು. ಈಗ ನಾವು ಇಪ್ಪತ್ತು ಅಂಶಗಳ ಆರ್ಥಿಕ ಕಾರ್ಯಕ್ರಮಗಳ ಪರಿಶೀಲನೆಗಾಗಿ ಪ್ರತಿ ತಿಂಗಳು ಅಥವಾ ಪ್ರತಿ ಮೂರು ತಿಂಗಳಿಗೆ 5ನೇ ತಾರೀಖು ಮೀಟಿಂಗ್ ನಡೆಯಬೇಕೆಂದು ಫಿಕ್ಸ್ ಮಾಡಿದ್ದೇವೆ. 5ನೇ ತಾರೀಖು ರಜಾದಿನವಾದರೆ ಮರು ದಿನ ಮೀಟಿಂಗ್ ನಡೆಯುತ್ತದೆ. ಇದು ನಾನು ಪ್ರಸ್ತಾಪ ಮಾಡಿದಂತಹ ಮೊದಲನೇ ವಿಷಯ. ಇನ್ನು ಎರಡನೇಯ ವಿಷಯದ ಬಗ್ಗೆ ತಾವು ಉತ್ತರ ಹೇಳಲಿಲ್ಲ. ಅದು ಯಾವುದು ಎಂದರೆ Section 3 Sub-Clause(b)ನಲ್ಲಿ ಆಯೋಗಕ್ಕೆ ಸದಸ್ಯರ ನಾಮಿನೇಟ್ ಮಾಡಲು ಅವರಿಗೆ ಕೆಲವೊಂದು ಅರ್ಹತೆಗಳಿರಬೇಕೆಂದು ಷರತ್ತನ್ನು ಹಾಕಿದ್ದೀರಿ. ಬಹುಶಃ ಈ ಬಗ್ಗೆ ಮಾನ್ಯ ನಾಣಯ್ಯನವರು ಉತ್ತರಿಸುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಇದರಲ್ಲಿ ಆಯೋಗದ ನಾಮಕರಣ

ಸದಸ್ಯರಾಗಲು ನಿರ್ಧಿಷ್ಟವಾದ ಅರ್ಹತೆಗಳಿರಬೇಕೆಂಬ ಷರತ್ತನ್ನು ಹಾಕಿದ್ದೀರಿ. ಅದು ಏನೆಂದರೆ "Six members to be nominated by the Government from amongst persons of ability, intergrity and standing who have had experience in law or legislation, trade unionism, management of an industry or organisaton committed to"... ಈ ರೀತಿಯಾದ ಷರತ್ತನ್ನು ಹಾಕಿದ್ದೀರಿ. ಅದಕ್ಕೆ ನಾನು ಈ ರೀತಿ ಸಲಹೆ ನೀಡಿದೆ. ಇವೆಲ್ಲಾ ಕ್ವಾಲಿಫಿಕೇಷನ್ ಇದ್ದವರು ನಿಮಗೆ ಬೆಂಗಳೂರಿನ ರೋಟರಿ ಕ್ಲಬ್ ಅಥವಾ ಲಯನ್ಸ್ ಕ್ಲಬ್ ಇಂತಹ ಕಡೆ ಸಿಗುತ್ತಾರೆ. ನೀವು ಅಂತಹವರನ್ನು ಸದಸ್ಯರನ್ನಾಗಿ ತೆಗೆದುಕೊಂಡ ಹಾಗಾಗುತ್ತದೆ. ಒಂದೊಂದು ಡಿವಿಷನ್‌ನಿಂದ ಒಬ್ಬೊಬ್ಬ ಸದಸ್ಯರನ್ನು ನೇಮಕ ಮಾಡಿ ಎಂದು ನಾನು ಸಲಹೆ ನೀಡಿದೆ. ಏಕೆಂದರೆ, ಈ ಕಮಿಷನ್ ಇರುವುದು ಇಡೀ ರಾಜ್ಯಕ್ಕೆ. ನಾಳೆ ಇದರ ಲಾಭವನ್ನು ಪಡೆದುಕೊಳ್ಳ ಬೇಕಾದರೆ, ಇದರಿಂದ ಬೇರೆಯವರಿಗೂ ಸ್ವಲ್ಪ ಅನುಕೂಲವಾಗುತ್ತದೆ. ಇದಕ್ಕೆ ತಾವು ಇದರಲ್ಲಿ ಒಂದು ರಿಲಾಕ್ಸೇಷನ್ ತರಬೇಕಾಗುತ್ತದೆ. ಆ ರಿಲಾಕ್ಸೇಷನ್ ತರಲಿಲ್ಲ ಎಂದರೆ ಈ dynamism, legislation, management experience, industrialist ಈ ಪದಗಳಿಗೆ ಬೆಲೆ ಇಲ್ಲ. ಎಂ.ಎಲ್.ಎ ಆಗಲು ಯಾವುದೇ ರೀತಿಯ ಕ್ವಾಲಿಫಿಕೇಷನ್ ಅಗತ್ಯ ಇಲ್ಲ. ಆದರೆ ಆಯೋಗದ ಸದಸ್ಯರಾಗಲು ತಾವು ಇಷ್ಟೆಲ್ಲಾ ಕ್ವಾಲಿಫಿಕೇಷನ್ ಆಗಬೇಕೆಂದು ಮಾಡಿದ್ದೀರಿ. ಹಿಂದುಳಿದ ಭಾಗದಲ್ಲಿ ಇಷ್ಟೆಲ್ಲಾ ಕ್ವಾಲಿಫಿಕೇಷನ್ ಇರುವ ಯಾವ ಹೆಣ್ಣುಮಗಳು ಸಿಗುತ್ತಾರೆ?

ಶ್ರೀ ಎಂ.ಸಿ.ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ಕೆಲವು ತಿದ್ದುಪಡಿಗಳನ್ನು ಅವರು ಸೂಚಿಸಿದ್ದಾರೆ. ಶ್ರೀಮತಿ ಪ್ರಮೀಳರವರು ವ್ಯಾಪಕವಾದ ಕೆಲವು ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ಅದರಲ್ಲೂ ಆಯೋಗದ ಅಧಿಕಾರ ವ್ಯಾಪ್ತಿ ಬಗ್ಗೆ ಹೇಳಿದ್ದಾರೆ. ಶ್ರೀಮಾನ್ ಖರ್ಗೆಯವರು ಈಗಿರತಕ್ಕ ಕಾನೂನು ವ್ಯಾಪ್ತಿಯಲ್ಲಿ ಸರ್ಕಾರ ಆರು ಜನರನ್ನು ನಾಮಕರಣ ಮಾಡುವ ಬಗ್ಗೆ ನಿಗದಿಪಡಿಸಲಾಗಿರುವ ಕ್ವಾಲಿಫಿಕೇಷನ್ ಬಗ್ಗೆ ಹೇಳಿದ್ದಾರೆ. ತಮ್ಮ ಚಿಂತನೆ ಏನೆಂದರೆ ಬಹುಶಃ ಇಂತಹ ಒಂದು ಆಯೋಗವನ್ನು ರಚನೆ ಮಾಡಿದಾಗ ಬೆಂಗಳೂರಿನಲ್ಲಿರತಕ್ಕ socialists ಮಾತ್ರ ಇದರಲ್ಲಿ ಸೇರಿಕೊಳ್ಳುತ್ತಾರೆ. ಮತ್ತು ಇದೊಂದು ಲೆಯನ್ಸ್ ಕ್ಲಬ್ ಇನ್ನರ್ ವೀಲ್ ಎಂದು ಹೇಳತಕ್ಕದ್ದು ಆಗಬಾರದು ಎನ್ನುವುದು ತಮ್ಮ ಚಿಂತನೆಯಾಗಿದೆ. ಆದುದರಿಂದ ವ್ಯಾಪಕವಾಗಿ ಒಂದೊಂದು ಡಿವಿಷನ್‌ಗೆ ಒಬ್ಬೊಬ್ಬರು ವರ್ಗದಲ್ಲಿ ಯಾರ್ಯಾರು ಈ ವಿಷಯದಲ್ಲಿ ಪರಿಣಿತರು ಇರುತ್ತಾರೋ ಅಂತಹವರನ್ನು ನಾಮಿನೇಟ್ ಮಾಡಿಕೊಳ್ಳುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಾವು ಹೇಳುತ್ತಿದ್ದೀರಿ. ನಿಮ್ಮ ಸಲಹೆಯನ್ನು ನಾವು ಸ್ವೀಕಾರ ಮಾಡುತ್ತೇವೆ. ಈ ಆಯೋಗಕ್ಕೆ ರೂಲ್ಸ್ ಫ್ರೇಮ್ ಮಾಡತಕ್ಕ ಸಂದರ್ಭದಲ್ಲಿ ನಾವು ತಮ್ಮ ಸಲಹೆಗಳನ್ನು ಅದರಲ್ಲಿ

ಅಳವಡಿಸಿಕೊಳ್ಳುತ್ತೇವೆ. ಶ್ರೀಮತಿ ಪ್ರಮೀಳಾರವರು ಒಂದು ವಿಚಾರವನ್ನು ಹೇಳಿದರು. ಆಯೋಗದ ಅಧ್ಯಕ್ಷರು ಯಾವ ಸ್ಥಳದಲ್ಲಿ ಬೇಕಾದರೂ ಸಭೆಯನ್ನು ಕರೆಯಬಹುದು. ಅದು ಅಧ್ಯಕ್ಷರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದೆ. ಆದರೆ ಇದು ಆಯೋಗದ ವ್ಯಾಪ್ತಿಗೆ ಬರಬೇಕೇ ಹೊರತು ಆಯೋಗದ ಅಧ್ಯಕ್ಷರ ವ್ಯಾಪ್ತಿಗೆ ಬರಬಾರದು ಎಂಬ ಒಂದು ಸಲಹೆಯನ್ನು ಅವರು ನೀಡಿದ್ದಾರೆ. ಮತ್ತೆ ಇತರ ಸಲಹೆಗಳಲ್ಲಿ ಮುಖ್ಯವಾದುದು ಎಂದರೆ ಆಯೋಗಕ್ಕೆ ಈಗಿರತಕ್ಕ ಅಧಿಕಾರವನ್ನು ಯಾವ ರೀತಿ ಚಲಾಯಿಸುತ್ತಾರೆ ಎಂಬುದು ಹಿರಿಯರಾದ ಮಾನ್ಯ ವೈ.ರಾಮಕೃಷ್ಣರವರು ಆಯೋಗಕ್ಕೆ ಇರುವ ಅಧಿಕಾರವನ್ನು ಚಲಾವಣೆಗೆ ತರಬೇಕಾದರೆ, ಇದರಲ್ಲಿ ವ್ಯಾಪಕವಾದ ಕೆಲವೊಂದು ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಎಂಬ ಮಾತನ್ನು ಹೇಳಿದರು. ಮತ್ತು ಇಲ್ಲಿ ತಂದಿರತಕ್ಕಂತಹ ಮಸೂದೆ ಕೇಂದ್ರ ಸರ್ಕಾರದ ಕಾನೂನಿಗೆ ಅನುಗುಣವಾಗಿಲ್ಲ ಎಂಬ ಮಾತನ್ನು ಹೇಳಿದರು. ಕೇಂದ್ರ ಸರ್ಕಾರದ ಕಾನೂನು ಯಾವುದಿದೆ, ಅದಕ್ಕೆ ಸಂಪೂರ್ಣವಾಗಿ ಅನುಗುಣವಾಗಿ ಇರತಕ್ಕ ಕಾನೂನನ್ನು ನಾವು ಇಲ್ಲಿ ತಂದಿದ್ದೇವೆ. ಆದರೆ ಕೇರಳಾ ಸರ್ಕಾರದಲ್ಲಿ ಇರತಕ್ಕಂಥ ಕಾನೂನು ಯಾವುದು ಇದೆ ಮತ್ತು ಯಾವ ನಿಯಮಾವಳಿಗಳನ್ನು ರಚನೆ ಮಾಡಿದ್ದಾರೆ ಆ ನಿಯಮಾವಳಿಗಳನ್ನು ಕೂಡ ಇವೊತ್ತು ನಾವು ತಂದು, ಬಹುಶಃ ಆ ನಿಯಮಾವಳಿಗಳನ್ನು ನಾವು ರಚನೆ ಮಾಡದೇ ಇರತಕ್ಕಂಥ ಸಂದರ್ಭದಲ್ಲಿ ತಾವು ಹೇಳಿರತಕ್ಕಂಥ ವಿಚಾರಗಳನ್ನು ನಾವು ನಿಯಮಾವಳಿಗಳಲ್ಲಿ ಅಳಪಡಿಸಿಕೊಂಡು ಬಹುಶಃ ಇದನ್ನು ಹೆಚ್ಚು ಪರಿಪಕ್ವವಾಗಿ ಜರುಗಿಸಲು ನಾವು ಕ್ರಮ ಕೈಗೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ನಾವು ಇದನ್ನು ಈಗ ಶುರು ಮಾಡಿದ್ದೇವೆ. ಮಾನ್ಯ ಸಭಾಧ್ಯಕ್ಷರೇ ಕೆಲಸ ಶುರುವಾದ ಮೇಲೆ ಬೈ ಎಕ್ಸಪೀರಿಯನ್ಸ್ ಯಾವುದನ್ನು ನಾವು ಮಾಡಬೇಕು ಎಂದು ಇದ್ದೇವೆ ಮತ್ತು ಕಮಿಷನ್‌ಗಳು ಆಗಿಂದ್ದಾಗೆ ನೀಡತಕ್ಕ ಸಲಹೆ ಅದರಲ್ಲಿ ಬರತಕ್ಕ ಎಡರುತೊಡರುಗಳ ಬಗ್ಗೆ ನಮಗೆ ತಿಳಿಸಿದ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ಬಂದರೆ ಸರ್ಕಾರದವರು ಇದರ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ. ಮತ್ತು ನಿಯಮಾವಳಿಗಳನ್ನು ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ. ಆದರೆ ಅಲ್ಲಿ ಆ ಕಮೀಷನ್ ಆಯೋಗದವರು ಸಮಗ್ರವಾದ ಚಿಂತನೆಯನ್ನು ಮಾಡಿ ಯಾವ ಯಾವ ನಿಯಮಾವಳಿಗಳನ್ನು ರಚಿಸಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಾರೊ ಅಂತಹ ಶಿಫಾರಸ್ಸುಗಳನ್ನು ನಾವು ನಿಯಮಾವಳಿಗಳಿಗೆ ಅಳವಡಿಸಿಕೊಂಡು ಮಾಡತಕ್ಕಂಥ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳುತ್ತೇವೆ. ನಾವು ಹೇಗೂ ಇದನ್ನು ಶುರು ಮಾಡಿದ್ದೇವೆ. ಶುರು ಮಾಡುವ ದಿನದಿಂದ ಒಂದು ವರ್ಷದೊಳಗೆ ಈ ಒಂದು ಆಯೋಗ ಯಾವ ರೀತಿ ಕೆಲಸವನ್ನು ಮಾಡುತ್ತದೆ ಎಂದು ನೋಡಿ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಇರತಕ್ಕಂಥ ಕಾನೂನುಗಳನ್ನು ಮತ್ತು ನಿಯಮಾವಳಿಗಳನ್ನು ತಂದು ಇದನ್ನು ಈ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಸಮಗ್ರ ಮಹಿಳೆಯರ ಕಲ್ಯಾಣಕ್ಕಾಗಿ,

ಮಹಿಳೆಯರ ಪ್ರತಿಯೊಂದು ಹಂತದಲ್ಲಿ ಮಹಿಳೆಯರ ಹೋಲ್‌ಸೇಲ್ ಡೆವಲಪ್‌ಮೆಂಟ್ ಮತ್ತು ಮಹಿಳೆಯರ ಹೋಲ್‌ಸಮ್ ಡೆವಲಪ್‌ಮೆಂಟ್ ಮಾಡುವುದಕ್ಕೋಸ್ಕರ ಈ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ತಾವು ನೀಡಿರತಕ್ಕ ಎಲ್ಲಾ ಸಲಹೆಗಳನ್ನು ಸ್ವೀಕಾರ ಮಾಡಿ ಮುಂದೆ ಬರತಕ್ಕ ದಿನಗಳಲ್ಲಿ ತಿದ್ದುಪಡಿಗಳನ್ನು ತರುವುದರ ಮೂಲಕ ಸರ್ಕಾರ ಕಾರ್ಯಕ್ರಮ ಕೈಗೊಳ್ಳುತ್ತದೆ ಎಂಬ ಭರವಸೆಯನ್ನು ಕೊಡುತ್ತದೆ.

6.40.ಪಿ.ಎಂ

ಶ್ರೀಮತಿ ಬಿ.ಟಿ.ಲಲಿತಾ ನಾಯಕ್ : ಸನ್ಮಾನ್ಯ ಕಾನೂನು ಸಚಿವರು ಎಲ್ಲವನ್ನೂ ಹೇಳಿರುವುದರಿಂದ ನಾನು ಎರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಈ ಎಲ್ಲಾ ಸವಲತ್ತುಗಳು ಮೇಲ್‌ವರ್ಗದವರಿಗೆ ಹೋಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಗ್ರಾಮೀಣ ಮಹಿಳೆಯರಿಗೆ ಇದರ ಪ್ರಯೋಜನ ಸಿಕ್ಕುವುದಿಲ್ಲ ಎಂದು ಸಹ ಹೇಳಿದ್ದಾರೆ. ಕೆಲವು ದಿನ ಇದು ಹೀಗೆ ಆಗುತ್ತದೆ. ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಅರಿವು ಬರತಕ್ಕ ದಿನಗಳವರೆಗೆ ಈ ರೀತಿ ಆಗುತ್ತದೆ. ನಾನು ಲಂಬಾಣಿ ಮಹಿಳೆಯಾಗಿ ಗ್ರಾಮೀಣ ಪ್ರದೇಶದಿಂದ ಬಂದಿದ್ದೇನೆ. ಹಿಂದೆ ನನಗೆ ಏನೂ ಗೊತ್ತಿರಲಿಲ್ಲ. ನಂತರ ಇಲ್ಲಿಗೆ ಬಂದ ಮೇಲೆ ಎಲ್ಲವನ್ನೂ ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಆಯೋಗದ ಲಾಭವನ್ನು ಗ್ರಾಮೀಣ ಮಹಿಳೆಯರು ಪಡೆಯಲು ಸ್ವಲ್ಪ ದಿನ ಬೇಕಾಗುತ್ತದೆ. ಅವರಿಗೆ ತಿಳುವಳಿಕೆ ಮೂಡುವವರೆಗೆ ಮೇಲ್‌ವರ್ಗದ ಮಹಿಳೆಯರು ಇದರ ಪ್ರಯೋಜನವನ್ನು ಪಡೆದುಕೊಳ್ಳಬಹುದು, ಇದರಲ್ಲಿ ಏನೂ ತಪ್ಪಿಲ್ಲ. ಮಹಿಳೆಯರು ಎರಡನೇ ದರ್ಜೆಯ ಪ್ರಜೆಯಾಗಿದ್ದರಿಂದ ಯಾರಿಗೆ ಸಿಕ್ಕಿದರೂ ಮಹಿಳೆಯರ ಪರವಾಗಿ ಕೆಲಸ ಮಾಡುತ್ತಾರೆ. ಇನ್ನೊಂದು ವಿಷಯ ಬಸ್‌ಗಳಲ್ಲಿ ಮಹಿಳೆಯರಿಗೆ ಸೀಟ್‌ಗಳ ವ್ಯವಸ್ಥೆ ಆಗಬೇಕೆಂದು ಹೇಳಿದ್ದಾರೆ. ಅದು ನಿಜ. ಮೇಲ್‌ವರ್ಗದ ಮತ್ತು ಕೆಳವರ್ಗದ ಮಹಿಳೆಯರಲ್ಲಿ ಭಾಧಿಸತಕ್ಕ ವಿಷಯ ಇದಾಗಿದೆ. ಆದ್ದರಿಂದ ಕಡ್ಡಾಯವಾಗಿ ಸಿಟಿ ಬಸ್‌ಗಳಲ್ಲಿ ಮಹಿಳೆಯರಿಗೆ ಅನುಕೂಲವಾಗಲು ಕ್ರಮಕೈಗೊಳ್ಳುವುದು ಅವಶ್ಯಕವಾಗಿದೆ. ಇದರ ಬಗ್ಗೆ ಈ ಮಹಿಳಾ ಆಯೋಗವು ಖಂಡಿತವಾಗಿ ಪರಿಶೀಲಿಸುತ್ತದೆ. ಇನ್ನು ಪ್ರಾಥಮಿಕ ಶಿಕ್ಷಣದಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ ಕೊಡಬೇಕು ಎಂಬುದರ ಬಗ್ಗೆ ಈಗಾಗಲೇ ಆಲೋಚನೆ ಮಾಡಿದ್ದೇವೆ. ಇದನ್ನು ಖಂಡಿತವಾಗಿ ಈ ಆಯೋಗ ಗುರುತಿಸುತ್ತದೆ. ನಮ್ಮ ಸರ್ಕಾರ ಇದರ ಬಗ್ಗೆ ಹೆಚ್ಚಿನ ಲಕ್ಷ್ಯ ಕೊಡುತ್ತದೆ. ಇವೊತ್ತು ಎಲ್ಲಾ ಮಾನ್ಯ ಸದಸ್ಯರು ಈ ವಿಧೇಯಕವನ್ನು ಸ್ವಾಗತ ಮಾಡಿದ್ದಾರೆ. ಅವರೆಲ್ಲರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

''1995ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು''

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಶ್ರೀ ವಾಟಾಳ್ ನಾಗರಾಜ್ : ನಮ್ಮದು ಏನೂ ವಿರೋಧ ಇಲ್ಲ. ಸರ್ವಸಮ್ಮತವಾಗಿ ಎಂದು ತಾವು ಹೇಳಬಹುದು. ಅವರು ಕೋಪಿಸಿಕೊಂಡು ಉತ್ತರ ಕೊಟ್ಟಿದ್ದಾರೆ.

ಖಂಡ - **2ರಿಂದ 20**

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

''ಖಂಡ ಎರಡರಿಂದ ಇಪ್ಪತ್ತು ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ ಎರಡರಿಂದ ಇಪ್ಪತ್ತು ಎರಡು ಸೇರಿದಂತೆ, ಈ ವಿಧೇಯಕದ ಅಂಗವಾಯಿತು)

ಖಂಡ-1

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

''ಖಂಡ ಒಂದು ಹೆಸರು ಮತ್ತು ಅವತರಣಕ್ಕೆ ಈ ವಿಧೇಯಕ್ಕೆ ಈ ವಿಧೇಯಕದ ಅಂಗವಾಗಿರುತ್ತದೆ''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಖಂಡ ಒಂದು ಹೆಸರು ಮತ್ತು ಅವರತರಣಿಕೆ ವಿಧೇಯಕದ ಅಂಗವಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

''1995ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕವನ್ನು ಅನುಮೋದಿಸಬೇಕೆಂದು ಕೋರುತ್ತೇನೆ''

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

''1995ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕವನ್ನು ಅಂಗೀಕರಿಸುವುದು.''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕ ಅಂಗೀಕರಿಸಲ್ಪಟ್ಟಿತು)

ಶ್ರೀ ವಾಟಾಳ್ ನಾಗರಾಜ್ : ಕರಳು ಬೇನೆ ಬಗ್ಗೆ ನಾವು ಬೆಳಿಗ್ಗೆ ಪ್ರಸ್ತಾಪ ಮಾಡಿದ್ದೇನೆ ಒಂದು ಹೇಳಿಕೆಯನ್ನು ಕೊಡಿಸುತ್ತೀರೆಂದು ತಾವು ಹೇಳಿದ್ದೀರಿ.

ಅಧ್ಯಕ್ಷರು : ಇನ್ನೂ ಒಂದು ವಿಧೇಯಕ ಇದೆ, ಅದಾದನಂತರ ತೆಗೆದುಕೊಳ್ಳೋಣ.